ಸಂಪುಟ : 13 Volume | ಸಂಚಿಕೆ : 217 Issue | ಪುಟಗಳು : 08 Pages | ಭಾನುವಾರ 12 ಅಕ್ಟೋಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಬಳ್ಳಾರಿ | & ಬಾಗಲಕೋಟೆ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ತಿರಸ್ಕಾರಕ್ಕೆ
ತಿರಸ್ಕಾರವೇ ಮದ್ದಲ್ಲ
ಪ್ರೀತಿಯೇ ದಿವ್ಯಾಷಧ
-ಗೌತಮ ಬುದ್ಧ.

8 ಅಲ್ ಹುಸ್ಸೇನಿ ಚಾಣಕ್ಯ ಪ್ರಶಸ್ತಿ ಪ್ರದಾನ | 2. ಗ್ಯಾರಂಟಿ ಯೋಜನೆಗಳ ಕ್ರಾಂತಿ | 4 ನ್ಯಾಯಪೂರ್ಣ ಅಭಿವೃದ್ಧಿಗಾಗಿ ಜಾಥಾ

## ಯುಪಿಎ ಸರ್ಕಾರದಿಂದ ಕೃಷಿ ವಲಯದ ನಿರ್ಲಕ್ಷ್ಯ

# 35,540 ಕೋ.ಕೃಷಿ ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಅ. 11: ದೇಶದಲ್ಲಿ 2004 ರಿಂದ 2014 ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕೃಷಿ ವಲಯವನ್ನು ನಿರ್ಲಕ್ಷಿಸಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಇಂದಿಲ್ಲಿ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ -ಎನ್‌ಡಿಎ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ, ಕಳೆದ 11 ವರ್ಷಗಳಲ್ಲಿ ರೈತರನ್ನು ಬಲಪಡಿಸಲು ಮತ್ತು ಸ್ವಾವಲಂಬಿಗಳನ್ನಾಗಿ ಮಾಡಲು ಹಲವಾರು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಅವರು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ವಿಶೇಷ ಕೃಷಿ ಕಾರ್ಯಕ್ರಮದಲ್ಲಿ ದೇಶದ ಕೃಷಿ ವ್ಯವಸ್ಥೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ಧನ್ ಧಾನ್ಯ ಕೃಷಿ ಯೋಜನೆ ಮತ್ತು ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್‌ಗೆ ಚಾಲನೆ ನೀಡಿದರು. ಈ ಎರಡು ಮಹತ್ವಾಕಾಂಕ್ಷೆಯ ಕೃಷಿ ಯೋಜನೆಗಳಿಗೆ ಒಟ್ಟು 35,440 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಲೋಕನಾಯಕ್ ಜಯಪ್ರಕಾಶ್ ನಾರಾಯಣ್ ಅವರ ಜನ್ಮದಿನೋತ್ಸವದ ಹಿನ್ನಲೆ ಅವರ ಭಾವಚಿತ್ರಕ್ಕೆ ಮೋದಿ ಗೌರವ ಸಲ್ಲಿಸಿದರು. ಬಳಿಕ ಕೃಷಿ ಮೂಲಸೌಕರ್ಯ ನಿಧಿ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ಆಹಾರ ಸಂಸ್ಕರಣಾ ವಲಯಗಳ ಅಡಿಯಲ್ಲಿ ಹಲವು ಯೋಜನೆಗಳನ್ನು ಉದ್ಘಾಟಿಸಿ, ಶಿಲಾನ್ಯಾಸ ಮಾಡಿ ಮಾತನಾಡಿ, ಕಳೆದ ತಿಂಗಳು ಜಾರಿಗೆ ಬಂದ ಜಿಎಸ್‌ಟಿ ಸುಧಾರಣೆ ರೈತರಿಗೆ ವರದಾನವಾಗಿದೆ ಎಂದಿದ್ದಾರೆ.

24,000 ಕೋಟಿ ರೂ. ಮೌಲ್ಯದ ಪ್ರಧಾನ ಮಂತ್ರಿ ಧನ್ ಧಾನ್ಯ ಯೋಜನೆಯು 2030-31 ರವೇಳೆಗೆ ದ್ವಿದಳ ಧಾನ್ಯಗಳ ಕೃಷಿ ಪ್ರದೇಶವನ್ನು 27.5 ಮಿಲಿಯನ್ ಹೆಕ್ಟೇರ್‌ನಿಂದ 31 ಮಿಲಿಯನ್ ಹೆಕ್ಟೇರ್‌ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ. ದ್ವಿದಳ ಧಾನ್ಯಗಳಲ್ಲಿ ಸ್ವಾವಲಂಬನೆ ಸಾಧಿಸಲು ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್ ಪ್ರಾರಂಭಿಸಲಾಗಿದೆ. ಈ ಯೋಜನೆಗೆ 11,440 ಕೋಟಿ ರೂ. ವೆಚ್ಚವಾಗಲಿದೆ.

ಸುಮಾರು 3,650 ಕೋಟಿ ರೂ. ವೆಚ್ಚದಲ್ಲಿ ಕೃಷಿ ಮೂಲಸೌಕರ್ಯ ನಿಧಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಪಶುಸಂಗೋಪನೆಗಾಗಿ 17 ವಿಭಿನ್ನ ಯೋಜನೆಗಳಿಗೆ ಸುಮಾರು 1,166 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಮೀನುಗಾರಿಕೆ ಮತ್ತು ಆಹಾರ ಸಂಸ್ಕರಣಾ ಕ್ಷೇತ್ರಗಳಲ್ಲಿ 5,450 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಯೋಜನೆಗಳನ್ನು ಅವರು ಉದ್ಘಾಟಿಸಿದರು. ಸುಮಾರು 815 ಕೋಟಿ ರೂ.ಗಳ ಹೆಚ್ಚುವರಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಬೆಂಗಳೂರು ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಕೃತಕ ಗರ್ಭಧಾರಣೆ ತರಬೇತಿ ಕೇಂದ್ರಗಳು, ಅಮ್ರೇಲಿ ಮತ್ತು ಬನಾರಸ್‌ನಲ್ಲಿನ ಶ್ರೇಷ್ಠತಾ ಕೇಂದ್ರಗಳು, ರಾಷ್ಟ್ರೀಯ ಗೋಕುಲ್ ಮಿಷನ್ ಅಡಿಯಲ್ಲಿ ಅಸ್ಸಾಂನಲ್ಲಿ ಐವಿಎಫ್ ಪ್ರಯೋಗಾಲಯ, ಮೆಹ್ಸಾನಾ, ಇಂದೋರ್ ಮತ್ತು ಭಿಲ್ವಾರಾದಲ್ಲಿ ಹಾಲಿನ ಪುಡಿ ಘಟಕಗಳು ಮತ್ತು ತೇಜ್‌ಪುರದಲ್ಲಿ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿಯಲ್ಲಿ ಮೀನು ಆಹಾರ ಘಟಕವನ್ನು ಉದ್ಘಾಟಿಸಿದರು.

ರೈತರಿಗೆ ಮತ್ತು ದೇಶದ ಗ್ರಾಮೀಣ ವಲಯಕ್ಕೆ ಮತ್ತಷ್ಟು ಪ್ರಯೋಜನವಾಗಿದೆ. ರೈತರ ಆದಾಯವನ್ನು ಹೆಚ್ಚಿಸುವ ಮತ್ತು ಅವರ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ಗುರಿಯನ್ನು ತಮ್ಮ ಸರ್ಕಾರ ಹೊಂದಿದೆ ಎಂದು ಅವರು ಹೇಳಿದ್ದಾರೆ.

ಯುಪಿಎ ಸರ್ಕಾರದ 10 ವರ್ಷಗಳಲ್ಲಿ 5 ಲಕ್ಷ ಕೋಟಿ ರೂ. ಸಬ್ಸಿಡಿಗೆ ಹೋಲಿಸಿದರೆ ಎನ್‌ಡಿಎ ಕಳೆದ 10 ವರ್ಷಗಳಲ್ಲಿ ರಸಗೊಬ್ಬರಗಳಿಗೆ 13 ಲಕ್ಷ ಕೋಟಿ ರೂ. ಸಬ್ಸಿಡಿ ನೀಡಿದೆ ಎಂದು ಅವರು ತಿಳಿಸಿದ್ದಾರೆ.

ಕಾಲ ಬದಲಾದಂತೆ ಕೃಷಿಗೆ ಸರ್ಕಾರದ ಬೆಂಬಲ ಸಿಗುವುದು ಬಹಳ ಮುಖ್ಯ. ದುರದೃಷ್ಟವಶಾತ್, ಹಿಂದಿನ ಸರ್ಕಾರಗಳು ಕೃಷಿಯನ್ನು ಕೈಬಿಟ್ಟವು. ಸರ್ಕಾರಕ್ಕೆ ಕೃಷಿಯ ಬಗ್ಗೆ ಯಾವುದೇ ದೃಷ್ಟಿಕೋನ ಅಥವಾ ಚಿಂತನೆ ಇರಲಿಲ್ಲ. ಕೃಷಿಗೆ ಸಂಬಂಧಿಸಿದ ವಿವಿಧ ಸರ್ಕಾರಿ ಇಲಾಖೆಗಳು ತಮ್ಮದೇ ಆದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು, ಇದು ಭಾರತದ ಕೃಷಿ ವ್ಯವಸ್ಥೆಯನ್ನು ನಿರಂತರವಾಗಿ ದುರ್ಬಲಗೊಳಿಸಿದ್ದವು ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ.

ಹಿಂದಿನ ಸರ್ಕಾರಗಳು ಕೃಷಿಯ ಬಗ್ಗೆ ಹೊಂದಿದ್ದ ನಿರ್ಲಕ್ಷ್ಯ ಮನೋಭಾವವನ್ನು ಎನ್ ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬದಲಾಯಿಸಿದ್ದೇವೆ. ಬೀಜಗಳಿಂದ ಮಾರುಕಟ್ಟೆಯವರೆಗೆ ರೈತರ ಅನುಕೂಲಕ್ಕಾಗಿ ಲೆಕ್ಕವಿಲ್ಲದಷ್ಟು ಸುಧಾರಣೆಗಳನ್ನು ಜಾರಿ ಮಾಡಿದ್ದೇವೆ ಎಂದು ತಿಳಿಸಿದ್ದಾರೆ. ದೇಶದ ಕೃಷಿ ರಫ್ತು ಬಹುತೇಕ ದ್ವಿಗುಣಗೊಂಡಿದೆ. ಧಾನ್ಯಗಳು ಮತ್ತು ಹಣ್ಣುಗಳು ಮತ್ತು ತರಕಾರಿಗಳ ಉತ್ಪಾದನೆಯು ಕ್ರಮವಾಗಿ

2ನೇ ಪುಟನೋಡಿ



## ಪ್ರೀತಿಸಿದವನೊಂದಿಗೆ ಮಗಳು ಪರಾರಿ: ತಿಥಿ ಊಟ ಹಾಕಿಸಿದ ತಂದೆ





ಮಲ್ಲಮ್ಮ ನುಡಿ ವಾರ್ತೆ

ಚಿಕ್ಕೋಡಿ:ಅ.11: ಮಗಳು ಪ್ರೀತಿಸಿದಾತನೊಂದಿಗೆ ಓಡಿಹೋಗಿದ್ದರಿಂದ ಮನನೊಂದ ತಂದೆ ಊರಿಗೆ ಊಟ ಹಾಕಿಸಿ, ತಿಥಿ ಕಾರ್ಯ ನೆರವೇರಿಸಿರುವ ಘಟನೆ ಬೆಳಗಾವಿಯಲ್ಲಿ ನಡೆದಿದೆ. ನಾಗರಾಳ ಗ್ರಾಮದಲ್ಲಿ ಹೆತ್ತ ಮಗಳಿಗೆ ಶ್ರಾದ್ಧ ಮಾಡಿ, ಕರುಳಬಳ್ಳಿ ಸಂಬಂಧವನ್ನ ತಂದೆ ಕತ್ತರಿಸಿಕೊಂಡಿದ್ದಾರೆ. ಶಿವಗೌಡ ಪಾಟೀಲ್ ಎಂಬವರಿಗೆ ನಾಲ್ಕು ಹೆಣ್ಣುಮಕ್ಕಳಿದ್ದರು. ಕೊನೆಯ ಮಗಳು, ಅದೇ ಗ್ರಾಮದ ಯುವಕನನ್ನು ಪ್ರೀತಿಸಿ ಆತನೊಂದಿಗೆ ಓಡಿಹೋಗಿದ್ದಳು.

ಮೊದಲಿಗೆ ಶಿವಗೌಡ ಅವರು ಮಗಳು ಕಾಣೆಯಾಗಿದ್ದಾಳೆ ಎಂದು ರಾಯಭಾಗ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಮಗಳು ಓಡಿಹೋಗಿದ್ದಾಳೆ ಎಂಬ ವಿಚಾರ ತಿಳಿದ ತಂದೆ ಮನನೊಂದಿದ್ದರು. ಬಳಿಕ ನನ್ನ ಮಗಳು ನಮ್ಮ ಪಾಲಿಗೆ ಸತ್ತಳೆಂದು, ಬಂಧು-ಬಳಗ ಸೇರಿದಂತೆ ಸಂಬಂಧಿಕರನ್ನು ಕರೆಯಿಸಿ ಭೋಜನ ಹಾಕಿಸಿ, ಆಕೆಯ ತಿಥಿ ಕಾರ್ಯವನ್ನ ಮಾಡಿ ಮುಗಿಸಿದ್ದಾರೆ.

## ನವೆಂಬರ್ ಕ್ರಾಂತಿ ಮಾಧ್ಯಮ ಸೃಷ್ಟಿ:ಡಾ.ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ,11: ನವೆಂಬರ್ ತಿಂಗಳು ರಾಜ್ಯ ಸರ್ಕಾರದಲ್ಲಿ ಕ್ರಾಂತಿ ಆಗಲಿದೆ ಎಂಬುದು ಕೇವಲ ಮಾಧ್ಯಮ ಸೃಷ್ಟಿ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ನುಡಿದರು.

ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಾಧ್ಯಮದವರು ಯಾರೋ ಹೋಗುವವರನ್ನು ನಿಲ್ಲಿಸಿ ಪ್ರಶ್ನೆ ಕೇಳಿದಾಗ ಬಂದ ಪ್ರತಿಕ್ರಿಯೆಗಳ ಕಾರಣಕ್ಕೆ ನವೆಂಬರ್ ಕ್ರಾಂತಿ ಆಗುವುದಿಲ್ಲ ಎಂದರು. ಸಚಿವ ಸಂಪುಟ ಬದಲಾವಣೆ ಎಂಬುದು ಮುಖ್ಯಮಂತ್ರಿಗಳಿಗೆ ಬಿಟ್ಟ ನಿರ್ಧಾರವಾಗಿದ್ದು, ಪಕ್ಷದ ಹೈಕಮಾಂಡ್ ಹಾಗೂ ಸಿಎಂ ಯಾವ ತೀರ್ಮಾನ ಮಾಡುತ್ತಾರೋ ಅದೇ ಅಂತಿಮ ಎನಿಸಿಕೊಳ್ಳುತ್ತದೆ. ಅದನ್ನು ಬಿಟ್ಟರೆ ತಮ್ಮ ಬಳಿ ಬೇರೇನೂ ಸದ್ಯಕ್ಕೆ ಯಾವುದೇ ಮಾಹಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿಗಳಿಂದ ಎಂದ ಮೇಲೆ ಪ್ರತಿ ತಿಂಗಳಿಗೊಮ್ಮೆ ಅವರ ನಿವಾಸದಲ್ಲಿ ಔತಣಕೂಟ ಇರುತ್ತದೆ. ಔತಣಕೂಟಕ್ಕೂ ಸಂಪುಟಕ್ಕೂ ಯಾವುದೆ ಸಂಬಂಧ ಇಲ್ಲ ಎಂದು ಪುನರುಚ್ಚರಿಸಿದರು.

**ಇಂದಿರಾ ಕಿಟ್‌ನಲ್ಲಿ ಎರಡು ಕಿ.ಗ್ರಾಂ ತೊಗರಿ ಬೇಳೆ:**

ಅನ್ನಭಾಗ್ಯ ಯೋಜನೆಯಡಿ ಇಂದಿರಾ ಕಿಟ್‌ನಲ್ಲಿ ಎರಡು ಕಿ.ಗ್ರಾಂ ತೊಗರಿ ಬೇಳೆ ವಿತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು. ರಾಜ್ಯದಲ್ಲಿ ಒಂದು ಕೋಟಿಗೂ ಅಧಿಕ ಬಿಪಿಲ್ ಕಾರ್ಡುಗಳಿವೆ. ಇದರಿಂದಾಗಿ ರಾಜ್ಯದ ತೊಗರಿ ಬೆಳೆಯುವ ರೈತರಿಗೆ ಲಾಭ ಆಗಲಿದೆ ಎಂದರು. ಇಂದಿರಾ ಕಿಟ್‌ನಲ್ಲಿ ರಾಜ್ಯಾದ್ಯಂತ ತೊಗರಿ ಬೇಳೆ ವಿತರಣೆ ಮಾಡಲಾಗುತ್ತಿದೆ. ನಮ್ಮ ಭಾಗದಲ್ಲಿ ಬೆಳೆಯುವ ತೊಗರಿಯಲ್ಲಿ ಪ್ರೋಟೀನ್ ಅಂಶ ಜಾಸ್ತಿಯಿದ್ದು, ಸದೃಢ ಆರೋಗ್ಯಕ್ಕೆ ಇದರಿಂದ ಅನುಕೂಲ ಆಗಲಿದೆ. ಕೆಲವೇ ದಿನಗಳಲ್ಲಿ ತೊಗರಿ ಖರೀದಿಗೆ ಟೆಂಡರ್ ಕರೆದು, ಬೆಲೆ ನಿಗದಿಪಡಿಸಿ, ವಿತರಣೆ ಮಾಡಲಾಗುವುದು ಎಂದು ತಿಳಿಸಿದರು. ಈ ಹಿಂದೆ ನಮ್ಮ ಸರಕಾರ ಇದ್ದಾಗ ಒಂದು ಕಿ.ಗ್ರಾಂ. ತೊಗರಿ ನೀಡಲಾಗುತ್ತಿತ್ತು.

2ನೇ ಪುಟನೋಡಿ

## ಕೊಂಡಿ ಮುರಿದು 80 ಸಾವಿರ ರೂ.ನಗದು ಕಳ್ಳತನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.11: ಮನೆಯ ಮೇನ್ ಡೋರ್ ಕೊಂಡಿ ಮುರಿದು ಅಲಮಾರಿಯಲ್ಲಿಟ್ಟಿದ್ದ 80 ಸಾವಿರ ರೂಪಾಯಿ ನಗದು ಹಣ ಕಳವು ಮಾಡಿರುವ ಘಟನೆ ನಗರದ ಬಿದ್ದಾಪುರ ಕಾಲೋನಿಯಲ್ಲಿ ನಡೆದಿದೆ.

ಅಫಜಲಪುರ ತಾಲ್ಲೂಕಿನ ಅತನೂರ ಗ್ರಾಮದ ಪಿಡಿಒ ಆಗಿರುವ ಅನುಸೂಯಾ ಆನಂದ ರದ್ದೇವಾಡಿ ಎಂಬುವವರ ಮನೆ ಮೇನ್ ಡೋರ್ ಕೊಂಡಿ ಮುರಿದು ಕಳ್ಳರು ಹಣ ದೋಚಿಕೊಂಡು ಹೋಗಿದ್ದು, ಅವರು ಈ ಸಂಬಂಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

## ಸಿಎಂ ಆಗಲು ನನಗೆ ಆತುರವಿಲ್ಲ: ಡಿಕೆಶಿ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಅ.11-ನಾನು ಮುಖ್ಯಮಂತ್ರಿ ಆಗುವ ಕಾಲ ಬಂದಿದೆ ಎಂದು ಎಲ್ಲೂ ಹೇಳಿಲ್ಲ. ನನ್ನ ಹೇಳಿಕೆಯನ್ನು ತಿರುಚಿ, ವಿವಾದ ಸೃಷ್ಟಿಸಲಾಗುತ್ತಿದೆ ಅಷ್ಟೇ. ನಾನು ಮುಖ್ಯಮಂತ್ರಿ ಹುದ್ದೆ ಅಲಂಕರಿಸಲು ಆತುರದಲ್ಲಿ ಇಲ್ಲ. ನನಗೆ ನನ್ನ ಗುರಿ ಗೊತ್ತಿದೆ. ಭಗವಂತೆ ಯಾವಾಗ ಅವಕಾಶ ಕೊಡುತ್ತಾನೋ ಕೊಡಲಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನಕ್ಕೆ ಇಂದು ಭೇಟಿ ನೀಡಿ ವಾಯು ವಿಹಾರಿಗಳ ಜತೆ 'ಬೆಂಗಳೂರು ನಡಿಗೆ' ಕಾರ್ಯಕ್ರಮದಲ್ಲಿ ಭಾಗಿಯಾಗಿ ಅವರ ದೂರು ದುಮ್ಮಾನಗಳನ್ನು ಆಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಸಿಎಂ ಆಗುವ ಕಾಲ ಹತ್ತಿರ ಬಂದಿದೆ ಎಂದು ನಾನು ಹೇಳಿರುವುದಾಗಿ ಕೆಲ ಮಾಧ್ಯಮಗಳು ಪ್ರಸಾರ ಮಾಡುತ್ತಿವೆ. ನಾನು ಆ ರೀತಿ ಎಲ್ಲೂ ಹೇಳಿಲ್ಲ. ನನ್ನ ಹೇಳಿಕೆಯನ್ನು ತಿರುಚಲಾಗುತ್ತಿದೆ. ಸುದ್ದಿ ತಿರುಚಿ ಪ್ರಸಾರ ಮಾಡಿದರೆ ಮಾನನಷ್ಟ ಮೊಕದ್ದಮೆ ಹೂಡುವುದು ಅನಿವಾರ್ಯ ಎಂದು ಗರಂ ಆಗಿ ಹೇಳಿದರು.

ನಾನು ಇಂದು ಲಾಲ್‌ಬಾಗ್‌ಗೆ ಬಂದಾಗ ಕೆಲ 2ನೇ ಪುಟನೋಡಿ

## ಚೀನಾಗೆ ಶೇ.100ರಷ್ಟು ಸುಂಕ :ನ.1 ರಿಂದ ಜಾರಿ




ಮಲ್ಲಮ್ಮ ನುಡಿ ವಾರ್ತೆ

ವಾಷಿಂಗ್ಟನ್,ಅ.11- ಚೀನಾದಿಂದ ಅಮೆರಿಕಾಕ್ಕೆ ಆಮದು ಮಾಡಿಕೊಳ್ಳುವ ವಿವಿಧ ಉತ್ಪನ್ನಗಳ ಮೇಲೆ ನವೆಂಬರ್ 1 ರಿಂದ ಅನ್ವಯವಾಗುವಂತೆ ಹೆಚ್ಚುವರಿಯಾಗಿ ಶೇಕಡಾ 100 ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಬೆದರಿಕೆ ಹಾಕಿದ್ದಾರೆ.

ಈಗಾಗಲೇ ಚೀನಾದಿಂದ ಅಮೆರಿಕಾಕ್ಕೆ ಬರುವ ವಿವಿಧ ಉತ್ಪನ್ನಗಳ ಮೇಲೆ ಸುಂಕಾಸ್ತ್ರ ವಿಧಿಸಿರುವ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದೀಗ ನಿರ್ಣಾಯಕ ಸಾಫ್ಟ್‌ವೇರ್ ಉತ್ಪನ್ನಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಘೋಷಿಸಿದ್ದಾರೆ. ಈ ಮೂಲಕ ಮತ್ತೊಮ್ಮೆ ಚೀನಾ ವಿರುದ್ಧ ವ್ಯಾಪಾರ ಯುದ್ಧ ಸಾರಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಡೊನಾಲ್ಡ್ ಟ್ರಂಪ್, ಚೀನಾದ ಉತ್ಪನ್ನಗಳ ಮೇಲೆ ಈಗ ವಿಧಿಸುತ್ತಿರುವ ಸುಂಕದ ಜೊತೆಗೆ ಹೆಚ್ಚುವರಿಯಾಗಿ ಶೇಕಡಾ 100 ರಷ್ಟು ತೆರಿಗೆ ವಿಧಿಸುವುದಾಗಿ ತಿಳಿಸಿದ್ದಾರೆ. ಜೊತೆಗೆ ವ್ಯಾಪಾರ ವಹಿವಾಟು ಸಂಬಂಧ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗಿನ ಸಭೆಯಿಂದ ಹೊರಗುಳಿಯುವುದಾಗಿ ತಿಳಿಸಿದ ಅವರು ಅಮೆರಿಕಾದ ಹಿತ ಕಾಪಾಡುವ ನಿಟ್ಟಿನಲ್ಲಿ ಹೆಚ್ಚಿನ ತೆರಿಗೆ ವಿಧಿಸಲಾಗುವುದು ಎಂದು ಹೇಳಿದ್ದಾರೆ. 2ನೇ ಪುಟನೋಡಿ

## ಮತಗಳ್ಳತನ:ಸಹಿಸಂಗ್ರಹ ಅಭಿಯಾನ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ :ಅ.11: ದೇಶದಲ್ಲಿ ಬಿಜೆಪಿ ಹಾಗೂ ಚುನಾವಣಾ ಆಯೋಗಗಳು ಶಾಮೀಲಾಗಿ ಮತಕಳ್ಳತನದಲ್ಲಿ ತೊಡಗಿವೆ ಎಂದು ಎಐಸಿಸಿ ನಾಯಕ ರಾಹುಲ್ ಗಾಂಧಿ ಗಂಭೀರ ಆರೋಪದ ನಂತರ ದೇಶಾದ್ಯಂತ ನಡೆಯುತ್ತಿರುವ ಸಹಿ ಸಂಗ್ರಹ ಅಭಿಯಾನಕ್ಕೆ ಹುಮನಾಬಾದ್ ಪಟ್ಟಣದಲ್ಲಿ ಉತ್ತಮ ಸ್ಪಂದನೆ ಸಿಕ್ಕಿದೆ. ಈ ಹಿನ್ನಲೆ ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್‌ನಿಂದ ಸಹಿ ಸಂಗ್ರಹ ಅಭಿಯಾನ ನಡೆಸಿತು. ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ಮತಗಳ್ಳತನ ಮಾಡುವ ಮೂಲಕ ಬಿಜೆಪಿ ಅಧಿಕಾರ ಹಿಡಿಯುತ್ತಿದೆ. ಮತದಾರರ ಪಟ್ಟಿಯಲ್ಲಿ ಸುಳ್ಳು ಹೆಸರು ಇರುವುದನ್ನು ಕಾಂಗ್ರೆಸ್ ಸಾಕ್ಷ್ಯ ಸಮೇತ ಜನರ ಮುಂದಿಟ್ಟಿದೆ.

ಒಬ್ಬ ಮತದಾರ ಹಲವು ಕ್ಷೇತ್ರಗಳಲ್ಲಿ ಮತ ಚಲಾವಣೆ ಮಾಡಿರುವುದು ಪತ್ತೆಯಾಗಿದೆ. ಇದರ ವೀಡಿಯೊ ದಾಖಲೆಗಳನ್ನು ಬಿಡುಗಡೆ ಮಾಡಲು ಚುನಾವಣಾ ಆಯೋಗ ಮೀನಾಮೇಷ ಎಣಿಸುತ್ತಿದೆ ಎಂದು ತಿಳಿಸಿದರು. 2ನೇ ಪುಟನೋಡಿ

## 150 ಕೋಟಿ ಎಗರಿಸಿದ್ದ ಸೈಬರ್ ವಂಚಕ ಅರೆಸ್ಟ್



ಮಲ್ಲಮ್ಮ ನುಡಿ ವಾರ್ತೆ


ದಾವಣಗೆರೆ: ಅ.11:ದೇಶದ ವಿವಿಧ ಭಾಗಗಳ ಜನರ ಬ್ಯಾಂಕ್ ಖಾತೆಯಿಂದ ಹಣ ಕಳ್ಳತನ ಮಾಡುತ್ತಿದ್ದ ಸೈಬರ್ ವಂಚಕನನ್ನು ದಾವಣಗೆರೆ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಯ ಖಾತೆಯ ಕೋಟಿ ಕೋಟಿ ವಹಿವಾಟು ನೋಡಿ ಪೊಲೀಸರೇ ಆಶ್ಚರ್ಯಪಟ್ಟಿದ್ದಾರೆ.

ಬಂಧಿತನನ್ನು ಪ್ರಕರಣದ ಎರಡನೇ ಆರೋಪಿ ಸೈಯದ್ ಅರ್ಫಾತ್ (28) ಎಂದು ಗುರುತಿಸಲಾಗಿದೆ. ಈತ ಹಾಸನ ಜಿಲ್ಲೆಯ ಬೇಲೂರು ಟೌನ್ ಶಾಂತಿನಗರ ನಿವಾಸಿಯಾಗಿದ್ದು, ಸಿಸಿಟಿವಿ ಕೆಲಸ ಮಾಡಿಕೊಂಡಿದ್ದ. ಇನ್ನೂ ತಲೆ ಮರೆಸಿಕೊಂಡಿರುವ ಇಬ್ಬರು ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಆರೋಪಿಯ ಮೊಬೈಲ್ ವಶಪಡಿಸಿಕೊಂಡು ಪರಿಶೀಲನೆ ನಡೆಸಿದಾಗ ಆಘಾತಕಾರಿ ಮಾಹಿತಿ ಬೆಳಕಿಗೆ ಬಂದಿದೆ. ಆರೋಪಿತರ ಖಾತೆಯಲ್ಲಿ ಜುಲೈ 27 ರಿಂದ ಆಗಸ್ಟ್ 19 ರವರೆಗೆ ಸುಮಾರು 150 ಕೋಟಿ ರೂ. ಆನ್‌ಲೈನ್ ವಂಚನೆಯ ಹಣ ಜಮೆಯಾಗಿದೆ. ಆರೋಪಿಗಳು 132 ಕೋಟಿ ರೂ. ಹಣ ವಿತ್ ಡ್ರಾ. ಮಾಡಿದ್ದು, ಖಾತೆಯಲ್ಲಿ 18 ಕೋಟಿ ರೂ. ಹಾಗೆ ಇದೆ. ಆ ಖಾತೆಗಳನ್ನು ಪೊಲೀಸರು ಫ್ರೀಜ್ ಮಾಡಿದ್ದಾರೆ.

ಆರೋಪಿಗಳು ದಾವಣಗೆರೆ ನಗರದ ನಿಟ್ಟುವಳ್ಳಿ ಕೆನರಾ ಬ್ಯಾಂಕ್ ಖಾತೆಯಿಂದ ಪ್ರಮೋದ್ ಎಂಬುವರ 52,60, 523 ರೂ.ಹಣವನ್ನು ಎಗರಿಸಿದ್ದರು. ಈ ಸಂಬಂಧ ದಾವಣಗೆರೆ ಸೈಬರ್ ಕ್ರೈಮ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದರು. 2ನೇ ಪುಟನೋಡಿ

## ಜಿಎಸ್‌ಟಿ ಇಳಿಕೆಯಿಂದ ನವಭಾರತದ ಸುಧಾರಣೆ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಅ.11: ನವಭಾರತದ ಜಿಎಸ್‌ಟಿ ಸುಧಾರಣೆಗಳ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಘೋಷಣೆ ಮಾಡಿದಂತೆ ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಜಾರಿಗೆ ತಂದಿದ್ದಾರೆ ಎಂದು ಖ್ಯಾತ ಆರ್ಥಿಕ ತಜ್ಞ ಕೆ.ವಿಶ್ವನಾಥ ಭಟ್ ತಿಳಿಸಿದರು.

ಶನಿವಾರ ನಗರದ ಎನ್ ವಿಎಂ ಹೋಟೆಲ್ ಸಭಾಂಗಣದಲ್ಲಿ ಜಿಲ್ಲಾ ಬಿಜೆಪಿಯಿಂದ ಆಯೋಜಿಸಿದ್ದ ಜಿಎಸ್ ಟಿ ತೆರಿಗೆ ಇಳಿಕೆ ಕುರಿತ ವಿಚಾರಸಂಕೀರಣದಲ್ಲಿ ಉಪನ್ಯಾಸ ನೀಡಿ, ಒಟ್ಟು ನಾಲ್ಕು ಸ್ಲ್ಯಾಬ್‌ಗಳಲ್ಲಿ ಜಿಎಸ್‌ಟಿಯನ್ನು ಇಳಿಕೆ ಮಾಡಲಾಗಿದೆ. 10,12 ಮತ್ತು ಶೇ.18 ರಲ್ಲಿ ಅತೀ ಹೆಚ್ಚು ಜಿಎಸ್‌ಟಿ ಕಡಿತಗೊಳಿಸಲಾಗಿದ್ದು, ದೇಶದ 145 ಕೋಟಿ ಜನತೆಗೆ ಅನುಕೂಲವಾಗಲಿದೆ ಎಂದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳ ಇತಿಹಾಸದಲ್ಲೇ ಇಷ್ಟೊಂದು ದೊಡ್ಡಮಟ್ಟದ ಜಿಎಸ್‌ಟಿ ಕ್ರಾಂತಿಯಾಗಿದ್ದು, ಮೋದಿ ಸರ್ಕಾರ ದೇಶದ ಜನರ ಬಗ್ಗೆ ತನಗಿರುವ ತನ್ನ ಬದ್ಧತೆಯನ್ನು ತೋರಿಸಿದೆ. ಕೇಂದ್ರದಲ್ಲಿನ ಬಿಜೆಪಿ ಸರ್ಕಾರ ಸತತ 11 ವರ್ಷಗಳ ನಿರಂತರ ಅಧ್ಯಯನದಿಂದ ಜಿಎಸ್‌ಟಿಯ ಬಗ್ಗೆ ರಚನಾತ್ಮಕ ಹೆಜ್ಜೆ ಇರಿಸಿದೆ ಎಂದು ವಿವರಿಸಿದರು. ಜನರ ಬಳಿ ಉಳಿತಾಯ ಹೆಚ್ಚಾದಾಗ ಮಾರುಕಟ್ಟೆಯಲ್ಲಿ ಉತ್ಪಾದನೆ ಹೆಚ್ಚಾಗುತ್ತದೆ. ಇದರ ಜತೆಗೆ ತೆರಿಗೆ ಸಂಗ್ರಹ ದುಪ್ಪಟ್ಟಾಗುತ್ತದೆ. ಇದರಿಂದ ಜಿಎಸ್ ಟಿ ಇಳಿಕೆಯಿಂದ 2ನೇ ಪುಟನೋಡಿ

> ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜಿಎಸ್‌ಟಿ ಇಳಿಕೆಯಿಂದ ದೇಶದ ಆರ್ಥಿಕ ಮಟ್ಟ ಯಾವುದೇ ಕಾರಣಕ್ಕೂ ಕುಸಿದಿಲ್ಲ. ಈ ಇಳಿಕೆಯ ಬಗ್ಗೆ ದೇಶದ ಯಾವುದೇ ರಾಜ್ಯಗಳು ವಿರೋಧಿಸಿಲ್ಲ.
> **ಕೆ.ವಿಶ್ವನಾಥ ಭಟ್ ಖ್ಯಾತ ಆರ್ಥಿಕ ತಜ್ಞ.**

## ಋತುಚಕ್ರ ರಜೆ ನೀತಿ ಶೀಘ್ರ ನಿಯಮ : ಸಂತೋಷ್ ಲಾಡ್



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಋತುಚಕ್ರ ರಜೆಯನ್ನು ಸಂಬಂಧಿಸಿದ ಕಂಪನಿಗಳು ಮಹಿಳಾ ಉದ್ಯೋಗಿಗಳಿಗೆ ನೀಡಬೇಕು. ಈ ಸಂಬಂಧ ನಿಯಮ ರೂಪಿಸಲಾಗುವುದು. ಸರ್ಕಾರ ಕಾನೂನು ಮಾಡಿದ್ರೆ, ಕಂಪನಿಗಳು ಪಾಲನೆ ಮಾಡಲೇಬೇಕು ಎಂದು ಎಂದು ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಲಾಡ್ ಅವರು ಹೇಳಿದರು.

ಋತುಚಕ್ರ ರಜೆ ನೀತಿ ಜಾರಿಗೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಅಧಿಕೃತ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಅವರು ಮಾತನಾಡಿದ ಅವರು, ಸರ್ಕಾರದ ಕಾನೂನನ್ನು ಎಲ್ಲರೂ ಅನುಷ್ಠಾನ ಮಾಡಬೇಕು, ಪಾಲಿಸಲೇಬೇಕು. ಇದನ್ನು ಕೇವಲ ಒಂದು ಕಾನೂನು ಎಂಬ ದೃಷ್ಟಿಯಲ್ಲಿ ನೋಡದೇ ಮಾನವೀಯ ದೃಷ್ಟಿಯಿಂದಲೂ ಕಂಪನಿಗಳು ನೋಡಬೇಕು. ಈ ರಜೆ ನೀತಿ ಜಾರಿ ಸಂಬಂಧ ಸ್ವಲ್ಪ ದಿನದಲ್ಲಿ ಇನ್ನಷ್ಟು ಚರ್ಚೆ ಮಾಡಲಾಗುವುದು. ಸಮಾಲೋಚನೆ ನಡೆಸಲಾಗುವುದು ಎಂದು ಹೇಳಿದರು.

ಋತುಚಕ್ರ ರಜೆ ಕೊಡಬೇಕು ಎಂಬ ಕಾರಣಕ್ಕೆ ಕಂಪನಿಗಳು ಮಹಿಳಾ ಉದ್ಯೋಗಿಗಳನ್ನು ಕೆಲಸಕ್ಕೆ ಹೆಚ್ಚು ನೇಮಿಸಿಕೊಳ್ಳಲು ಹಿಂದೇಟು ಹಾಕಬಹುದಲ್ವ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಮ್ಮೆ ಜಾರಿ ಜಾರಿ ಮಾಡಿ ಅದರ ಸಾಧಕ ಬಾಧಕ ನೋಡೋಣ. ಹಾಗೆ ನೋಡಿದರೆ ಈ ರಜೆ ನೀತಿಯನ್ನು ಹಲವು ಕಂಪನಿಗಳು ಪಾಲಿಸುತ್ತೀವೆ ಎಂದು ಹೇಳಿದರು. ರಜೆ ನೀತಿ ಜಾರಿ ಸಂಬಂಧ ವಿಧಾನಸಭೆಯಲ್ಲಿ ವಿಧೇಯಕ ಮಂಡಿಸಲಾಗುವುದು. ಇಲ್ಲವೇ ಸುಗ್ರೀವಾಜ್ಞೆ ಮಾಡಲಾಗುವುದು. ಕಂಪನಿಗಳಿಗೆ ಮಹಿಳಾ ಉದ್ಯೋಗಿಗೆ ಋತುಚಕ್ರ ರಜೆ ಕೊಡಬೇಕು ಎಂಬ ಸಾಮಾನ್ಯ ಜ್ಞಾನ, ಸೂಕ್ಷ್ಮತೆ ಇರಬೇಕು. ಹೆಣ್ಣುಮಕ್ಕಳ ಸಮಸ್ಯೆಯನ್ನು ಕಂಪನಿ ಅರ್ಥ ಮಾಡಿಕೊಳ್ಳಬೇಕು. ಹೆಚ್ಚು ರಜೆ ಕೊಟ್ಟರೆ ಸಮಸ್ಯೆಯಾಗುತ್ತದೆ ಎಂಬ ದೂರುಗಳು ಬರತೊಡಗಿದರೆ ಅದನ್ನು ಪರಿಗಣಿಸಿ ಏನು ಮಾಡಬೇಕು ಎಂಬ ಬಗ್ಗೆ ಪರಿಶೀಲಿಸಲಾಗುವುದು ಎಂದು ವಿವರಿಸಿದರು. ಸಮಾಜದಲ್ಲಿ ಹಾಗೂ ಕುಟುಂಬದಲ್ಲಿ ಮಹಿಳೆಯರ ಪಾತ್ರ ದೊಡ್ಡದಿದೆ. ಅವರು ಮನೆಗಳಲ್ಲಿ ದುಡಿಯುತ್ತಾರೆ, ಹೊರಗಡೆ ಕೆಲಸಕ್ಕೂ ಹೋಗುತ್ತಾರೆ. ಅವರ ಮೇಲೆ ಮಾನಸಿಕ ಒತ್ತಡ ಇರುತ್ತದೆ. ಮಧ್ಯಮವರ್ಗದ ದುಡಿಯುವ ಮಹಿಳೆಯರ ಸಮಸ್ಯೆ ಸಾಕಷ್ಟು ಇರುತ್ತವೆ. ಸಾಹುಕಾರರ ಮನೆಯಲ್ಲಿನ ಮಹಿಳೆಯರು ಕೆಲಸಕ್ಕೆ ಆಳುಗಳನ್ನು ಇಟ್ಟುಕೊಳ್ಳುತ್ತಾರೆ. ಒಂದು ದಿನ ರಜೆ ಸಿಕ್ಕರೆ ಅವರು ಮಾರನೇ ದಿನ ಇನ್ನಷ್ಟು ದಕ್ಷವಾಗಿ ಕೆಲಸ ಮಾಡಬಲ್ಲರು ಎಂದರು. ಋತುಚಕ್ರ ರಜೆ ನೀತಿ ಕುರಿತು ಅಧ್ಯಯನ ನಡೆಸಿದ್ದ ಸಮಿತಿಯ ಅಧ್ಯಕ್ಷೆ ಕ್ರೈಸ್ಟ್ ವಿಶ್ವವಿದ್ಯಾಲಯದ ಅಸೋಸಿಯೇಟ್ ಡೀನ್ ಮಾತನಾಡಿ, ಋತುಚಕ್ರ ರಜೆ ನೀತಿಗೆ ಶಿಫಾರಸು ಮಾಡಲು ಸಾಕಷ್ಟು ಅಧ್ಯಯನ ನಡೆಸಿದ್ದೆವು. 2ನೇ ಪುಟನೋಡಿ

ದಿಲ್ ಗೆದ್ದ ಗಿಲ್: ಭಾರತದ ಹಿಡಿತದಲ್ಲಿ ಪಂದ್ಯ, ವಿಂಡೀಸ್ 140ಕ್ಕೆ 4 ವಿಕೆಟ್

# ಒಂದನೇ ಪುಟದಿಂದ

## ಮಾಧ್ಯಮ ಸೃಷ್ಟಿ:ಡಾ.ಪಾಟೀಲ

ಕಾಂಗ್ರೆಸ್ ಅಧಿಕಾರಕಳೆದುಕೊಂಡಾಗನಿಲ್ಲಿಸಲಾಗಿತ್ತು. ಈಗಮತ್ತೆ ಕಾಲಕೂಡಿ ಬಂದಿದೆ. ಮತ್ತೆ ತೊಗರಿ ವಿತರಣೆ ಮಾಡಲಾಗುತ್ತಿದೆ ಎಂದರು.

**ಶೇ.70ರಷ್ಟು ಸಮೀಕ್ಷೆ ಮುಕ್ತಾಯ:**

ಬೀದರ್, ಯಾದಗಿರಿ, ರಾಯಚೂರು, ಬಾಗಲಕೋಟ, ವಿಜಯಪುರ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಬೆಳೆ ಹಾನಿಯ ಸಮೀಕ್ಷೆ ನಡೆದಿದೆ. ಶೇ.70ರಷ್ಟು ಸಮೀಕ್ಷೆ ಮುಗಿದಿದೆ. ಕಲಬುರಗಿಯಲ್ಲಿ ವಿಮೆ ಹಣ ರೂ. 500 ಕೋಟಿಗೂ ಹೆಚ್ಚು ಪರಿಹಾರ ಸಿಗುವ ನಿರೀಕ್ಷೆಯಿದೆ. ವಾಣಿಜ್ಯ ಬೆಳೆಗಳಿಗೆ ರೂ. 200 ಕೋಟಿ ಬರುವ ನಿರೀಕ್ಷೆ ಇದೆ ಎಂದು ಸುಳಿವು ನೀಡಿದರು.

ಶಾಸಕರಾದ ಎಂ.ವೈ.ಪಾಟೀಲ್ ಅಲ್ಲಮಪ್ರಭು ಪಾಟೀಲ್, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ, ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಜಗೋಪಾಲ್ ರೆಡ್ಡಿ ಇದ್ದರು.

## ಋತುಚಕ್ರ ರಜೆ ನೀತಿ ಶೀಘ್ರ ನಿಯಮ

ಎಲ್ಲಾ ಮಾನದಂಡಗಳನ್ನು ಅಧ್ಯಯನ ಮಾಡಿಯೇ ಶಿಫಾರಸು ಮಾಡಿದ್ದೆವು ಎಂದು ಹೇಳಿದರು.

## ಜಿಎಸ್ ಟಿ ಇಳಿಕೆಯಿಂದ ನವ ಭಾರತದ ಸುಧಾರಣೆ

ಆದ ಆರ್ಥಿಕ ಕೊರತೆ ನೀಗಿಸಬಹುದು ಎಂದು ದೇಶದ ಆರ್ಥಿಕ ವಲಯ ಅಭಿಪ್ರಾಯ ಪಟ್ಟಿದ್ದು, ಖಂಡಿತ ನೀಗಲಿದೆ ಎಂದರು. ತೆರಿಗೆ ಪಾವತಿಯಿಂದ ದೈನಂದಿನ ಬದುಕಿಗೆ ಬಡ ಮತ್ತು ಮಧ್ಯಮ ವರ್ಗ ಹೆಣಗಾಡಬಾರದು ಎಂಬ ಕಾರಣದಿಂದ ಕೇಂದ್ರ ಸರ್ಕಾರ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರು.

ಮೇಲಪ್ಪ ಗುಳಗಿ ಪ್ರಾಸ್ತಾವಿಕ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಯುವ ಮುಖಂಡ ಮಹೇಶರಡ್ಡಿ ಮುದ್ನಾಳ, ಅಲೆಮಾರಿ ಅರೆ ಅಲೆಮಾರಿ ನಿಗಮದ ಅಧ್ಯಕ್ಷ ದೇವಿಂದ್ರನಾಥ ನಾದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರುಶುರಾಮ ಕುರಕುಂದಿ ಮತ್ತು ಮೇಲಪ್ಪ ಗುಳಿಗೆ, ಜಿ.ಎಸ್.ಟಿ ಅಭಿಯಾನದ ಜಿಲ್ಲಾ ಸಂಚಾಲಕ ಲಕ್ಷ್ಮಿಪುತ್ರ ಮಾಲಿಪಾಟೀಲ, ಸಹ ಸಂಚಾಲಕ ಜಗದೀಶ್ ಪಾಟೀಲ್, ಗ್ರಾಮೀಣ ಮಂಡಲ ಅಧ್ಯಕ್ಷ ರಾಜಶೇಖರ್ ಕಾಡಂನೊರ ವೇದಿಕೆ ಮೇಲೆ ಉಪಸ್ಥಿತರಿದ್ದರು. ಶಿವು ಕೊಂಕಲ್ ನಿರೂಪಿಸಿದರು.

## ಮತಗಳ್ಳತನ ವಿರುದ್ಧ ಸಹಿ ಸಂಗ್ರಹ ಅಭಿಯಾನ

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಫ್ಸ ರಮಿಯ, ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಓಂಕಾರ ತುಂಬಾ, ಯುವ ಕಾಂಗ್ರೆಸ್ ಅಧ್ಯಕ್ಷ ಉಮೇಶ ಜಮಗಿ, ಮಲ್ಲಿಕಾರ್ಜುನ್ ಮಾಳಶಟ್ಟಿ, ಲಕ್ಷ್ಮಣರಾವ ಬುಳ್ಳಾ, ಮಹೇಶ ಅಗಡಿ, ಸಚೀನ ಕಲ್ಲೂರ್, ಶಿವಕುಮಾರ ಬೆಳಕೇರಾ, ಶಂಕರನಾಗ ಸಾಹುಕಾರ, ಶಿವಾನಂದ ಹುಣಸಗೇರಾ, ಬಸವರಾಜ ಪಾಟೀಲ್ ಕಠಳ್ಳಿ ಸೇರಿದಂತೆ ಅನೇಕರಿದ್ದರು.

## ಚೀನಾಗೆ ಶೇ.100ರಷ್ಟು ಸುಂಕ :ನ.1 ರಿಂದ ಜಾರಿ

ಅಪರೂಪದ ಭೂಮಿಯ ಲೋಹಗಳು ಮತ್ತು ಕಾರುಗಳು, ಸ್ಮಾರ್ಟ್‌ಫೋನ್‌ಗಳು ಮತ್ತು ಇತರ ಹಲವು ವಸ್ತುಗಳಲ್ಲಿ ಪ್ರಮುಖ ಅಂಶವಾಗಿರುವ ಕೆಲವು ಇತರ ಪ್ರಮುಖ ವಸ್ತುಗಳ ಉತ್ಪಾದನೆಯಲ್ಲಿ ಚೀನಾ ಪ್ರಾಬಲ್ಯ ಹೊಂದಿದೆ. ಅವುಗಳನ್ನು ಅಮೆರಿಕಾಕ್ಕೆ ನೀಡದ ಈ ಹಿನ್ನೆಲೆಯಲ್ಲಿ ಅಮೇರಿಕಾ ಈ ನಿರ್ಧಾರ ಕೈಗೊಳ್ಳಲಾಗಿದೆ ಎನ್ನಲಾಗಿದೆ. ಈ ವರ್ಷದ ಆರಂಭದಲ್ಲಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾದ ಸರಕುಗಳ ಮೇಲಿನ ಸುಂಕ ಹೆಚ್ಚಿಸಿದ ನಂತರ ಈಗ ಮತ್ತೊಮ್ಮೆ ತೆರಿಗೆ ವಿಧಿಸಲು ಮುಂದಾಗಿದೆ. ಈ ಮೂಲಕ ರಫ್ತು ನಿಯಂತ್ರಣ ಹೇರಲು ನಾನಾ ಕಸರತ್ತು ನಡೆಸಿದೆ. ಚೀನಾ , ಅಮೇರಿಕಾದ ಟೆಕ್ ಸಂಸ್ಥೆ ಕ್ವಾಲ್ಕಾಮ್ ಮೇಲೆ ಏಕಸ್ವಾಮ್ಯ ತನಿಖೆಗೆ ಆದೇಶಿಸಿದ್ದು ಇದರಿಂದ ಮತ್ತೊಂದು ಚಿಪ್ ತಯಾರಕ ಸಂಸ್ಥೆಯ ಉತ್ಪಾದನೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗಿದೆ. ಮೇ ತಿಂಗಳಿನಿಂದ ಅಮೇರಿಕಾ ಮತ್ತು ಚೀನಾ ದುರ್ಬಲವಾದ ವ್ಯಾಪಾರ ಒಪ್ಪಂದದಲ್ಲಿವೆ, ಎರಡೂ ಕಡೆಯವರು ಪರಸ್ಪರರ ಸರಕುಗಳ ಮೇಲೆ ಮೂರು-ಅಂಕಿಯ ಸುಂಕಗಳನ್ನು ಕೈಬಿಡಲು ಒಪ್ಪಿಕೊಂಡಿದ್ದವು ಎರಡೂ ದೇಶಗಳ ನಡುವಿನ ವ್ಯಾಪಾರವನ್ನು ಬಹುತೇಕ ನಿಲ್ಲಿಸಿದೆ. ವರ್ಷದ ಆರಂಭಕ್ಕೆ ಹೋಲಿಸಿದರೆ ಚೀನಾದ ಸರಕುಗಳ ಮೇಲಿನ ಅಮೆರಿಕದ ಸುಂಕಗಳು ಶೇ. 30 ರಷ್ಟು ಹೆಚ್ಚುವರಿ ಸುಂಕ ವಿಧಿಸಲಾಗಿತ್ತು. ಚೀನಾಕ್ಕೆ ಪ್ರವೇಶಿಸುವ ಅಮೆರಿಕದ ಸರಕುಗಳು ಶೇ. 10 ರಷ್ಟು ಹೊಸ ಸುಂಕ ವಿಧಿಸಲಾಗಿದೆ

## 150 ಕೋಟಿ ಎಗರಿಸಿದ್ದ ಸೈಬರ್ ವಂಚಕ ಅರೆಸ್ಟ್

ಆರೋಪಿಯ ಮೊಬೈಲ್ ಪರಿಶೀಲನೆ ವೇಳೆ ಬಹುದೊಡ್ಡ ಪ್ರಕರಣದ ರಹಸ್ಯ ಬಯಲಾಗಿದೆ. ಸೈಬರ್ ಕ್ರೈಮ್ ಪೊಲೀಸರ ಸಾಧನೆಗೆ ದಾವಣಗೆರೆ ಎಸ್ಪಿ ಉಮಾ ಪ್ರಶಾಂತ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಉತ್ತರ ಪ್ರದೇಶದ ಗಾಜೀಯ ಬಾದ್, ಜಮ್ಮು ಕಾಶ್ಮೀರದ ಶ್ರೀನಗರ, ಆಂದ್ರ ಪ್ರದೇಶದ ಏಲೂರು, ಮಹರಾಷ್ಟ್ರದ ಮುಂಬೈ ನಗರ, ಬೆಂಗಳೂರು ನಗರ ಹಾಗೂ ದಾವಣಗೆರೆಯ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಇದೇ ಮೊದಲ ಬಾರಿಗೆ ದಾವಣಗೆರೆ ಜಿಲ್ಲೆಯ ಸೈಬರ್ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಬಹುದೊಡ್ಡ ಪ್ರಕರಣದ ಆರೋಪಿಯನ್ನು ಬಂಧಿಸಿದ್ದಾರೆ.

## ಕೃಷಿ ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ

ಸುಮಾರು 90 ಮಿಲಿಯನ್ ಮೆಟ್ರಿಕ್ ಟನ್ ಮತ್ತು 64 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಹೆಚ್ಚಾಗಿದೆ 2014 ರಿಂದ ಭಾರತದ ಜೇನುತುಪ್ಪದ ಉತ್ಪಾದನೆ ದ್ವಿಗುಣಗೊಂಡಿದೆ ಎಂದು ಅವರು ಹೇಳಿದ್ದಾರೆ. ಭಾರತ ಅಭಿವೃದ್ಧಿ ಹೊಂದಬೇಕಾದರೆ ಪ್ರತಿಯೊಂದು ಕ್ಷೇತ್ರದಲ್ಲೂ ನಿರಂತರವಾಗಿ ಸುಧಾರಣೆ ಕಾಣಬೇಕು ದೇಶದ ಮನೋಧರ್ಮ ಹೇಗಿದೆಯೆಂದರೆ ಅದು ಕೆಲವೇ ಸಾಧನೆಗಳಿಂದ ತೃಪ್ತವಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಅವಕಾಶಗಳಿಂದ ವಂಚಿತರಿಗೆ ಆದ್ಯತೆ ನೀಡಿದಾಗ ಮತ್ತು ಹಿಂದುಳಿದ ಪ್ರದೇಶಗಳ ಮೇಲೆ ಕೇಂದ್ರೀಕರಿಸಿದಾಗ, ಫಲಿತಾಂಶ ಬರಲಿದೆ. ದೇಶದ ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ, ತಾಯಂದಿರ ಮರಣ ಪ್ರಮಾಣ ಕಡಿಮೆಯಾಗಿದೆ, ಮಕ್ಕಳ ಆರೋಗ್ಯ ಸುಧಾರಿಸಿದೆ ಮತ್ತು ಶೈಕ್ಷಣಿಕ ಗುಣಮಟ್ಟ ಹೆಚ್ಚಾಗಿದೆ ಎಂದು ಅವರು ಹೇಳಿದ್ದಾರೆ. ಬಹು ನಿಯತಾಂಕಗಳಲ್ಲಿ, ಈ ಜಿಲ್ಲೆಗಳು ಈಗ ಇತರ ಹಲವು ಜಿಲ್ಲೆಗಳಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಮಾದರಿಯನ್ನು ಆಧರಿಸಿ, ಈಗ ಕೃಷಿಯಲ್ಲಿ ಹಿಂದುಳಿದಿರುವ 100 ಜಿಲ್ಲೆಗಳನ್ನು ಅಭಿವೃದ್ಧಿಪಡಿಸುವತ್ತ ಗಮನಹರಿಸಲು ಬಯಸುತ್ತೇವೆ, ಇದರಿಂದ ಅವು ಹೆಚ್ಚು ಮುಂದುವರಿದ ಜಿಲ್ಲೆಗಳೊಂದಿಗೆ ಸ್ಪರ್ಧಿಸಬಹುದು ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ರೈತರೊಂದಿಗೆ ಮೋದಿ ಸಂವಾದವನ್ನು ನಡೆಸಿದರು.

## ಸಿಎಂ ಆಗಲು ನನಗೆ ಆತುರವಿಲ್ಲ: ಡಿಕೆಶಿ

ನಾಗರಿಕರು ನನ್ನನ್ನು ಭೇಟಿ ಮಾಡಿ ನೀವು ಮುಖ್ಯಮಂತ್ರಿ ಆಗಬೇಕು. ಆ ಸಮಯ ಹತ್ತಿರ ಬರುತ್ತಿದೆ ಎಂದು ಹೇಳಿದರು. ಆದರೆ ಅದನ್ನು ನಾನೇ ಹೇಳಿದೆ ಎಂಬ ಅರ್ಥದಲ್ಲಿ ತಿರುಚಿ ಮಾಧ್ಯಮಗಳು ಪ್ರಸಾರ ಮಾಡಿವೆ. ಇದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ನಾನು ಮುಖ್ಯಮಂತ್ರಿ ಹುದ್ದೆ ಅಲಂಕರಿಸಲು ಆತುರದಲ್ಲಿ ಇಲ್ಲ. ನಾನು ಇಲ್ಲಿಗೆ ಬಂದಿರುವುದು ಜನರ ಸೇವೆ ಮಾಡಲು. ರಾಜಕಾರಣ ಮಾಡಲು ಅಲ್ಲ. ಜನರ ಸೇವೆ ಮಾಡಲು ಹಗಲು-ರಾತ್ರಿ ಓಡಾಡುತ್ತಿದ್ದೇನೆ. ನೀವು ಈ ರೀತಿ ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡುವುದು ಸರಿಯಲ್ಲ ಎಂದು ಅವರು ಹೇಳಿದರು. ನೀವು ಈ ರೀತಿ ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡಿದರೆ ನಾನು ನಿಮ್ಮನ್ನು ಯಾವುದಕ್ಕೂ ಕರೆಯುವುದಿಲ್ಲ ಎಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಾನು ಸಿಎಂ ಆಗುವ ಕಾಲ ಹತ್ತಿರ ಬಂದಿದೆ ಎಂದು ಎಲ್ಲಿ ಹೇಳಿದ್ದೇನೆ ತೋರಿಸಿ ಮಾಧ್ಯಮಗಳು ರಾಜಕಾರಣ ಮಾಡುವುದು ಬೇಡ ಎಂದರು.

ನಾನು ಆ ರೀತಿ ಹೇಳಿಲ್ಲ. ಅದರ ಅಗತ್ಯವೂ ಇಲ್ಲ. ನನಗೆ ನನ್ನ ಗುರಿ ಗೊತ್ತಿದೆ. ಭಗವಂತ ನನಗೆ ಯಾವಾಗ ಅವಕಾಶ ಕೊಡುತ್ತಾನೋ ಕೊಡಲಿ. ರಾಜ್ಯದ ಜನರ ಸೇವೆ ಹಾಗೂ ಬೆಂಗಳೂರಿನ ನಾಗರಿಕರಿಗೆ ಉತ್ತಮ ಆಡಳಿತ ನೀಡುವುದು ನನ್ನ ಆದ್ಯತೆ, ಬದ್ಧತೆ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಆದರೆ ಅಭಿವೃದ್ಧಿ ಕೆಲಸ ಬಿಟ್ಟು ವಿವಾದ ಸೃಷ್ಟಿಸಲು ಕೆಲ ಮಾಧ್ಯಮಗಳು ಪ್ರಯತ್ನಿಸುತ್ತಿವೆ ಎಂದು ಅಸಮದಾನ ಹೊರ ಹಾಕಿದರು. ಇದೇ ರೀತಿ ನನ್ನ ವಿಚಾರದಲ್ಲಿ ಸುಳ್ಳು ಸುದ್ದಿ ಪ್ರಸಾರ ಮಾಡಿ ದಾರಿ ತಪ್ಪಿಸುವ ಪ್ರಯತ್ನ ಮಾಡಿದರೆ ನಾನು ಮಾನನಷ್ಟ ಮೊಕ್ಕದಮ್ಮೆ ಹಾಕ ಬೇಕಾಗುತ್ತದೆ ಎಂದು ಉಪಮುಖ್ಯಮಂತ್ರಿಗಳು ಗರಂ ಆಗಿ ಹೇಳಿದರು.

# ಖೋಖೋ ಸ್ಪರ್ಧೆ: ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಗುರುಕುಲ ತಂಡ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಅ.11: ಪಟ್ಟಣದ ಚನ್ನಬಸವಾಶ್ರಮದಲ್ಲಿ ನಡೆದ ತಾಲ್ಲೂಕು ಮಟ್ಟದ ಖೋಖೋ ಸ್ಪರ್ಧೆಯ ಬಾಲಕರ ವಿಭಾಗದಲ್ಲಿ ಚನ್ನಬಸವೇಶ್ವರ ಗುರುಕುಲ ವಸತಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಎರಡು ತಂಡಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿವೆ.

ಪ್ರಥಮ ಸ್ಥಾನ ಪಡೆದ ತಂಡಗಳಿಗೆ ತಾಲ್ಲೂಕು ದೈಹಿಕ ಶಿಕ್ಷಣ ಪರೀಕ್ಷಕ ರೋಹಿದಾಸ್ ರಾಠೋಡ್ ಕಪ್ ವಿತರಿಸಿದರು. ತಾಲ್ಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಹನುಮಂತ

ಕಾರಾಮುಂಗೆ, ಚೆನ್ನವೀರ ಚಕ್ರಸಾಲಿ ಅನಿಲ್ ಕುಮಾರ ಪಾಟೀಲ ಇದ್ದರು.

ಸಂತಸ: ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಪಿಠಾಧಿಪತಿ ಗುರುಬಸವ ಪಟ್ಟದೇವರು, ಆಡಳಿತಾಧಿಕಾರಿ ಮೋಹನರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಮುಖ್ಯಶಿಕ್ಷಕರಾದ

ಮಹೇಶ ಮಹಾರಾಜ್, ಮಹೇಶ ಕುಲಕರ್ಣಿ, ಎಸ್ ಎಸ್ ಎಲ್ ಸಿ ಸಂಯೋಜಕ ಪ್ರವೀಣ ಕುಮಾರ ಖಂಡಾಳೆ, ದೈಹಿಕ ಶಿಕ್ಷಣ ಶಿಕ್ಷಕ ಮಲ್ಲಪ್ಪ, ವೀರೇಶ ಅಶ್ವಿನಿ ಸಂತಸ ವ್ಯಕ್ತಪಡಿಸಿದ್ದಾರೆ.

# ಗ್ಯಾರಂಟಿ ಯೋಜನೆಗಳ ಕ್ರಾಂತಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಅ. 11 : ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ* ಸರ್ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದ ರೇಕುಳಗಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ನಿಡವಂಚ ಗ್ರಾಮದಲ್ಲಿ* ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

**ಅನ್ನಭಾಗ್ಯ: ಯೋಜನೆಯ ಕುರಿತು**

ನಿಡವಂಚ ಗ್ರಾಮದ ಸುಜಾತ ಎಂಬ ಮಹಿಳೆವು ಗ್ಯಾರಂಟಿ ಯೋಜನೆಯಿಂದ ನಮ್ಮ ಮನೆಯಲ್ಲಿ ಅಡುಗೆ ಚಿಂತೆಯೇ ಇಲ್ಲ! ಸರ್ಕಾರದ ಸಹಾಯದಿಂದ ನಾವು ಸುಲಭವಾಗಿ ಜೀವನ ಸಾಗಿಸುತ್ತಿದ್ದೇವೆ ಎಂದು ತಿಳಿಸುತ್ತಾರೆ.

**ಗೃಹ ಲಕ್ಷ್ಮಿ: ಯೋಜನೆಯ ಬಗ್ಗೆ**

ಸುಜಾತಾ ಎಂಬ ಮಹಿಳೆ ಈ ಯೋಜನೆಯಿಂದ ಮಹಿಳೆಯರಿಗೆ ಆರ್ಥಿಕ ಭದ್ರತೆ ದೊರಕಿದೆ, ಪ್ರತಿ ತಿಂಗಳು ಸರ್ಕಾರದಿಂದ ಸಿಗುವ ಸಹಾಯದಿಂದ ಮನೆ ಖರ್ಚು ನಿರ್ವಹಣೆಯಲ್ಲಿ ಸುಲಭವಾಗಿದೆ. ಇದರಿಂದ ಮಹಿಳೆಯರು ಆತ್ಮ ವಿಶ್ವಾಸದಿಂದ ಬದುಕುತ್ತಿದ್ದೇವೆ ಎಂದು ತಿಳಿಸಿರುತಾರೆ,

ಶಕ್ತಿ ಯೋಜನೆ, ಗೃಹ ಜ್ಯೋತಿ, ಯುವನಿಧಿ ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಉದಯಕುಮಾರ ಚಟನಳ್ಳಿ, ಶಿವಕುಮಾರ ಕುತ್ತಾಬಬಾದ್, ಮೊಹಮ್ಮದ್ ಖುದುಸ್, ಸೇವಾದಳ್ ಅಧ್ಯಕ್ಷ ಮೋಹಿನ್ ಪಠಾಣ್, ಮುಖಂಡರಾದ ಜಾನಿ ಪಟೇಲ್, ಇರ್ಷಾದ ಪಟೇಲ್, ಇಮ್ರಾನ್ ಖಾನ್ ಪವನ ಬಾಪೂರೆ ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.

# ಗೌತಮ ಬುದ್ಧ ಮೂರ್ತಿ ಪ್ರತಿಷ್ಠಾಪನೆ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಅ.11:ಇಂದು ದಿನಾಂಕ:12/10/25 ರವಿವಾರ ರಂದು ತಥಾಗತ ಭಗವಾನ ಗೌತಮ ಬುದ್ಧ ಮೂರ್ತಿ ಪ್ರತಿಷ್ಠಾಪನೆ ಮತ್ತು ವಾರ್ಷಿಕ ಉತ್ಸವದ ಸಮಾರೋಪ ಸಮಾರಂಭ ನಡೆಯಲಿದೆ ಎಂದು ನಾರಾಯಣ ವಾಘಮಾರೆ ಹೇಳಿದರು.



ಪಟ್ಟಣದ ಲುಂಬಿನಿ ಬುದ್ಧ ವಿಹಾರ ಇಂದಿರಾನಗರನಲ್ಲಿ ಕರೆದ ಪತ್ರಿಕಾ ಗೋಷ್ಠಿ ಉದ್ದೇಶಿ ಮಾತನಾಡಿದರು, ಕಮಲನಗರ ಎಲ್ಲಾ ಬೌದ್ಧ ಅನುಯಾಯಿಗಳು ಒಗ್ಗೂಡಿ ಗೌತಮ ಬುದ್ಧ ಅವರ ಮೂರ್ತಿ ಅನಾವರಣ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ಈ ಕಾರ್ಯಕ್ರಮದಲ್ಲಿ ಧರ್ಮಗುರುಗಳಾದ ಭೋದಿ ರತ್ನ ಹಾಗೂ ದಮ್ಮ ಭೋದಿ ಇವರು ಬುದ್ಧ ವಿಚಾರ ದಾನ ನೀಡುವರು. ಬೆಳಗ್ಗೆ 9 ಗಂಟೆಗೆ ಧರ್ಮಗುರು ಭೋದಿ ರತ್ನ ಹಾಗೂ ದಮ್ಮ ಭೋದಿ ಇವರವರು ಮೆರವಣಿಗೆ ಚಾಲನೆ ನೀಡುವರು, ಮೆರವಣಿಗೆಯು ಸಿದ್ಧಾರ್ಥನಗರ, ಹಿಮ್ಮತ್‌ನಗರ, ಬಸವೇಶ್ವರ ಚೌಕ್, ಗ್ರಾಮ ಪಂಚಾಯಿತಿ ಕಛೇರಿ, ಅಶೋಕನಗರ, ನ್ಯೂ ಭೀಮನಗರ, ಬಸ್ ನಿಲ್ದಾಣ, ಮಾರ್ಕೆಟ್ ಯಾರ್ಡ್, ರೈಲ್ವೆ ನಿಲ್ದಾಣ ರಸ್ತೆ, ಪಂಚಶೀಲನಗರ, ಮಾರ್ಗವಾಗಿ ಇಂದಿರಾನಗರದ ಲುಂಬಿನಿ ಬುದ್ಧ ವಿಹಾರದವರೆಗೆ ತಲುಪಲಿದೆ, ನಂತರ ಮದ್ಯಾಹ್ನ 1 ಗಂಟೆಗೆ ಬುದ್ದಿ ಮೂರ್ತಿ ಪ್ರತಿಷ್ಠಾಪನೆ ಮತ್ತು ವಿಚಾರದಾನ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎಸ. ಏನ್. ಭಾಸ್ಕರ, ದಿಲ್ಲಿಪ ಸೂರ್ಯವಂಶಿ, ರಾಜೇಂದ್ರ ಸೂರ್ಯವಂಶಿ, ಶಾಲಿವನ ಡೋಂಗ್ರೆ, ಯಾದವರಾವ ಗಾಯಕವಾಡ,ಬಾಲಾಜಿ ಕಾಲೆಕರ ಸೇರಿದಂತೆ ಇನ್ನಿತರ ಇದ್ದರು.

# ಕಬಡ್ಡಿ ಜಿಲ್ಲಾ ಮಟ್ಟಕ್ಕೆ : ಡೈಮಂಡ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಅ.11:ನಗರದ ಡೈಮಂಡ ಪ್ರಾಥಮಿಕ ಶಾಲೆ, ಭಾಲ್ಕಿಯ 2025-26ನೇ ಸಾಲಿನ "ಪ್ರಾಥಮಿಕ ಶಾಲಾ ಮಕ್ಕಳ ತಾಲೂಕ ಮಟ್ಟದ ಕ್ರೀಡಾ-ಕೂಟ" ದಿನಾಂಕ 11-10-2025 ರಂದು ಭಾಲ್ಕಿ ತಾಲೂಕಿನ ಕುಂಬಾರ ಗುಂಡಯ್ಯ ಕಲ್ಯಾಣ ಮಂಟಪದ ಹತ್ತಿರದ ಮೈದಾನದಲ್ಲಿ ಆಯೋಜಿಸಲಾಗಿತ್ತು.

ನಮ್ಮ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕಬಡ್ಡಿ ಆಟದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ಶಾಲೆಯ ಕೀರ್ತಿ ಪತಾಕೆ ಎತ್ತರಕ್ಕೆ ಹಾರಿಸಿದ್ದಾರೆ.

ಕಬಡ್ಡಿ ಆಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು :- ಸುದರ್ಶನ, ದಾನಿಶ ಅಹೆಮದ್, ಆದರ್ಶ ಪವನ, ಅಬ್ದುಲ್ ರೆಹಮಾನ್, ಹುಜೈಫ್, ಅಫಾನ್, ಚೇತನ, ಆದಿತ್ಯ, ಅಮೋಲ , ಸಾಯಿ, ವೇದಾಂತ, ಸಾಧಿಕ ಮೆಹಬೂಬ್, ಕಾರ್ತಿಕ, ಕನಯ್ಯ, ಆದರ್ಶ ಶಿವರಾಜ.




ವಿದ್ಯಾರ್ಥಿಗಳಿಗೆ ತರಬೇತುದಾರರಾಗಿ ಕಾರ್ಯನಿರ್ವಹಿಸಿದ ದೈಹಿಕ ಶಿಕ್ಷಕರು ರವೀಂದ್ರ ರಾಠೋಡ, ಶಿವಕುಮಾರ ಗೌಂಡಗಾವೆ, ಸುನಿಲ ಜಾಧವ, ವಿಕಾಸ ಚೌಹಾಣ, ಗಣಪತಿ ಹೂಗಾರ, ಯಲ್ಲಾಲಿಂಗ ವಡ್ಡೆ.

ಡೈಮಂಡ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಸ್.ಕೆ.ಮಸ್ತಾನವಲಿ ಮತ್ತು ಶ್ರೀ ವಾಯ್.ಮಾಧವರಾವ, ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಗೌಸಿಯಾ ಬೇಗಂ ಮತ್ತು ಮುಖ್ಯೋಪಾಧ್ಯಾಯರಾದ ಶ್ರೀ ಧನರಾಜ ನೀಲಂಗೆ,

ಆಡಳಿತಾಧಿಕಾರಿಗಳಾದ ಶ್ರೀಮತಿ ಸ್ವಪ್ನಾಲಿ ಕಾಶೆಂಪುರೆ, ಶ್ರೀಮತಿ ಸುಜಾತಾ ಪಾಟೀಲ ಮತ್ತು ಶ್ರೀ ರಾಮ ಕನಸೆ ಹಾಗೂ ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರು ಹಾಗು ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿರುತ್ತಾರೆ.

# ವಿಶ್ವ ಹೆಣ್ಣು ಮಗುವಿನ ದಿನ: ರಕ್ತದಾನ ಶಿಬಿರ



ಮಲ್ಲಮ್ಮ ನುಡಿ ವಾರ್ತೆ

ಬೀದರ, ಅ.11: ವಿಶ್ವ ಹೆಣ್ಣು ಮಗುವಿನ ದಿನದ ಅಂಗವಾಗಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ಮಿಷನ್ ಶಕ್ತಿ ಯೋಜನೆಯ ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು.

ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಭಾಗಿತ್ವದಲ್ಲಿ ಈ ಶಿಬಿರವನ್ನು ಶನಿವಾರ ಬೀದರ್‌ನ

ಬ್ರೀಮ್ಸ್ (ಬ್ರಿಮ್ಸ್) ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ರೂಪಾ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಹಾಗೂ ಮಿಷನ್ ಶಕ್ತಿ ಯೋಜನೆಯ ಜಿಲ್ಲಾ ಸಂಯೋಜಕಿ ರೋಮಾ ಸಖಿ ಆಡಳಿತ ಅಧಿಕಾರಿ ಸಂಗೀತ ಪಾಟೀಲ್ ಮತ್ತು ಅನಿತಾ ಪೋಲಿಸ್ ಉಪನಿರೀಕ್ಷಕರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಘಟಕದ ಸಿಬ್ಬಂದಿಗಳು ಹಾಗೂ ಸ್ಥಳೀಯರು ಉತ್ಸಾಹದಿಂದ ಭಾಗವಹಿಸಿ ರಕ್ತದಾನ ಮಾಡಿದರು.

ರಕ್ತಹೀನತೆಯಿಂದ ಬಳಲುವ ರೋಗಿಗಳು ಹಾಗೂ ಗರ್ಭಿಣಿ ಮಹಿಳೆಯರಿಗೆ ರಕ್ತದಾನ ಬಹುಮುಖ್ಯ ಸಹಕಾರವಾಗುತ್ತದೆ ಎಂದು ಸಂಯೋಜಕರು ಹೇಳಿದರು.

# ಅಂಬಿಗರ ಚೌಡಯ್ಯ ಮೂರ್ತಿ ಭಗ್ನ : ಕ್ರಮಕ್ಕೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಅ. 11 : ಕಲಬುರಗಿ ಜಿಲ್ಲೆಯ ಚಿತ್ತಾಪೂರ್ ತಾಲೂಕಿನ ಮುತ್ತಗಾ ಗ್ರಾಮದಲ್ಲಿರುವ ನಿಜ ಶರಣ ಅಂಬಿಗರ ಚೌಡಯ್ಯನವರ ಮೂರ್ತಿಯ ಎಡಗೈ ಒಡೆದು ಹಾಕಿ, ಬಲಗೈಯಲ್ಲಿದ್ದ ವಚನ ಪುಸ್ತಕದ ಭಾಗ ಕಟ್ ಮಾಡಲಾಗಿದೆ. ಹಾಗೂ ಮೂರ್ತಿಯ ಮುಖಕ್ಕೆ ಕೆಸರನ್ನು ಸಿಡಿಸಲಾಗಿದ್ದು ಅಂತಹ ಕಿಡಿಗೇಡಿಗಳಿಗೆ ಕೂಡಲೇ ಬಂಧಿಸಬೇಕೆಂದು ಅಂಬಿಗರ ಚೌಡಯ್ಯ ಯುವ ಸೇನೆಯ ಸಂಸ್ಥಾಪಕ ಅಧ್ಯಕ್ಷರಾದ ಸುನೀಲ ಭಾವಿಕಟ್ಟಿ ಅವರು ಗೃಹ ಸಚಿವರಿಗೆ ಬರೆದ ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.



ಮುತ್ತಗಾ ಗ್ರಾಮದಲ್ಲಿ ಮೂರ್ತಿ ಸ್ಥಾಪಿಸಿ ಒಂದು ವರ್ಷವಾಗಿದ್ದು, ಸಮಾಜಘಾತುಕ ಶಕ್ತಿಗಳು ಭಗ್ನಗೊಳಿಸಿರಿವುದು ಖಂಡನೀಯವಾಗಿದೆ. ಮಹಾ ಪುರುಷರು ಒಂದು ಜಾತಿ ಧರ್ಮಕ್ಕೆ ಸಿಮೀತವಾಗಿರದೆ ಮನುಕುಲಕ್ಕೆ ಆದರ್ಶಪ್ರಾಯರಾಗಿರುತ್ತಾರೆ. ಅಂತಹ ಮಹಾ ಪುರುಷರನ್ನು ಎಲ್ಲಾ ಸಮಾಜ ಗೌರವಿಸುತ್ತದೆ. ಚೌಡಯ್ಯನವರ ಮೂರ್ತಿ ಭಗ್ನಗೊಳಿಸಿರುವುದು ಟೋಕರೆ ಕೋಳಿ ( ಕೋಲಿ-ಕಬ್ಬಲಿಗ) ಸಮುದಾಯಕ್ಕೆ ಭಾವನಾತ್ಮಕವಾಗಿ ದಾಳಿ ಮಾಡಿದಂತಾಗಿದ್ದು, ಸಮಾಜ ಘಾತುಕ ಶಕ್ತಿಯನ್ನು ತಕ್ಷಣವೇ ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಂಡು ಸರಕಾರದಿಂದ ಕೂಡಲೇ ಮುತ್ತಗಾ ಗ್ರಾಮದಲ್ಲಿ ನಿಜ ಶರಣ ಅಂಬಿಗರ ಚೌಡಯ್ಯನವರ ಕಂಚಿನ ಮೂರ್ತಿ ಸ್ಥಾಪಿಸಬೇಕು ಎಂದು ಅಂಬಿಗರ ಚೌಡಯ್ಯ ಯುವ ಸೇನೆ ಸಂಸ್ಥಾಪಕ ಅಧ್ಯಕ್ಷ ಸುನೀಲ ಭಾವಿಕಟ್ಟಿ ಆಗ್ರಹಿಸಿದ್ದಾರೆ.

# ವಿಶ್ವದ ಸಮಸ್ಯೆಗಳಿಗೆ ಬಸವ ಸಿದ್ಧಾಂತವೇ ಪರಿಹಾರ: ವಿಜಯಸಿಂಗ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಅ. 11 : ಬಸವಕಲ್ಯಾಣ ವಿಶ್ವದ ಸಮಸ್ಯೆಗಳಿಗೆ ಬಸವ ಸಿದ್ಧಾಂತವೇ ಪರಿಹಾರವಾಗಿದೆ. ಪ್ರತಿಯೊಬ್ಬರೂ ಬಸವ ತತ್ವದಲ್ಲಿ ನಂಬಿಕೆ ಇಡಬೇಕು. ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ದೊರಕಬೇಕಾದರೆ ಬುದ್ಧ ಬಸವ ಅಂಬೇಡ್ಕರರ ಮಾರ್ಗದಲ್ಲಿ ಸಾಗಬೇಕೆಂದು ಕಾಂಗ್ರೆಸ್ ಮುಖಂಡರಾದ ವಿಜಯಸಿಂಗ ತಿಳಿಸಿದರು.

ಪಟ್ಟಣದ ಸಸ್ತಾಪುರ ಬಂಗ್ಲಾ ಸಮೀಪದ ಎಂ.ಎಮ್.ಬೇಗ್ ಸಭಾಮಂಟಪದಲ್ಲಿ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ ಹಾಗೂ ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ 4ನೇ ಸ್ವಾಭಿಮಾನಿ ಕಲ್ಯಾಣ ಪರ್ವ ಉದ್ಘಾಟಿಸಿ ಮಾತನಾಡಿದರು.

ನಮ್ಮ ತಂದೆ ದಿ. ಧರ್ಮಸಿಂಗ್ ಅವರು ಲಿಂ. ಮಾತಾಜಿಯವರ ಶಿಷ್ಯರಾಗಿದ್ದರು. ಮಾತಾಜಿ ಒಬ್ಬ ಮಹಿಳೆಯಾಗದೆ ದೇವರ ಸ್ಥಾನದಲ್ಲಿದ್ದರು ಎಂದು ನಮ್ಮ ತಂದೆಯವರು ಯಾವಾಗಲೂ ಹೇಳುತ್ತಿದ್ದರು. ಮಾತೆ ಮಹಾದೇವಿ ಅವರು ಬಸವಕಲ್ಯಾಣಕ್ಕೆ ಬಂದು ಈ ಪುಣ್ಯಭೂಮಿಯನ್ನು ವಿಶ್ವಮಟ್ಟದಲ್ಲಿ ಪರಿಚಯಿಸಿದರು ಎಂದು ತಿಳಿಸಿದರು.

ದಿವ್ಯ ಸಾನಿಧ್ಯ ವಹಿಸಿರುವ ಬೆಂಗಳೂರಿನ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷರಾದ ಪೂಜ್ಯಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ ವಚನ ಸಾಹಿತ್ಯದ ಶುದ್ಧಿಕರಣ ಮತ್ತು ಪರಿಷ್ಕರಣೆಯ ಅವಶ್ಯಕತೆ ಇದೆ. ಬಸವಾದಿ ಶರಣರು ಅನುಭವ ಮಂಟಪ ಪದ್ಧತಿ ಜಾರಿಗೆ ತಂದೆ ಇಂದು ಕೆಲವರು ಶಿವ ಪದವನ್ನು ಸೇರಿಸಿ ಶಿವಾನುಭವ ಎನ್ನುತ್ತಿದ್ದಾರೆ. ಶರಣರು ಎನ್ನುವ ಪದಕ್ಕೆ ಶಿವ ಸೇರಿಸಿ ಶಿವಶರಣರು ಎಂದು ಹೇಳಿ ಶೈವ ಸಂಸ್ಕೃತಿ ವಚನ ಸಾಹಿತ್ಯದೊಳಗೆ ನುಗ್ಗಿಸುವ



ಶೀಘ್ರದಲ್ಲೇ ಲಿಂಗಾಯತ ಧರ್ಮ ಪ್ರಸಾರಕರ ವೇದಿಕೆ ಸ್ಥಾಪನೆ: ಚನ್ನಬಸವಾನಂದ ಶ್ರೀ

ಕೇವಲ ಬಸವ ತತ್ವ ಪ್ರಚಾರವನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಮಾಡಲು ಲಿಂಗಾಯತ ಧರ್ಮ ಪ್ರಸಾರಕರ ವೇದಿಕೆ ಸ್ಥಾಪನೆ ಮಾಡಲಾಗುತ್ತಿದೆ. ಈಗಾಗಲೇ ಎಲ್ಲಾ ಪ್ರಕ್ರಿಯೆ ಮುಗಿದಿವೆ. ನೊಂದಣಿ ಮಾಡಿಸಲಾಗುತ್ತಿದೆ. ಈ ವೇದಿಕೆಯಲ್ಲಿ ಸುಮಾರು 500ಕ್ಕೂ ಹೆಚ್ಚು ಬಸವಪರ ಮಠಾಧೀಶರು ಸದಸ್ಯತ್ವ ಪಡೆಯಲಿದ್ದಾರೆ ಎಂದು ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ನಾಲ್ಕನೇ ಸ್ವಾಭಿಮಾನಿ ಕಲ್ಯಾಣ ಪರ್ವದಲ್ಲಿ ತಿಳಿಸಿದರು.

ಕಾರ್ಯ ನಡೆಯುತ್ತಿರುವುದು ಖಂಡನೀಯ ಎಂದರು. 12ನೇ ಶತಮಾನದಲ್ಲಿ ಬಸವಾದಿ ಶರಣರನ್ನು ಕೊಂಡಿ ಮಂಚಣ್ಣರು ಓಡಿಸಿದಾಗ ನೋವಿನಿಂದ ಶರಣರು ಚದುರಿದರು. ಮತ್ತು 21ನೇ ಶತಮಾನದಲ್ಲಿ ಅದೇ ಮಣಿಹ ಹೊತ್ತು ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಕಲ್ಯಾಣಕ್ಕೆ ಬಂದು ಅಭಿವೃದ್ಧಿ ಮಾಡುತ್ತಿದ್ದರೆ, ಒಳಗಿನ ಮತ್ತು ಹೊರಗಿನ ಅದೇ ಕೊಂಡಿ ಮಂಚಣ್ಣ ಸಂತತಿಯವರು ವಿರೋಧಿಸಿದರು.

ನಿಜವಾದ ನಿಷ್ಠಾವಂತ ಪೂಜ್ಯರು ಮತ್ತು ಶರಣರು ಹೊರಗಿದ್ದೇವೆ. ಅನರ್ಹರು, ಬಂಡವಾಳಶಾಹಿಗಳು ಒಳಗಿದ್ದು ಬಸವ ಧರ್ಮ ಪೀಠವನ್ನು ಒಡೆ-ಯುತ್ತಿದ್ದಾರೆ. ಪೀಠಾಧ್ಯಕ್ಷರಾಗಲು ಯೋಗ್ಯತೆ ಬೇಕು. ಸುಮ್ಮನೆ ಅವರವರನ್ನು ಕಂಡರೆ ಅವರವರಂತೆ ಹಾಡುವುದರಿಂದ ಬಸವ ತತ್ವ ಪ್ರಚಾರವಾಗಲು ಸಾಧ್ಯವಿಲ್ಲ ಎಂದು ಸ್ವಾಮೀಜಿ ಪ್ರತಿಪಾದಿಸಿದರು. ಹಳ್ಳಿಹಳ್ಳಿಗಳಿಗೆ ಬಸವ ತತ್ವ ಪ್ರಚಾರ ಮಾಡಿ, ಲಿಂಗಾಯತ ಧರ್ಮದ ದೇವರು ಲಿಂಗದೇವ ಎಂದು ತಿಳಿಸಿಕೊಟ್ಟ ಮಾತಾಜಿಯವರ ಪೀಠದ ಮೇಲೆ ಕುಳಿತು ಗುರುವಿನ ಆದೇಶ ಮೀರುವವರು ಗುರುದ್ರೋಹಿಗಳು ಎಂದು ಗಂಗಾಮಾತಾಜಿಗೆ ಟಾಂಗ್ ನೀಡಿದರು.

ಷಟಸ್ಥಳ ಧ್ವಜಾರೋಹಣ ನೆರವೇರಿಸಿದ ಅಖಿಲ ಭಾರತ ಲಿಂಗಾಯತ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕ ಶ್ರೀಕಾಂತ ಸ್ವಾಮಿ ಮಾತನಾಡಿ ಬಸವ ಸಂಸ್ಕೃತಿ ಅಭಿಯಾನ ಯಶಸ್ವಿಯಾಗಿದ್ದೇ ರಾಷ್ಟ್ರೀಯ ಬಸವ ದಳದ ಮಾತಾಜಿ ಶಿಷ್ಯರಿಂದ. ಮಾತಾಜಿ ಬಸವ ಮಂಟಪ ಸ್ಥಾಪನೆ ಮಾಡಬಾರದಾಗಿತ್ತು ಎಂದು ಹೇಳುವ ಕೆಲವು ಮಠಾಧೀಶರು ಅಭಿಯಾನದ ಸಂದರ್ಭದಲ್ಲಿ ವಸತಿ ಮಾಡಿದ್ದೇ ಮಾತಾಜಿ ಸ್ಥಾಪಿಸಿದ ಬಸವ ಮಂಟಪಗಳಲ್ಲಿ. ಹಲವು ಮಠಾಧೀಶರು ಮಠ ಬಿಟ್ಟು ಹೊರಗಡೆ ಬಂದಿರಲಿಲ್ಲ. ಈಗ ಹೊರಗೆ ಬಂದು ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆ. ಆದರೆ ಇವರಾರಿಗೂ ಅನ್ಯ ಜಿಲ್ಲೆಗಳಲ್ಲಿ ಶಿಷ್ಯರಿಲ್ಲ. ಇವರೆಲ್ಲ ನಂಬಿಕೊಂಡಿದ್ದೆ ಮಾತಾಜಿ ಶಿಷ್ಯರಿಗೆ ಎಂದು ತಿಳಿಸಿದರು.

ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ಬಸವರಾಜ ಪಾಟೀಲ ಶಿವಪುರ ಸರ್ವರಿಗೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ 2000ನೇ ಇಸವಿಯಲ್ಲಿ ಪೂಜ್ಯ ಮಾತಾಜಿಯವರನ್ನು ಕಲ್ಯಾಣಕ್ಕೆ ಕರೆತಂದು, ಜಾಗ ಕೊಡಿಸಿ ಇದೇ ಕಲ್ಯಾಣದ ಜನರಿಂದ ವಿರೋಧ ಕಟ್ಟಿ-ಕೊಂಡು, ಪೊಲೀಸರಿಂದ ಪೆಟ್ಟು ತಿಂದು ಸಂಘಟನೆ ಮಾಡಿದೆವು. ಆದರೆ ನಿಜವಾದ ಮಾತಾಜಿ ಶಿಷ್ಯರು ಹೊರಗಿದ್ದೇವೆ. ಭ್ರಷ್ಟರು ಒಳಗಿದ್ದಾರೆ. ಬಸವ ಮಹಾಮನೆಯಲ್ಲಿರುವ ಇಂದಿನ ಸ್ವಾಮಿಯೊಬ್ಬರು ಗ್ರಂಥಾಲಯ ತೆಗೆದು ಮಾತಾಜಿಯವರ ಸಾಹಿತ್ಯ ನಾಶ ಮಾಡುವ ಕಾರ್ಯ ಮಾಡುತ್ತಿರುವುದು ಅಕ್ಷಮ್ಯ ಅಪರಾಧ. ಇಂದಲ್ಲ ನಾಳೆ ನಾವು ನ್ಯಾಯ ಪಡೆದೇ ತೀರುತ್ತೇವೆ ಎಂದರು.

ನೇತೃತ್ವ ಚಿಕ್ಕಮಗಳೂರಿನ ಪೂಜ್ಯ ಶ್ರೀ ಡಾ. ಜಯಬಸವಾನಂದ ಸ್ವಾಮೀಜಿ, ಮಾತೆ ಸತ್ಯಾದೇವಿ, ಮಾತೆ ಶಾಂತಾದೇವಿ, ಧುಮ್ಮನಸೂರ ಮುಕ್ತಿನಾಥ ಮಠದ ಪೂಜ್ಯ ಶಂಕರಲಿಂಗ ಸ್ವಾಮೀಜಿ ವಹಿಸಿದ್ದರು. ಅಧ್ಯಕ್ಷತೆಯನ್ನು ಚಿಕ್ಕಮಗಳೂರಿನ ರಾ.ಬ.ದಳ. ಅಧ್ಯಕ್ಷ ಬಾಣೂರು ಚನ್ನಪ್ಪ ವಹಿಸಿದ್ದರು.

ಇದೇ ವೇಳೆ ಸಚ್ಚಿದಾನಂದ ಚಟನಳ್ಳಿ ವಿರಚಿತ ವಚನ ಪರುಷ ಕೃತಿಯನ್ನು ಬಿಡುಗಡೆ ಮಾತಲಾಯಿತು. ವೇದಿಕೆ ಮೇಲೆ ಬೆಳಗಾವಿಯ ಅಶೋಕ ಬೆಂಡಿಗೇರಿ, ಡಾ.ಮಹೇಶ ಬಿರಾದಾರ, ಶಿವರಾಜ ಪಾಟೀಲ ಅತಿವಾಳ, ನ್ಯಾಯವಾದಿ ಅಶೋಕ ಮಾನೂರೆ, ರವಿಕಾಂತ ಬಿರಾದಾರ, ಗಣಪತಿ ದೇಶಮುಖ, ಹೈದರಾಬಾದನ ಭೀಮರಾವ ಬಿರಾದಾರ, ಓಂಪ್ರಕಾಶ ರೊಟ್ಟೆ, ಗಣಪತಿ ದೇಶಮುಖ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಳ್ಳಾರಿಯ ಅಂದ್ರಾಳು ರಾ.ಬ.ದಳದ ಕು. ಅಕ್ಕಮಹಾದೇವಿ ತಂಡ ವಚನ ನೃತ್ಯ ನಡೆಸಿಕೊಟ್ಟರು. ಗಂಗಾವತಿ ವೀರೇಶ ನಿರೂಪಿಸಿದರೆ,

# ಔರಾದ ಪುರಸಭೆ ಮೇಲ್ದರ್ಜೆಗೆ ಕಾಂಗ್ರೆಸ್ ಕೊಡುಗೆ ಶಿಂಧೆ

ಮಲ್ಲಮ್ಮ ನುಡಿ ವಾರ್ತೆ

ಔರಾದ್ : ನಗರದ ಪಟ್ಟಣ ಪಂಚಾಯತಿಯನ್ನು ಪುರಸಭೆ ಮೇಲ್ದರ್ಜೆಗೆ ಮಾಡಲು ಕಾಂಗ್ರೆಸ್ ಸರಕಾರ ನಿರ್ಣಯ ಕೈಗೊಂಡಿದೆ ಎಂದು ನಿವೃತ್ತ ಸಿಎಂ ಅಪರ ಕಾರ್ಯದರ್ಶಿ, ಕಾಂಗ್ರೆಸ್ ಮುಖಂಡ ಡಾ. ಭೀಮಸೇನರಾವ ಶಿಂಧೆ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು ಈ ಹಿಂದೆ ಬಿಜೆಪಿ ಅವಧಿಯಲ್ಲಿ ಪಟ್ಟಣ ಪಂಚಾಯತಿಯನ್ನು ಪುರಸಭೆ ಮಾಡಲು ಆಗಲಿಲ್ಲ. ಈ ಭಾಗದ ಜನರ ಬಹುದಿನಗಳ ಬೇಡಿಕೆ ಸರಕಾರದ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ ಅವರು ಜನರ ಬೇಡಿಕೆಗೆ ಸ್ಪಂದಿಸಿದ್ದಾರೆ. ಅಲ್ಲದೇ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಅವರ ಪ್ರಯತ್ನದ ಫಲದಿಂದ ಔರಾದ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಸರಕಾರದ ಅವಧಿಯಲ್ಲಿ ಮಾಡದ ಕೆಲಸಗಳು ಕಾಂಗ್ರೆಸ್ ಸರಕಾರ ಮಾಡುತ್ತಿದೆ. ಆದರೆ ಕೆಲವರು ಎಲ್ಲವೂ ನಾನೇ ಮಾಡುತ್ತಿದ್ದೇನೆ ಎಂದು ಪ್ರಚಾರ ಮಾಡಿಕೊಳ್ಳಲು ಮುಂದಾಗಿದ್ದಾರೆ. ಬಿಜೆಪಿ ಅವಧಿಯಲ್ಲಿ ಅವರು ಯಾಕೆ ಮಾಡಿಲ್ಲ ಎಂದು ಪ್ರಶ್ನಿಸಿದ ಶಿಂಧೆ, ತಾಲೂಕಿನಲ್ಲಿ ಬಿಜೆಪಿ ಅವಧಿಯಲ್ಲಿ ಆಗದ ಕೆಲಸಗಳು ಕಾಂಗ್ರೆಸ್ ಸರಕಾರ ಮಾಡುತ್ತಿದೆ ಎನ್ನುವುದು ಜನರಿಗೆ ಅರಿವಾಗಿದೆ. ಜನರನ್ನು ದಾರಿ ತಪ್ಪಿಸಲು ಸಾಧ್ಯವಿಲ್ಲ. ಎಲ್ಲವನ್ನು ಕ್ಷೇತ್ರದ ಜನತೆ ಗಮನಿಸುತ್ತಿದ್ದಾರೆ



ಎಂದಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಅವರು ಹಾಗೂ ನಾವುಗಳು ಸರಕಾರದ ಮೇಲೆ ಒತ್ತಡ ಹಾಕದೇ ಬಿಜೆಪಿಯ ಶಾಸಕಯಿಂದ ಪುರಸಭೆ ಆಗಿದ್ದೇಯೇ.? ಶಾಸಕರು ಬಿಜೆಪಿ ಅವಧಿಯಲ್ಲಿ ಯಾಕೆ ಮಾಡಿಲ್ಲ. ಪುರಸಭೆ ಕಾಂಗ್ರೆಸ್ ಸರಕಾರದ ಕೊಡುಗೆ, ಬಿಜೆಪಿಯವರು ಹಾಗೂ ಬಿಜೆಪಿ ಸರಕಾರದ ಮಾಡಿಲ್ಲ ಎಂದು ಡಾ. ಶಿಂಧೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಕಾಲೇಜಿನಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.11: ನಗರದ ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಸ್ವತಂತ್ರ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಮನೋವಿಜ್ಞಾನಿ ಡಾ. ದಿಲೀಪ್ ಕುಮಾರ ಅವರು ಮಾತನಾಡುತ್ತ, ವ್ಯಕ್ತಿಯ ಮನಸ್ಸು ಎಲ್ಲದಕ್ಕೂ ಕಾರಣ. ಆ ಮನಸ್ಸನ್ನು ಸಮಾಜದಲ್ಲಿನ ಕೆಟ್ಟದ್ದನ್ನು ತೊಡೆದುಹಾಕುವ ನಿಟ್ಟಿನಲ್ಲಿ ತೊಡಗಿಸಿಕೊಂಡು ಮಾನಸಿಕ ಆರೋಗ್ಯ ಸ್ವಸ್ಥವಾಗಿರಿಸಿಕೊಂಡು, ಸುತ್ತಲಿನ ಸಮಾಜದ ಸ್ವಾಸ್ಥವನ್ನು ಕಾಪಾಡಬೇಕು. ಮಾನಸಿಕ ಅಸ್ವಸ್ಥತೆಯ ಕಾರಣಗಳನ್ನು ಕಂಡುಹಿಡಿದು ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು. ಇಡೀ ವಿಶ್ವ ಮಾನಸಿಕವಾಗಿ ಆರೋಗ್ಯದಿಂದಿರಬೇಕು ಎಂದರು. ಜನರ ಜೀವನದ ಮೇಲೆ ಮನಸ್ಸಿನ ಮಹತ್ವ ಅದರ




ಪರಿಣಾಮಗಳರಿತು ಉತ್ತಮ ಸಮಾಜ ನಿರ್ಮಿಸಲು ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಪ್ರತಿಭೆ, ಕೌಶಲ್ಯ, ಶಕ್ತಿ, ಸಾಮರ್ಥ್ಯವಿರುತ್ತದೆ. ಅದನ್ನು ಸರಿಯಾದ ಕೆಲಸಕ್ಕೆ ನಿರಂತರ ಸದುಪಯೋಗಪಡಿಸಿಕೊಂಡಾಗ ಪ್ರತಿಭೆ ಹೊರಬರುತ್ತದೆ. ನನ್ನಿಂದ ಸಾಧ್ಯವಿಲ್ಲ ಎಂಬ ಕೀಳರಿಮೆ ಬಿಟ್ಟು, ಗುಣ-ಅವಗುಣವನ್ನು ಅರಿತು ಕಷ್ಟದ ವಿಷಯಗಳನ್ನು ಇಷ್ಟಪಟ್ಟು ನಿರಂತರವಾಗಿ ಓದಬೇಕು. ಇಲ್ಲದಿದ್ದರೆ ನಿಮ್ಮ ಪ್ರತಿಭೆ ವ್ಯರ್ಥವಾಗುತ್ತದೆ ಎಂದರು.

ಸಂಸ್ಥೆಯ ಸಂಸ್ಥಾಪಕ ಪ್ರೊ. ಚನ್ನಾರಡ್ಡಿ ಪಾಟೀಲ ಅವರು ಅಧ್ಯಕ್ಷೀಯ ನುಡಿಗಳನ್ನಾಡುತ್ತ ಮಕ್ಕಳು ತಮ್ಮ ಮನಸ್ಸನ್ನು ಸ್ವಸ್ಥವಾಗಿರಿಕೊಂಡು ಶ್ರದ್ಧೆ, ಆಸಕ್ತಿ, ನಿರಂತರ ಪ್ರಯತ್ನದಿಂದ ಓದಿ ಸಾದನೆ ಮಾಡಿ ಸಮಾಜದ ಸ್ವಾಸ್ಥ ಕಾಪಾಡುವದು ತಮ್ಮ ಕರ್ತವ್ಯವೆಂದರಿಯುಬೇಕು. ಮನಸ್ಸಿದ್ದಲ್ಲಿ ಮಾರ್ಗವಿರುತ್ತದೆ. ಉತ್ತಮ ವಿಚಾರಗಳನ್ನು, ಆಲೋಚನೆಗಳನ್ನು ಹೊಂದಿದ್ದು, ಮನಸ್ಸನ್ನು ಅಧ್ಯಯನದಲ್ಲಿ ತೆ-ಊಡಿಗಿಸಿ ಶ್ರೇಷ್ಠ ಸಾಧಕರಾಗಿ ಹೊರಹೊಮ್ಮಬೇಕೆಂದು ಪ್ರೇರೇಪಿಸಿದರು.

# ಡಿವೈಎಸ್‌ಪಿನಿಂದ ಸಚಿವರಿಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಅ.11: ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಡಿವೈಎಸ್‌ಪಿ ಸಂಘಟನೆಯ ಜಿಲ್ಲಾ ಅಧ್ಯಕ್ಷರು ಯು.ಎರ್ರಿಸ್ವಾಮಿ ಅವರ ನೇತೃತ್ವದಲ್ಲಿ..ನಿನ್ನೆ ನೆಡದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಸಮಾರಂಭಕ್ಕೆ ಬಳ್ಳಾರಿಗೆ ಆಗಮಿಸಿದ್ದ ಮಾನ್ಯ ಶ್ರೀ ಈಶ್ವರ್ ಖಂಡ್ರೆ ಅರಣ್ಯ ಜೀವಿ ಶಾಸ್ತ್ರ ಮತ್ತು ಪರಿಸರ ಖಾತೆ ಸಚಿವರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ



ನಿಯಂತ್ರಣ ಮಂಡಳಿ ಅಧ್ಯಕ್ಷರು ನರೇಂದ್ರ ಸ್ವಾಮಿ ಇವರನ್ನು ಭೇಟಿ ಮಾಡಿ ಡಿ.ವೈ.ಎಫ್.ಐ ಸಂಘಟನೆಯ ಕಾರ್ಯಕರ್ತ ಆಲಂಬಾಷ ಅವರಿಗೆ ವ್ಯಾಟ್ಸಪ್ ಕಾಲ್ ಮಾಡಿ ಬಹಳ ಕೆ-ಟ್ಟದಾಗಿ ಅವಚ್ಯ ಶಬ್ದಗಳಿಂದ ನಿಂದಿಸಿರುವ ಬಳ್ಳಾರಿ ಜಿಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಸಿದ್ದೇಶ್ವರ ಬಾಬು ವಿರುದ್ಧ ಸೂಕ್ತವಾದ ಕ್ರಮಕ್ಕಾಗಿ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಯಿತು..

ಈ ಸಂದರ್ಭದಲ್ಲಿ ಡಿ.ವೈ. ಎಫ್.ಐ ಸಂಘಟನೆಯ ಜಿಲ್ಲಾ ಉಪಾಧ್ಯಕ್ಷರಾದ ಬೈಲಾ ಹನುಮಪ್ಪ ಜಿಲ್ಲಾ ಖಜಾಂಚಿ ಬಿಪಿ ನವೀನ್ ಕ್ರೀಡಾ ಅಧ್ಯಕ್ಷರು ಜಿ.ಎನ್ ಎರ್ರಿಸ್ವಾಮಿ ತಾ. ಅಧ್ಯಕ್ಷರು ಎ.ತಿಪ್ಪೆರುದ್ರ ತಾ.ಕಾರ್ಯದರ್ಶಿ ಹೆಚ್.ಎರ್ರಿಸ್ವಾಮಿ ಮಸ್ತಾನ್ ಸಾಬ್ ಕಾರೆಕಲ್ಲು ಆಲಂಭಾಷ ನಲ್ಲಚೆರವು.ಪರಮೇಶ್ ರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಕ್ಟೋಬರ್ 14 ರಂದು "ಶ್ರಮಿಕ ತಾತ್ಕಾಲಿಕ ವಸತಿ ಸಮುಚ್ಛಯಗಳ" ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.11-ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಹಾಗೂ ಸಾರಿಗೆ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ "ಶ್ರಮಿಕ ತಾತ್ಕಾಲಿಕ ವಸತಿ ಸಮುಚ್ಚಯಗಳ ಉದ್ಘಾಟನೆ ಹಾಗೂ ಕಲಬುರಗಿ ಜಿಲ್ಲೆಯ ವಿವಿಧ ವರ್ಗದ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ"ವನ್ನು ಇದೇ ಅಕ್ಟೋಬರ್ 14 ರಂದು ಬೆಳಿಗ್ಗೆ 10 ಗಂಟೆಗೆ ಕಲಬುರಗಿ ಕೋಟನೂರ (ಡಿ) ಜೇವರ್ಗಿ ರಸ್ತೆಯ ಸಿದ್ಧಶ್ರೀ ಡಿವೈನ್ ಪ್ಯಾಲೇಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು "ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣಾ ಕಾರ್ಯಕ್ರಮ"ವನ್ನು ಉದ್ಘಾಟಿಸುವರು. ರಾಜ್ಯದ ಕಾರ್ಮಿಕ ಸಚಿವರು ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಅಧ್ಯಕ್ಷರಾದ ಸಂತೋಷ ಎಸ್. ಲಾಡ್ ಅವರು "ಕಪನೂರು ಮತ್ತು ನಂದೂರು ಕೈಗಾರಿಕಾ ಪ್ರದೇಶದಲ್ಲಿ ನಿರ್ಮಿಸಲಾದ ಶ್ರಮಿಕ ತಾತ್ಕಾಲಿಕ ವಸತಿ ಸಮುಚ್ಚಯ"ಗಳನ್ನು ಉದ್ಘಾಟಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ ಹಾಗೂ ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ವಿಶೇಷ ಆಮಂತ್ರಿತರಾಗಿ ಪಾಲ್ಗೊಳ್ಳುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಡಾ. ಅವಿನಾಶ ಉಮೇಶ ಜಾಧವ, ಬಸವರಾಜ ಮತ್ತಿಮಡು, ವಿಧಾನ ಪರಿಷತ್ ಶಾಸಕರುಗಳಾದ ಸುನೀಲ್ ವಲ್ಯಾಪುರೆ, ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಡಾ. ತಳವಾರ ಸಾಬಣ್ಣ, ಜಗದೇವ ಗುತೇ-ದಾರ್, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಮ್. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ ಹಾಗೂ ಮಹಾನಗರ ಪಾಲಿಕೆ ಮಹಾಪೌರರಾದ ವರ್ಷಾ ರಾಜೀವ ಜಾನೆ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಕಾರ್ಮಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್, ಸಾರಿಗೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಎನ್.ವಿ. ಪ್ರಸಾದ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ ಪಾಂಡೆ, ಕಾರ್ಮಿಕ ಇಲಾಖೆಯ ಆಯುಕ್ತ ಡಾ. ಎಚ್.ಎನ್. ಗೋಪಾಲಕೃಷ್ಣ, ಬೆಂಗಳೂರಿನ ಕ.ಕ. & ಇ.ನಿ.ಕಾ.ಕ. ಮಂಡಳಿಯ ಕಾರ್ಯದರ್ಶಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಭಾರತಿ ಡಿ ಹಾಗೂ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಹಾಗೂ ಸಾರಿಗೆ ಇಲಾಖೆಯ ಆಯುಕ್ತ ಯೋಗೇಶ ಎ.ಎಂ. ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸದಸ್ಯರುಗಳಾದ ಎಚ್.ಜಿ. ರಮೇಶ, ಜಾನಿ ಕೆ.ಪಿ., ಬಸಪ್ಪ, ಶ್ರೀಯಾನ್ಸ್ ಕುಮಾರ ಜೈನ್ ಹಾಗೂ ವಿಜಯಕುಮಾರ್ ಎನ್. ಪಾಟೀಲ ಅವರು ಉಪಸ್ಥಿತರಿರುವರು.

# ನಮ್ಮ ಕರ್ನಾಟಕ ಸೇನೆಯ ಕಲಬುರಗಿ ನಗರ ಘಟಕದ ಅಧ್ಯಕ್ಷರಾಗಿ ಸುರೇಶ ಜಿ ಹೊಸಮನಿ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ನಮ್ಮ ಕರ್ನಾಟಕ ಸೇನೆ ರಾಜ್ಯ ಅಧ್ಯಕ್ಷರಾದ ಬಸವರಾಜ ಪಡಕೋಟಿ ಅವರ ಆದೇಶ ಮೇರೆಗೆ ನಮ್ಮ ಕರ್ನಾಟಕ ಸೇನೆಯ ಕಲಬುರಗಿ ನಗರ ಘಟಕದ ಅಧ್ಯಕ್ಷರಾಗಿ ಸುರೇಶ ಜಿ ಹೊಸಮನಿ ಅವರನ್ನು ಬೆಂಗಳೂರಿನಲ್ಲಿ ನೇಮಕ ಮಾಡಿ ಸನ್ಮಾನಿಸಲಾಯಿತು.

ಬಸವರಾಜ ಪಡಕೋಟಿ ಅವರು ಮಾತನಾಡಿ ಈ ಕೂಡಲೇ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದು, ಸಂಘಟನೆಯನ್ನು ಪರಿಣಾಮಕಾರಿಯಾಗಿ ಸಂಘಟಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಸಾಮಾಜಿಕ ಕಳಕಳಿಯೊಂದಿಗೆ ಕಾನೂನಿನ ಚೌಕಟ್ಟಿನಲ್ಲಿ ಸಮಾಜಮುಖಿ ಹಾಗೂ ಸಮಾಜಪರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಮ್ಮ ಕರ್ನಾಟಕ ಸೇನೆ ನಿಯಮಾವಳಿ ಪ್ರಕಾರ ನೇಮಕ ಮಾಡಲಾಯಿತು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಬೀದರ ಜಿಲ್ಲಾಧ್ಯಕ್ಷ ಗಣೇಶ್ ಪಾಟೀಲ್, ಕಲಬುರ್ಗಿ ಜಿಲ್ಲಾಧ್ಯಕ್ಷ ಸುದೀದ್ರ ಎಂ ಇಜೇರಿ, ಯಡ್ರಾಮಿ ತಾಲೂಕು ಅಧ್ಯಕ್ಷ ಮಹೇಶ ಎಂ ಪಾಟೀಲ, ಚಿತ್ತಾಪುರ ತಾಲೂಕು ಅಧ್ಯಕ್ಷರಾದ ಸುನಿಲ್ ಗುತೇದಾರ್, ವಾಡಿ

# ವಾಹನ ಪೂರೈಸಲು ದರಪಟ್ಟಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.11-ಕಲಬುರಗಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ 2025-26ನೇ ಅವಧಿಗೆ 2022ರ ಮಾದರಿಯ ಸುಸಜ್ಜಿತ ಎಲ್ಲೋ ಬೋರ್ಡ್‌ವುಳ್ಳ ಮತ್ತು ಹವಾ ನಿಯಂತ್ರಿತ ಎ.ಸಿ. ವಾಹನ (ಮಾರುತಿ ಸುಜುಕಿ ಸ್ವಿಫ್ಟ್ ಡಿಜೈರ್/ ಔರಾ/ ಅಮೇಜ್/ ಈರ್ಟಿಗಾ) ಕಾರನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಹೊರಗುತ್ತಿಗೆ ಮೂಲಕ ವಾಹನ ಚಾಲಕರ ಸಮೇತ ವಾಹನ ಪೂರೈಸಲು ಇಚ್ಛೆಯುಳ್ಳ ಅರ್ಹ ಅಧಿಕೃತ ಟ್ರಾವೆಲ್ಸ್ ಏಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾಸಲಾಗಿದೆ ಎಂದು ಕಲಬುರಗಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಇಚ್ಛೆಯುಳ್ಳವರು ತಮ್ಮ ದರಪಟ್ಟಿಯನ್ನು (ಕೊಟೇಶನ್) ಮುಚ್ಚಿದ ಲಕೋಟೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) 2025ರ ಅಕ್ಟೋಬರ್ 17 ಸಾಯಂಕಾಲ 5 ಗಂಟೆಗೊಳಗಾಗಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯ ಮೊದಲನೇ ಮಹಡಿಯಲ್ಲಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಅಂದೇ ಸಾಯಂಕಾಲ 5.30 ಗಂಟೆಗೆ ದರಪಟ್ಟಿಗಳ ಲಕೋಟೆಗಳನ್ನು ತೆರೆಯಲಾಗುವುದು. ಷರತ್ತು, ನಿಬಂಧನೆ ಹಾಗೂ ಮತ್ತಿತರ ಕುರಿತು ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಹಾಗೂ ದೂರವಾಣಿ ಸಂಖ್ಯೆ 08472-255972ಗೆ ಸಂಪರ್ಕಿಸಲು ಕೋರಲಾಗಿದೆ.

# ಸಾಗರ್ ಡಿ. ಅಭಿಶಾಳ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷರಾದ ಎಂ. ಬಸವರಾಜ ಪಡಕೋಟಿ ಅವರ ಆದೇಶ ಮೇರೆಗೆ ನಮ್ಮ ಕರ್ನಾಟಕ ಸೇನೆಯ ಕಲಬುರಗಿ ಯುವ ಘಟಕ ಅಧ್ಯಕ್ಷರಾದ ಸಾಗರ್ ಡಿ. ಅಭಿಶಾಳ ಅವರನ್ನು ಆಯ್ಕೆ ಮಾಡಲಾಯಿತು.

ಈ ಕೂಡಲೇ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದು, ಸಂಘಟನೆಯನ್ನು ಪರಿಣಾಮಕಾರಿಯಾಗಿ ಸಂಘಟಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಸಾಮಾಜಿಕ ಕಳಕಳಿಯೊಂದಿಗೆ ಕಾನೂನಿನ ಚೌಕಟ್ಟಿನಲ್ಲಿ ಸಮಾಜಮುಖಿ ಹಾಗೂ ಸಮಾಜಪರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಮ್ಮ ಕರ್ನಾಟಕ ಸೇನೆ ನಿಯಮಾವಳಿ ಪ್ರಕಾರ ನೇಮಕ ಮಾಡಲಾಯಿತು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಬೀದರ ಜಿಲ್ಲಾಧ್ಯಕ್ಷ ಗಣೇಶ್ ಪಾಟೀಲ್, ಕಲಬುರ್ಗಿ ಜಿಲ್ಲಾಧ್ಯಕ್ಷ ಸುದೀದ್ರ ಎಂ ಇಜೇರಿ, ಯಡ್ರಾಮಿ ತಾಲೂಕು ಅಧ್ಯಕ್ಷ ಮಹೇಶ ಎಂ ಪಾಟೀಲ, ಚಿತ್ತಾಪುರ ತಾಲೂಕು ಅಧ್ಯಕ್ಷರಾದ ಸುನಿಲ್ ಗುತೇದಾರ್, ವಾಡಿ ಅಧ್ಯಕ್ಷ ಸಿದ್ದು ಪೂಜಾರಿ ಸೇರಿದಂತೆ ಹೋರಾಟಗಾರರು ಇದ್ದರು.

# ಮನೆ ಕೊಂಡಿ ಮುರಿದು 80 ಸಾವಿರ ರೂ.ನಗದು ಕಳವು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.11-ಮನೆಯ ಮೇನ್ ಡೋರ್ ಕೊಂಡಿ ಮುರಿದು ಅಲಮಾರಿಯಲ್ಲಿಟ್ಟಿದ್ದ 80 ಸಾವಿರ ರೂಪಾಯಿ ನಗದು ಹಣ ಕಳವು ಮಾಡಿರುವ ಘಟನೆ ನಗರದ ಬಿದ್ದಾಪುರ ಕಾಲೋನಿಯಲ್ಲಿ ನಡೆದಿದೆ.




ಅಫಜಲಪುರ ತಾಲ್ಲೂಕಿನ ಅತನೂರ ಗ್ರಾಮದ ಪಿಡಿಓ ಆಗಿರುವ ಅನುಸೂಯಾ ಆನಂದ ರದ್ದೇವಾಡಿ ಎಂಬುವವರ ಮನೆ ಮೇನ್ ಡೋರ್ ಕೊಂಡಿ ಮುರಿದು ಕಳ್ಳರು ಹಣ ದೋಚಿ-ಕೊಂಡು ಹೋಗಿದ್ದು, ಅವರು ಈ ಸಂಬಂಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

# ಸಿದ್ದರಾಮಯ್ಯ ಮೇಲೆ ತೂಗುಗತ್ತಿ: ಅಧಿಕಾರದಲ್ಲಿ ಉಳಿಯಲು ಸಂಪುಟ ಪುನಾರಚನೆ ಕಸರತ್ತು; ಬಿಹಾರ-ಕೇರಳ ಚುನಾವಣೆಯತ್ತ ಡಿಕೆಶಿ ಚಿತ್ತ!

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಮುಖ್ಯಮಂತ್ರಿ ಹುದ್ದೆಗೆ ಹಕ್ಕು ಮಂಡಿಸುವ ಪ್ರಯತ್ನಗಳನ್ನು ತಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಸಮಯದಲ್ಲಿ ತಮ್ಮ ಸಚಿವ ಸಂಪುಟವನ್ನು ಪುನರ್ರಚಿಸಲು ಪ್ರಯತ್ನಿಸುತ್ತಿದ್ದಾರೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಅವರು ತಮ್ಮದೇ ಆದ ಯೋಜನೆಯನ್ನು ರೂಪಿಸಿಕೊಂಡು ನವೆಂಬರ್‌ನಲ್ಲಿ ಬಿಹಾರ ಮತ್ತು ಏಪ್ರಿಲ್‌ನಲ್ಲಿ ಕೇರಳದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಯಶಸ್ಸಿಗೆ ತಾವು ಪ್ರಮುಖ ಕಾರಣ ಎಂಬುದನ್ನು ಗಮನಕ್ಕೆ ತರಲು ಮುಂದಾಗಿದ್ದಾರೆ.

ಶಿವಕುಮಾರ್ ಅವರು ವಿಶೇಷವಾಗಿ ಚುನಾವಣೆಗಳ ಸಮಯದಲ್ಲಿ ಉತ್ತಮ ಸಂಘಟಕರಾಗಿ ಹೆಸರುವಾಸಿಯಾಗಿದ್ದಾರೆ. ಎರಡು ವಿಧಾನಸಭಾ ಚುನಾವಣೆಗಳಲ್ಲಿ ಅವರ ಸಂಪೂರ್ಣ ಸಹಕಾರವು ಪಕ್ಷಕ್ಕೆ ನಿರ್ಣಾಯಕವಾಗಿರುತ್ತದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಿಗಮಗಳು ಮತ್ತು ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಚುನಾವಣೆಗಳು ನಡೆಯಲಿವೆ, ಅಲ್ಲಿಯೂ ಅವರು ಪಕ್ಷಕ್ಕೆ ಮಾರ್ಗದರ್ಶಕ ಶಕ್ತಿಯಾಗಲಿದ್ದಾರೆ.

2023 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಗೆದ್ದ ಕೂಡಲೇ "ರಹಸ್ಯ" ಒಪ್ಪಂದದ ಬಗ್ಗೆ ಶಿವಕುಮಾರ್ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರಿಗೆ ನೆನಪು ಮಾಡುತ್ತಿದ್ದಾರೆ. ಐದು ವರ್ಷಗಳ ಪಕ್ಷದ ಅಧಿಕಾರಾವಧಿಯ ಮೊದಲಾರ್ಧದಲ್ಲಿ ಸಿದ್ದರಾಮಯ್ಯ ಮತ್ತು ಉಳಿದ ಅವಧಿಯನ್ನು ಶಿವಕುಮಾರ್ ರಾಜ್ಯವನ್ನು ಆಳುವ ನಿರೀಕ್ಷೆಯಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಡಿ.ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ

ತೆಲಂಗಾಣದಂತೆ ಕೇರಳದಲ್ಲೂ ನಡೆ-




ಯುತ್ತಾ ಡಿ.ಕೆ ಶಿವಕುಮಾರ್ ಮ್ಯಾಜಿಕ್? ಹೈಕಮಾಂಡ್ ಇಟ್ಟಿರುವ ಭರವಸೆಯೇನು?

ಒಂದು ತಿಂಗಳ ಹಿಂದೆ ಶಿವಕುಮಾರ್ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಭೇಟಿಯಾಗಿದ್ದರು, ಏಕೆಂದರೆ ಅವರು ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವಿನ ಅಧಿಕಾರ ಹೋರಾಟದ ಕೇಂದ್ರಬಿಂದುವಾಗಿರುವ ಒಪ್ಪಂದದಲ್ಲಿ ಅವರು ಕೂಡ ಭಾಗಿಯಾಗಿದ್ದಾರೆ ಎಂದು ವರದಿಯಾಗಿದೆ.

ಕೆಲವು ತಿಂಗಳ ಹಿಂದೆ, ಸಿದ್ದರಾಮಯ್ಯ ಕೆಲವು ಕಾಂಗ್ರೆಸ್ ನಾಯಕರು ಮತ್ತು ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಚಿವರಾಗುವ ಬಯಕೆಯನ್ನು ಬಳಸಿಕೊಂಡಿದ್ದರು. ಈ ಶಾಸಕರಿಗೆ ಸಂಪುಟ ಸ್ಥಾನ ನೀಡುವ ಭರವಸೆ ನೀಡಿದ್ದರು. ಜೊತೆಗೆ ಮುಖ್ಯಮಂತ್ರಿಯಾಗಿ ಮುಂದುವರಿಯಲು ಬಯಸುತ್ತಾರೆ ಎಂದು ಮೂಲಗಳು ತಿಳಿಸಿವೆ.

ಈ ಬೆಳವಣಿಗೆ ಶಿವಕುಮಾರ್ ಅವರಿಗೆ ಹಿನ್ನಡೆಯಾಗಿದೆ, ಆದರೆ ಬಿಹಾರ ಚುನಾವಣೆಯ ನಂತರ ಅವರ ಬಣವು ತಮ್ಮ ಧ್ವನಿ ಎತ್ತುವ ಸಾಧ್ಯತೆಯಿದೆ. ಬಿಹಾರ ಚುನಾವಣೆ ಮತ್ತು ಕೇರಳ ಚುನಾವಣೆಯ ಸಮಯದಲ್ಲಿ ಶಿವಕುಮಾರ್ ಅವರಿಗೆ ಕೆಲವು ಪ್ರಮುಖ ಕಾರ್ಯಗಳನ್ನು ನೀಡಬಹುದು. ಪಕ್ಷ-ಕ್ಕೆ ಅವರ ಕೊಡುಗೆ ಫಲ ನೀಡುವ ಸಾಧ್ಯತೆಯಿದೆ. ಇದು ಸಿಎಂ ಹುದ್ದೆಗೆ ಹಕ್ಕು ಸಾಧಿಸಲು ಸಹಾಯವಾಗುತ್ತದೆ ಎಂದು ಕಾಂಗ್ರೆಸ್ ಮೂಲವೊಂದು ತಿಳಿಸಿದೆ.

ಡಿ.ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ

ನಾಯಕತ್ವ ಗೊಂದಲ: ಹೈಕಮಾಂಡೇ ತೆರೆ ಎಳೆಯಬೇಕಿದೆ (ನೇರ ನೋಟ)

ಮಾಜಿ ಸಚಿವ ಮತ್ತು ಸಿದ್ದರಾಮಯ್ಯ ಅವರ ಆಪ್ತ ಕೆ.ಆರ್. ರಮೇಶ್ ಕುಮಾರ್ ಅವರ ಮಗ ಹರ್ಷ ಕಾನಡಂ ಅವರನ್ನು ಕೇರಳದಲ್ಲಿ ಕಾಂಗ್ರೆಸ್ ವಾರ್ ರೂಮ್ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಅವರನ್ನು ಶಿವಕುಮಾರ್ ಅವರ ಆಪ್ತ ಎಂದು ಹೇಳಲಾಗುತ್ತಿದೆ.

ಸಿದ್ದರಾಮಯ್ಯ ಅವರು ಇನ್ನೂ ಕೆಲಸ ಮುಗಿಸಿಲ್ಲ ಎಂದು ತೋರುತ್ತದೆ, ಏಕೆ-ಂದರೆ ಅವರು ಜನವರಿಯಲ್ಲಿ ದೀರ್ಘಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ್ ಅರಸು ಅವರ ದಾಖಲೆಯನ್ನು ಮುರಿಯುವುದು ಸೇರಿದಂತೆ ಹಲವು ಮೈಲಿಗಲ್ಲುಗಳನ್ನು ತಲುಪುವ ಪ್ಲಾನ್ ಹೊಂದಿದ್ದಾರೆ. ಮಾರ್ಚ್/ಏಪ್ರಿಲ್‌ನಲ್ಲಿ ಬಜೆಟ್ ಮಂಡಿಸಲು ಯೋಜಿಸುತ್ತಿದ್ದಾರೆ. ಆದರೆ ಶಿವಕುಮಾರ್ ವಿಶ್ರಾಂತಿ ಪಡೆಯುವ ಸಾಧ್ಯತೆಯಿಲ್ಲ, ಮತ್ತು ಹೈಕಮಾಂಡ್ ಮೇಲೆ ಒತ್ತಡ ಹೇರುವುದನ್ನು ಮುಂದುವರಿಸುತ್ತಾರೆ.

## ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರೀಯವಾದಿ ಜಯಪ್ರಕಾಶ್ ನಾರಾಯಣ್



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ :ಅ.11: 'ಜೆಪಿ' ಎಂದು ಪ್ರಸಿದ್ಧಿ ಹೊಂದಿರುವ ಜಯಪ್ರಕಾಶ್ ನಾರಾಯಣ್ ಭಾರತದ ಒಬ್ಬ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರೀಯವಾದಿ, ಸಮಾಜವಾದಿ ನಾಯಕ. "ಸಂಪೂರ್ಣ ಕ್ರಾಂತಿ"ಯನ್ನು ಮುನ್ನೆಡಿಸಿದವರು. ಗಾಂಧಿ ಮತ್ತು ಎಂ.ಎನ್.ರಾಯ್‌ರ ವಿಚಾರಗಳಿಂದ ಪ್ರಭಾವಿತರಾಗಿದ್ದರು ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ್ ಹೇಳಿದರು.

ನಗರದ ಆಳಂದ ರಸ್ತೆಯ ಜೆ.ಆರ್ ನಗರದಲ್ಲಿನ 'ಸಕ್ಸಸ್ ಕಂಪ್ಯೂಟರ್ ತರಬೇತಿ ಸಂಸ್ಥೆ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಜಯಪ್ರಕಾಶ್ ನಾರಾಯಣ್‌ರ 123ನೇ ಜನ್ಮದಿನಾಚರಣೆ'ಯ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಅವರು ಮಾತನಾಡುತ್ತಿದ್ದರು.

"ಭಾರತ ರತ್ನ" ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ರಾಷ್ಟ್ರೀಯವಾದಿ ಮತ್ತು ಲೇಖಕ ರಾಮವೃಕ್ಷಬೇನಿಪುರಿ ಅವರು ತಮ್ಮ ಜೀವನಚರಿತ್ರೆಯನ್ನು ಬರೆದಿದ್ದಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯರಾಗಿದ್ದರು.

1970ರ ದಶಕದಲ್ಲಿ "ಸಂಪೂರ್ಣ ಕ್ರಾಂತಿ"ಯನ್ನು ಮುನ್ನಡೆಸಿದರು.

ಅಹಿಂಸಾತ್ಮಕ ಪ್ರತಿಭಟನೆ ಮತ್ತು ಜನಸಂಘಟನೆಯ ಮೂಲಕ ವ್ಯವಸ್ಥೆಯಲ್ಲಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರು.

'ಭೂದಾನ ಯಜ್ಞ' ಚಳುವಳಿಯ ಹರಿಕಾರರಾಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಶಿಕ್ಷಕಿಯರಾದ ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್, ಸ್ನೇಹಾ ಚೌಹಾಣ ಹಾಗೂ ವಿದ್ಯಾರ್ಥಿಗಳು ಇದ್ದರು.

## ಹೆಚ್.ಐ.ವಿ/ಏಡ್ಸ್ ನಿಯಂತ್ರಣಕ್ಕಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಮ್ಯಾರಾಥಾನ ಸ್ಪರ್ಧೆ: ಹೆಸರು ನೋಂದಣಿಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.10– "ಯುವಜನೋತ್ಸವ–2025"ರ ಅಂಗವಾಗಿ ಹಾಗೂ ಹೆಚ್.ಐ.ವಿ/ಏಡ್ಸ್ ನಿಯಂತ್ರಣಕ್ಕಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ (ರೆಡ್‌ರಿಬ್ಬನ್ ರನ್) ಮ್ಯಾರಾಥಾನ ಓಟದ ಸ್ಪರ್ಧೆಯನ್ನು ಇದೇ ಅಕ್ಟೋಬರ್ 13 ರಂದು ಬೆಳಿಗ್ಗೆ 6.30 ಗಂಟೆಗೆ ಕಲಬುರಗಿ ನಗರದ ಸರದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕದ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮ್ಯಾರಾಥಾನ್ ಓಟದ ಸ್ಪರ್ಧೆಯನ್ನು ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಏರ್ಪಡಿಸಲಾಗುತ್ತದೆ. ವಯೋಮಿತಿ 17 ರಿಂದ 25 ವಯಸ್ಸಿನ ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ ಭಾಗವಹಿಸಬೇಕು. ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿನ ಗುರುತಿನ ಚೀಟಿ ಮತ್ತು ಪ್ರಾಚಾರ್ಯರಿಂದ ಅಥವಾ ಎನ್.ಎಸ್.ಎಸ್ ಅಧಿಕಾರಿಗಳಿಂದ ಸ್ಪರ್ಧೆಯಲ್ಲಿ ಭಾಗವಹಿಸುವ ಕುರಿತು ಪತ್ರವನ್ನು ತೆಗೆದು–ಕೊಂಡು ಬರಬೇಕು.

ಈ ಸ್ಪರ್ಧೆಗೆ ವಿದ್ಯಾರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಭಾಗವಹಿಸಬೇಕು. ಈ ಸ್ಪರ್ಧೆಯ ದಿನದಂದು ಸರಿಯಾದ ಸಮಯಕ್ಕೆ ಹಾಜರಾಗಬೇಕು. ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಲಘು ಉಪಹಾರದ ವ್ಯವಸ್ಥೆ ಇರುತ್ತದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ (ಓರ್ವ ವಿದ್ಯಾರ್ಥಿ ಹಾಗೂ ಓರ್ವ ವಿದ್ಯಾರ್ಥಿನಿಯರನ್ನು) ಇಬ್ಬರು ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಬೇಕಾಗುತ್ತದೆ.

ಈ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪತ್ಯೇಕವಾಗಿ ಬಹುಮಾನ ನೀಡಲಾಗುತ್ತದೆ. ಪ್ರಥಮ ಬಹುಮಾನ 5000 ರೂ., ದ್ವಿತೀಯ ಬಹುಮಾನ 3500 ರೂ. ಹಾಗೂ ತೃತೀಯ ಬಹುಮಾನ 2500 ರೂ. ನೀಡಲಾಗುತ್ತದೆ.

ಕಲಬುರಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯ 3ನೇ ಮಹಡಿಯಲ್ಲಿರುವ ಜಿಲ್ಲಾ ಏಡ್ಸ್ ನಿಯಂತ್ರಣ ಹಾಗೂ ತಡೆಗಟ್ಟುವ ಘಟಕ ಕಚೇರಿಯ ಜಚಿಆಭಿಣ–ಇಚಿಟಚಿಛಣಡಿಚಿರು@ರಟಚಿಟ. ಛಿಠಟ ಇ–ಮೇಲ್ ವಿಳಾಸಕ್ಕೆ ಹಾಗೂ ವಾಟ್ಸ್‌ಆಪ್ ಸಂಖ್ಯೆ 6364185236, 9611220243, 8105783609 ಗಳ ಮೂಲಕ 2025ರ ಅಕ್ಟೋಬರ್ 13ರೊಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಲು ಅಥವಾ ಸ್ಪರ್ಧೆ ನಡೆಯುವ ಸ್ಥಳದಲ್ಲಿ ಬೆಳಿಗ್ಗೆ 6 ಗಂಟೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಈ ಮ್ಯಾರಾಥಾನ್ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

## ವಿಶ್ವ ವಸತಿ ರಹಿತರ ದಿನಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಅ. 11– ಕರ್ನಾಟಕ ಸರ್ಕಾರ. ಕೌಶಲ್ಯಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ, ಡೇ ನಲ್ಮ ಯೋಜನೆ ನಗರ ವಸತಿ ರಹಿತರ ಉಪ ಘಟಕ, ನಗರ ಸಭೆ ಬಸಕಲ್ಯಾಣ ಮತ್ತು ಭಾಗ್ಯ ಅಭಿವೃದ್ಧಿ ಸೇವಾ ಸಂಸ್ಥೆ ಸಂಯುಕ್ತಶ್ರಯದಲ್ಲಿ ಭಾಗ್ಯನಗರ ನಿರಾಶ್ರೀತರ ತಂಗುದಾಣದಲ್ಲಿ ವಿಶ್ವ ವಸತಿ ರಹಿಹಿತರ ದಿನಾಚರಣೆಯ ಕಾರ್ಯಕ್ರಮ ಜರುಗಿತು.

ಅತಿಥಿಗಳಾಗಿ ನಗರಸಭೆಯ ಸಮುದಾಯ ಸಂಪಂನ್ಮೂಲ ವ್ಯಕ್ತಿಯಾದ ರಾಣಿಮಾ ಅವರು ಮಾತನಾಡಿ ಈ ಯೋಜನೆ ಅಡಿಯಲ್ಲಿ ಮಹಿಳೆಯರು ಸ್ವ –ಸಹಾಯ ಗುಂಪುಗಳು ರಚಿಸಿಕೊಂಡು, ಬ್ಯಾಂಕು ಗಳ ಮೂಲಕ ಸಾಲ ಸೌಲಭ್ಯಗಳನ್ನು ಪಡೆದುಕೊಂಡು ವೃತ್ತಿ ತರಬೇತಿ ಗಳನ್ನು ಪಡೆದುಕೊಂಡು ಸ್ವ –ಉದ್ಯೋಗದ ಮೂಲಕ ತಮ್ಮ ತಮ್ಮ ಕುಟುಂಬಗಳ ಆರ್ಥಿಕತೆಯನ್ನು ಉತ್ತಮ ಪಡಿಸಿಕೊಂಡು ಸ್ವಾವಲಂಬಿ ಜೀವನ ನಡೆಸಬಹುದು ಎಂದು ಹೇಳಿದರು.

ಅಧ್ಯಕ್ಷತೆ ಕರಬಸಯ್ಯ ಸ್ವಾಮಿ ವಹಿಸಿ ಮಾತನಾಡಿ ಈ ತಂಗುದಣದ ನಗರದಲ್ಲಿ ವಸತಿ ರಹಿತ ಬಡವರಿಗೆ ತಾತ್ಕಾಲಿಕ ಆಶ್ರಯ ಪಡೆಯಬಹುದು ಪಡೆದಂತ ಫಲನುಭವಿ ಗಳಿಗೆ ವೃತ್ತಿ ತರಬೇತಿ ಪಡೆಯಲು ಇಚ್ಚೆಸಿದರೆ ಅಂಥವರಿಗೆ ತರಬೇತಿ ಗಳನ್ನು ಸಹ ನೀಡಿ ಅವರನ್ನು ಸ್ವ ಉದ್ಯೋಗ ಕೈಗೊಳ್ಳಲು ಸಹಕಾರ ನೀಡಲಾಗುವುದು ಎಂದರು.

ನಗರ ಬೀದಿ ಬದಿ ವ್ಯಾಪಾರಿಗಳ ಸಂಘದ ಉಪಾಧ್ಯಕ್ಷರಾದ ಮೊಹಮದ್ ಖಜಾಮಿಯಾ, ಸಮುದಾಯ ಸಂಪನ್ಮೂಲ ವ್ಯಕ್ತಿ ಸರಸ್ವತಿ. ಸಮುದಾಯ ಸಂಯೋಜಕರು, ಸ್ವ ಸಹಾಯ ಗುಂಪಿನ ಸಧ್ಯಸರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸರಸ್ವತಿ ಸ್ವಾಗತಸಿದರು. ತಂಗುದಾನದ ಕೇರ್–ಟೇಕರ್ ರಾಜೇಂದ್ರ ಹೊಲ್ಕರ್ ಕಾ ನಿರೂಪಿಸಿದರು ವಂದಿಸಿದರು.

## ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:

ಅ.10–ಪ್ರಸಕ್ತ 2025–26ನೇ ಸಾಲಿನ ಜಿಲ್ಲಾ ವಲಯ ಯೋಜನೆಯಡಿ ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ವೃತ್ತಿನಿರತ ಅಭ್ಯರ್ಥಿಗಳಿಂದ ಉಚಿತವಾಗಿ ಬಡಗಿತನ ಹಾಗೂ ಗೌಂಡಿ ವೃತ್ತಿಯ ಉಪಕರಣಗಳನ್ನು ಪಡೆಯಲು ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಅಕ್ಟೋಬರ್ 25ರವರೆಗೆ ವಿಸ್ತರಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಪಂಚಾಯತ್ (ಗ್ರಾ.ಕೈ.) ಉಪನಿರ್ದೇಶಕರು ತಿಳಿಸಿದ್ದಾರೆ.

# ನಾಲ್ಕನೇ ಸ್ವಾಭಿಮಾನಿ ಕಲ್ಯಾಣ ಪರ್ವಕ್ಕೆ ಸಂಭ್ರಮದ ಚಾಲನೆ

## ವಿಶ್ವದ ಸಮಸ್ಯೆಗಳಿಗೆ ಬಸವ ಸಿದ್ಧಾಂತವೇ ಪರಿಹಾರ: ವಿಜಯಸಿಂಗ





ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: ಅ .11 –ವಿಶ್ವದ ಸಮಸ್ಯೆಗಳಿಗೆ ಬಸವ ಸಿದ್ಧಾಂತವೇ ಪರಿಹಾರವಾಗಿದೆ. ಪ್ರತಿಯೊಬ್ಬರೂ ಬಸವ ತತ್ವದಲ್ಲಿ ನಂಬಿಕೆ ಇಡಬೇಕು. ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ದೊರಕಬೇಕಾದರೆ ಬುದ್ಧ ಬಸವ ಅಂಬೇಡ್ಕರರ ಮಾರ್ಗದಲ್ಲಿ ಸಾಗಬೇಕೆಂದು ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ ತಿಳಿಸಿದರು.

ನಗರದ ಸಸ್ತಾಪುರ ಬಂಗ್ಲಾ ಸಮೀಪದ ಎಂ. ಎಂ. ಬೇಗ್ ಸಭಾಮಂಟಪದಲ್ಲಿ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ ಹಾಗೂ ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ 4ನೇ ಸ್ವಾಭಿಮಾನಿ ಕಲ್ಯಾಣ ಪರ್ವ ಉದ್ಘಾಟಿಸಿ ಮಾತನಾಡಿದ ಅವರು

ನಮ್ಮ ತಂದೆ ದಿ. ಧರ್ಮಸಿಂಗ್ ಅವರು ಲಿಂ. ಮಾತಾಜಿಯವರ ಶಿಷ್ಯರಾಗಿದ್ದರು. ಮಾತಾಜಿ ಒಬ್ಬ ಮಹಿಳೆಯಾಗದೆ ದೇವರ ಸ್ಥಾನದಲ್ಲಿದ್ದರು ಎಂದು ನಮ್ಮ ತಂದೆಯವರು ಯಾವಾಗಲೂ ಹೇಳುತ್ತಿದ್ದರು. ಮಾತೆ ಮಹಾದೇವಿ ಅವರು ಬಸವಕಲ್ಯಾಣಕ್ಕೆ ಬಂದು ಈ ಪುಣ್ಯಭೂಮಿಯನ್ನು ವಿಶ್ವಮಟ್ಟದಲ್ಲಿ ಪರಿಚಯಿಸಿದರು ಎಂದು ತಿಳಿಸಿದರು.

ದಿವ್ಯ ಸಾನಿಧ್ಯ ವಹಿಸಿ ಬೆಂಗಳೂರಿನ ಚನ್ನಬಸವೇಶ್ವರಜ್ಞಾನಪೀಠದ ಪೀಠಾಧ್ಯಕ್ಷರಾದ ಪೂಜ್ಯಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ ವಚನ ಸಾಹಿತ್ಯದ ಶುದ್ಧಿಕರಣ ಮತ್ತು ಪರಿಷ್ಕರಣೆಯ ಅವಶ್ಯಕತೆ ಇದೆ. ಬಸವಾದಿ ಶರಣರು ಅನುಭವ ಮಂಟಪ ಪದ್ಧತಿ ಜಾರಿಗೆ ತಂದೆ ಇಂದು ಕೆಲವರು ಶಿವ ಪದವನ್ನು ಸೇರಿಸಿ ಶಿವಾನುಭವ ಎನ್ನುತ್ತಿದ್ದಾರೆ. ಶರಣರು ಎನ್ನುವ ಪದಕ್ಕೆ ಶಿವ ಸೇರಿಸಿ ಶಿವಶರಣರು ಎಂದು ಹೇಳಿ ಶೈವ ಸಂಸ್ಕೃತಿ ವಚನ ಸಾಹಿತ್ಯದೊಳಗೆ ನುಗ್ಗಿಸುವ ಕಾರ್ಯ ನಡೆಯುತ್ತಿರುವುದು ಖಂಡನೀಯ ಎಂದರು. 12ನೇ ಶತಮಾನದಲ್ಲಿ ಬಸವಾದಿ ಶರಣರನ್ನು ಕೊಂಡಿ ಮಂಚಣ್ಣರು ಓಡಿಸಿದಾಗ ನೋವಿನಿಂದ ಶರಣರು ಚದುರಿದರು. ಮತ್ತು 21ನೇ ಶತಮಾನದಲ್ಲಿ ಅದೇ ಮಣಿಹ ಹೊತ್ತು ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಕಲ್ಯಾಣಕ್ಕೆ ಬಂದು ಅಭಿವೃದ್ಧಿ ಮಾಡುತ್ತಿದ್ದರೆ, ಒಳಗಿನ ಮತ್ತು ಹೊರಗಿನ ಅದೇ ಕೊಂಡಿ ಮಂಚಣ್ಣ ಸಂತತಿಯವರು ವಿರೋಧಿಸಿದರು.

ನಿಜವಾದ ನಿಷ್ಠಾವಂತ ಪೂಜ್ಯರು ಮತ್ತು ಶರಣರು ಹೊರಗಿದ್ದೇವೆ. ಅನರ್ಹರು, ಬಂಡವಾಳಶಾಹಿಗಳು ಒಳಗಿದ್ದು ಬಸವ ಧರ್ಮ ಪೀಠವನ್ನು ಒಡೆಯುತ್ತಿದ್ದಾರೆ. ಪೀಠಾಧ್ಯಕ್ಷರಾಗಲು ಯೋಗ್ಯತೆ ಬೇಕು. ಸುಮ್ಮನೆ ಅವರವರನ್ನು ಕಂಡರೆ ಅವರವರಂತೆ ಹಾಡುವುದರಿಂದ ಬಸವ ತತ್ವ ಪ್ರಚಾರವಾಗಲು ಸಾಧ್ಯವಿಲ್ಲ ಎಂದು ಸ್ವಾಮೀಜಿ ಪ್ರತಿಪಾದಿಸಿದರು. ಹಳ್ಳಿಹಳ್ಳಿಗಳಿಗೆ ಬಸವ ತತ್ವ ಪ್ರಚಾರ ಮಾಡಿ, ಲಿಂಗಾಯತ ಧರ್ಮದ ದೇವರು ಲಿಂಗದೇವ ಎಂದು ತಿಳಿಸಿಕೊಟ್ಟರು.

ಷಟಸ್ಥಳ ಧ್ವಜಾರೋಹಣ ನೆರವೇರಿಸಿದ ಅಖಿಲ ಭಾರತ ಲಿಂಗಾಯತ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕರಾದ ಶ್ರೀಕಾಂತ ಸ್ವಾಮಿ ಮಾತನಾಡಿ ಬಸವ ಸಂಸ್ಕೃತಿ ಅಭಿಯಾನ ಯಶಸ್ವಿಯಾಗಿದ್ದೇ ರಾಷ್ಟ್ರೀಯ ಬಸವ ದಳದ ಮಾತಾಜಿ ಶಿಷ್ಯರಿಂದ. ಮಾತಾಜಿ ಬಸವ ಮಂಟಪ ಸ್ಥಾಪನೆ ಮಾಡಬಾರದಾಗಿತ್ತು ಎಂದು ಹೇಳುವ ಕೆಲವು ಮಠಾಧೀಶರು ಅಭಿಯಾನದ ಸಂದರ್ಭದಲ್ಲಿ ವಸತಿ ಮಾಡಿದ್ದೇ ಮಾತಾಜಿ ಸ್ಥಾಪಿಸಿದ ಬಸವ ಮಂಟಪಗಳಲ್ಲಿ. ಹಲವು ಮಠಾಧೀಶರು ಮಠ ಬಿಟ್ಟು ಹೊರಗಡೆ ಬಂದಿರಲಿಲ್ಲ. ಈಗ ಹೊರಗೆ ಬಂದು ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆ. ಆದರೆ ಇವರಾರಿಗೂ ಅನ್ಯ ಜಿಲ್ಲೆಗಳಲ್ಲಿ ಶಿಷ್ಯರಿಲ್ಲ. ಇವರೆಲ್ಲ ನಂಬಿಕೊಂಡಿದ್ದೇ ಮಾತಾಜಿ ಶಿಷ್ಯರಿಗೆ ಎಂದು ತಿಳಿಸಿದರು.

ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷರಾದ ಬಸವರಾಜ ಪಾಟೀಲ ಶಿವಪುರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ 2000ನೇ ಇಸವಿಯಲ್ಲಿ ಪೂಜ್ಯ ಮಾತಾಜಿಯವರನ್ನು ಕಲ್ಯಾಣಕ್ಕೆ ಕರೆತಂದು, ಜಾಗ ಕೊಡಿಸಿ ಇದೇ ಕಲ್ಯಾಣದ ಜನರಿಂದ ವಿರೋಧ ಕಟ್ಟಿಕೊಂಡು, ಪೊಲೀಸರಿಂದ ಪೆಟ್ಟು ತಿಂ–ದು ಸಂಘಟನೆ ಮಾಡಿದೇವು. ಆದರೆ ನಿಜವಾದ ಮಾತಾಜಿ ಶಿಷ್ಯರು ಹೊರಗಿದ್ದೇವೆ. ಬಸವ ಮಹಾಮನೆಯಲ್ಲಿರುವ ಇಂದಿನ ಸ್ವಾಮಿಯೊಬ್ಬರು ಗ್ರಂಥಾಲಯ ತೆಗೆದು ಮಾತಾಜಿಯವರ ಸಾಹಿತ್ಯನಾಶ ಮಾಡುವ ಕಾರ್ಯ ಮಾಡುತ್ತಿರುವುದು ಅಕ್ಷಮ್ಯ ಅಪರಾಧ. ಇಂದಲ್ಲ ನಾಳೆ ನಾವು ನ್ಯಾಯ ಪಡೆದೇ ತೀರುತ್ತೇವೆ ಎಂದರು.

ನೇತೃತ್ವ ಚಿಕ್ಕಮಗಳೂರಿನ ಪೂಜ್ಯ ಶ್ರೀ ಡಾ. ಜಯಬಸವಾನಂದ ಸ್ವಾಮೀಜಿ, ಮಾತೆ ಸತ್ಯಾದೇವಿ, ಮಾತೆ ಶಾಂತಾದೇವಿ, ಧುಮ್ಮನಸೂರ ಮುಕ್ತಿನಾಥ ಮಠದ ಪೂಜ್ಯ ಶಂಕರಲಿಂಗ ಸ್ವಾಮೀಜಿ ವಹಿಸಿದ್ದರು. ಅಧ್ಯಕ್ಷತೆಯನ್ನು ಚಿಕ್ಕಮಗಳೂರಿನ ರಾ.ಬ.ದಳ. ಅಧ್ಯಕ್ಷ ಬಾಣೂರು ಚನ್ನಪ್ಪ ವಹಿಸಿದ್ದರು. ಇದೇ ವೇಳೆ ಸಚ್ಚಿದಾನಂದ ಚಟನಳ್ಳಿ ವಿರಚಿತ ವಚನ ಪರುಷ ಕೃತಿಯನ್ನು ಬಿಡುಗಡೆ ಮಾತಲಾಯಿತು. ಈ ಸಂದರ್ಭದಲ್ಲಿ ಬೆಳಗಾವಿಯ ಅಶೋಕ ಬೆಂಡಿಗೇರಿ, ಡಾ.ಮಹೇಶ ಬಿರಾದಾರ, ಶಿವರಾಜ ಪಾಟೀಲ ಅತಿವಾಳ, ನ್ಯಾಯವಾದಿ ಅಶೋಕ ಮಾನೂರೆ, ರವಿಕಾಂತ ಬಿರಾದಾರ, ಗಣಪತಿ ದೇಶಮುಖ, ಹೈದರಾಬಾದನ ಭೀಮರಾವ ಬಿರಾದಾರ, ಓಂಪ್ರಕಾಶ ರೊಟ್ಟೆ, ಗಣಪತಿ ದೇಶಮುಖ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಳ್ಳಾರಿಯ ಅಂದ್ರಾಳು ರಾ.ಬ.ದಳದ ಕು. ಅಕ್ಕಮಹಾದೇವಿ ತಂಡ ವಚನ ನೃತ್ಯ ನಡೆಸಿಕೊಟ್ಟರು. ಗಂಗಾವತಿ ವೀರೇಶ ನಿರೂಪಿಸಿದರೆ, ಬಸವರಾಜ ಪಾಟೀಲ ಶಿವಪುರ ಸ್ವಾಗತಿಸಿದರು. ಶ್ರೀನಾಥ ಕೋರೆ ವಂದಿಸಿದರು.

### ಶೀಘ್ರದಲ್ಲೇ ಲಿಂಗಾಯತ ಧರ್ಮ ಪ್ರಸಾರಕರ ವೇದಿಕೆ ಸ್ಥಾಪನೆ: ಚನ್ನಬಸವಾನಂದ ಶ್ರೀ

ಕೇವಲ ಬಸವ ತತ್ವ ಪ್ರಚಾರವನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಮಾಡಲು ಲಿಂಗಾಯತ ಧರ್ಮ ಪ್ರಸಾರಕರ ವೇದಿಕೆ ಸ್ಥಾಪನೆ ಮಾಡಲಾಗುತ್ತಿದೆ. ಈಗಾಗಲೇ ಎಲ್ಲಾ ಪ್ರಕ್ರಿಯೆ ಮುಗಿದಿವೆ. ನೊಂದಣಿ ಮಾಡಿಸಲಾಗುತ್ತಿದೆ. ಈ ವೇದಿಕೆಯಲ್ಲಿ ಸುಮಾರು 500ಕ್ಕೂ ಹೆಚ್ಚು ಬಸವಪರ ಮಠಾಧೀಶರು ಸದಸ್ಯತ್ವ ಪಡೆಯಲಿದ್ದಾರೆ ಎಂದು ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ನಾಲ್ಕನೇ ಸ್ವಾಭಿಮಾನಿ ಕಲ್ಯಾಣ ಪರ್ವದಲ್ಲಿ ತಿಳಿಸಿದರು.



ಬಸವಕಲ್ಯಾಣ :– ನಗರದ ಎಂ. ಎಂ. ಬೇಗ ಸಭಾ ಮಂಟಪದಲ್ಲಿ 4 ನೇ ಸ್ವಾಭಿಮಾನ ಕಲ್ಯಾಣ ಪರ್ವದ ಕಾರ್ಯಕ್ರಮದಲ್ಲಿ ಔರಾದ ಬಿ. ಸಹಶಿಕ್ಷಕರಾದ ಜಗನ್ನಾಥ ಮೂಲಗೆ ಅವರಿಗೆ ಶರಣ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ಪೂಜ್ಯ ಶ್ರೀ ಚನ್ನಬಸವನಂದ ಸ್ವಾಮಿಜಿ. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಬಸವರಾಜ ಪಾಟೀಲ ಶಿವಪೂರ. ಶ್ರೀಕಾಂತ ಸ್ವಾಮಿ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## 24 ನೇಯ ಕಲ್ಯಾಣ ಪರ್ವ ಕಾರ್ಯಕ್ರಮವನ್ನು ಆರ್. ಬಿ. ತಿಮ್ಮಾಪೂರವರಿಂದ ಉದ್ಘಾಟನೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:– ಅ 11 ಇಲ್ಲಿನ ಬಸವ ಧರ್ಮ ಪೀಠದ ಬಸವ ಮಹಾಮನೆಯ ಆವರಣದಲ್ಲಿ 24ನೇ ಕಲ್ಯಾಣ ಪರ್ವ ಕಾರ್ಯಕ್ರಮವನ್ನು ಶನಿವಾರ ಕರ್ನಾಟಕ ಸರ್ಕಾರದ ಅಬಕಾರಿ ಸಚಿವರಾದ ಆರ್. ಬಿ. ತಿಮ್ಮಾಪೂರ ಅವರು ಉದ್ಘಾಟಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ದಿವ್ಯ ಸಾನಿಧ್ಯ ಕೂಡಲ ಸಂಗಮ ಬಸವ ಧರ್ಮ ಪೀಠದ ಪೀಠಾಧ್ಯಕ್ಷರಾದ ಡಾ. ಮಾತೆ ಗಂಗಾದೇವಿ ವಹಿಸಿದ್ದರು. ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಜಿ. ಭಾಲ್ಕಿಯ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು. ಅನುಭವ ಮಂಟಪ ಟ್ರಸ್ಟಿನ ಸಂಚಾಲಕರಾದ ಪೂಜ್ಯ ಶ್ರೀ ಶಿವಾನಂದ ದೇವರು. ಪೂಜ್ಯಶ್ರೀ ಬಸವಕುಮಾರ ಸ್ವಾಮಿಜಿ. ಕಲ್ಯಾಣ ಪರ್ವ ಸ್ವಾಗತ ಸಮಿತಿ ಗೌರವಾಧ್ಯಕ್ಷರಾದ ಬಸವರಾಜ ಬುಳ್ಳಾ, ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಮಲ್ಲಿಕಾರ್ಜುನ ಗುಂಗೆ. ಲತಾ ಹಾರಕೂಡೆ. ಸುರೇಶ ಚನ್ನಶೆಟಿ ಬೀದರ. . ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಶಿವರಾಜ ನರಶೆಟೆ. ರಾಷ್ಟ್ರೀಯ ಬಸವ ದಳ ತಾಲೂಕಾಧ್ಯಕ್ಷರಾದ ರವೀಂದ್ರ ಕೊಳಕೂರ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ರಾಷ್ಟ್ರೀಯ ಬಸವ ದಳ ಯುವಗೋಷ್ಠಿ

## ಲಿಂಗಾಯತ ಹೋರಾಟ ನಿಲ್ಲಬಾರದು ಅವಿನಾಶ ಭೋಸಿಕರ್

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: ಅ. 11– ಹೋರಾಟದಿಂದಲೇ ಲಿಂಗಾಯತ ಧರ್ಮಕ್ಕೆ ಮಾನ್ಯತೆ ಸಿಗುತ್ತದೆ. ಸಂವಿಧಾನದಲ್ಲಿ ಅವಕಾಶ ಇಲ್ಲದಿದ್ದರೂ ಸರ್ಕಾರ ಕಾಯಿದೆ ರೂಪಿಸಿ ನ್ಯಾಯ ಕೊಡುತ್ತದೆ. ಆದರೆ ಹೋರಾಟ ಮಾತ್ರ ನಿಲ್ಲಬಾರದು ಎಂದು ನಾಂದೇಡ ಬಸವ ಬ್ರಿಗೇಡ್ ಅಧ್ಯಕ್ಷರಾದ ಅವಿನಾಶ ಭೋಸಿಕರ ತಿಳಿಸಿದರು.

ನಗರದ ಸಸ್ತಾಪುರ ಬಂಗ್ಲಾ ಸಮೀಪದ ಎಂ.ಎಂ.ಬೇಗ್ ಸಭಾಮಂಟಪದಲ್ಲಿ ನಡೆಯುತ್ತಿರುವ ನಾಲ್ಕನೇ ಸ್ವಾಭಿಮಾನಿ ಕಲ್ಯಾಣ ಪರ್ವದಲ್ಲಿ ರಾಷ್ಟ್ರೀಯ ಬಸವ ದಳದ ಯುವಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು ಯಾ–ರೋ ನಾಲ್ಕು ಜನ ಹೇಳಿದ್ದಕ್ಕೆ ನ್ಯಾ. ನಾಗಮೋಹನದಾಸ ಸಮಿತಿ ರಚನೆಯಾಗಿಲ್ಲ. ಅದು ರಚನೆಯಾಗಿದ್ದು ಸುಮಾರು 25ಕ್ಕೂ ಹೆಚ್ಚುಬಾರಿ ಮಾಡಿದ ಲಿಂಗಾಯತ ಆಂದೋಲನದಿಂದ. ಮಾನ್ಯತೆಗಾಗಿ ದಿಲ್ಲಿ ಚಲೋ ಆಂದೋಲನ ಮಾಡುವ ಸಂಕಲ್ಪ ಇಂದೇ ಮಾಡಿ. ಮಾತೆ ಮಹಾದೇವಿ ಅವರು ಲಿಂಗೈಕ್ಯರಾದ ಮೇಲೂ ಹೈದರಾಬಾದ, ಪರಭಣಿ, ಪುಣೆ ಹಾಗೂ ಮುಂಬಯಿ ಮಹಾನಗರದಲ್ಲಿ ಲಿಂಗಾಯತ ಹೋರಾಟ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ನೇತೃತ್ವದಲ್ಲಿ ಜರುಗಿದೆ. ಲಿಂಗಾಯತ ಹೋರಾಟದ ವಿಷಯದಲ್ಲಿ ಲಿಂಗಾಯತ ತಾರತಮ್ಯ ಮಾಡಿದವರು ಮಾತಾಜಿಯವರ ಅನುಯಾಯಿಗಳೇ ಅಲ್ಲ ಎಂದು ಪ್ರತಿಪಾದಿಸಿದರು. 770 ಲಿಂಗಾಯತ ಹೋರಾಟಗಾರರ ಪಟ್ಟಿ ತಯಾರಿಸುತಿದ್ದೇವೆ. ಹೋರಾಟದ ಮುಂದಿನ ರೂಪುರೇಷೆ ತಯಾರಾಗುತಿದ್ದೇವೆ ಎಂದರು.

ಸ್ವಾಭಿಮಾನಿ ಕಲ್ಯಾಣ ಪರ್ವದ ಅಧ್ಯಕ್ಷರಾಗಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ ಲಿಂಗಾಯತ ಅಥವಾ ಬಸವಪರ ಮಠಾಧೀಶರು ಚುನಾವಣೆಯಲ್ಲಿ ಸ್ಪರ್ಧಿಸಿದರೆ ಇವರಿಗೇಕೆ ಬೇಕು ರಾಜಕೀಯ ಎನ್ನುವರು. ಅದೇ ವೈದಿಕ ಹಿಂದೂಪರ ಮಠಾಧೀಶರು ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕ, ಸಂಸದ ಹಾಗೂ ಮುಖ್ಯಮಂತ್ರಿ ಕೂಡ ಆಗಬಹುದು. ಇದು ಯಾವ ನ್ಯಾಯ? ಎಂದು ಪ್ರಶ್ನಿಸಿದರಲ್ಲದೆ ಎಲ್ಲಿವರೆಗೆ ಲಿಂಗಾಯತ ಮಠಾಧೀಶರು ಹಾಗೂ ಮುಖಂಡರು ಚುನಾವಣೆಯಲ್ಲಿ ಗೆದ್ದು ವಿಧಾನಸಭೆ ಹಾಗೂ ಸಂಸತ್ತು ಪ್ರವೇಶಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಧರ್ಮಕ್ಕೆ ಮಾನ್ಯತೆ ಸಿಗುವುದಿಲ್ಲ ಎಂದು ಸ್ವಾಮೀಜಿ ನುಡಿದರು.

ಯುವಗೋಷ್ಠಿ ನೇತೃತ್ವ ಮಾತೆ ಸತ್ಯಾದೇವಿ, ಮಾತೆ ಶಾಂತಾದೇವಿ ವಹಿಸಿದ್ದರು. ಗುರುಬಸವ ಪೂಜೆಯನ್ನು ನಾಗಯ್ಯ ಸ್ವಾಮಿ ಸಿದ್ದೇಶ್ವರ ನೆರವೇರಿಸಿದರು. ಅಧ್ಯಕ್ಷತೆಯನ್ನು ಸೋಲಾಪುರದ ವಿಜಯಕುಮಾರ ಹತ್ತೂರೆ ವಹಿಸಿದ್ದರು. ಗಂಗಾವತಿ ವೀರೇಶ, ಸಿದ್ಧವೀರ ಸಂಗಮದ, ಕಿರಣ ಖಂಡ್ರೆ ಯುವಗೋಷ್ಠಿಯಲ್ಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾಂಗ್ಲಿಯ ಪ್ರದೀಪ ವಾಲೆ, ಹೈದರಾಬಾದ್ ಭೀಮರಾವ ಬಿರಾದಾರ, ಶಿವಾನಂದ ಗೋಗಾಂವ, ಚನ್ನಬಸವ ಹಂಗರಗಿ, ಲೋಕೇಶ ಪೋಲಿಸ್ತೆ, ಮಲ್ಲಿಕಾರ್ಜುನ ಮುಗನೂರ, ಶಿವಕುಮಾರ ಪಾರಾ, ಪ್ರದೀಪ ಬಿರಾದಾರ, ಗಣಪತಿ ಬಿರಾದಾರ, ಮಹಾರುದ್ರ ಡಾಕುಳಗೆ, ನವೀನ ಘೂಳೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಅ.13 ರಂದು ಸಂಸದರಿಂದ ಸಾರ್ವಜನಿಕರ ಅಹವಾಲು ಸ್ವೀಕಾರ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.11-ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದರಾದ ಈ.ತುಕಾರಾಮ್ ಅವರು ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಹಾಗೂ ಇತರೆ ಯೋಜನೆಗಳ ಕುರಿತಂತೆ ಅ.13 ರಂದು ಬೆಳಿಗ್ಗೆ 09.30 ಗಂಟೆಗೆ ನಗರದ ಕೋಟೆ ಪ್ರದೇಶದ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

ಅಹವಾಲುಗಳಿರುವ ಸಾರ್ವಜನಿಕರು ಲಿಖಿತವಾಗಿ ಸಲ್ಲಿಸಬಹುದು.

ನಂತರ ಅಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ "ದಿಶಾ" ಸಮಿತಿಯ ದ್ವಿತೀಯ ತ್ರೈಮಾಸಿಕ ಸಭೆಯನ್ನು ನಡೆಸಲು ನಿಗದಿಪಡಿಸಲಾಗಿದೆ.

ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದರು ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಅಧ್ಯಕ್ಷರೂ ಆದ ಈ.ತುಕಾರಾಮ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು.

ಸಭೆಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಅಗತ್ಯಪೂರ್ಣ ಮಾಹಿತಿಯೊಂದಿಗೆ ತಪ್ಪದೇ ಹಾಜರಿರಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ದಿಶಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ತಿಳಿಸಿದ್ದಾರೆ.

# ಕರ್ನಾಟಕ ವಿಭೂಷಣ ರಾಷ್ಟ್ರ ಪ್ರಶಸ್ತಿ ಗೆ ಹನುಮಂತಪ್ಪ ಕೊಲ್ಕಾರ್ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಹನುಮಂತಪ್ಪ ತಂದೆ ಸೋಮಲಿಂಗಪ್ಪ ಕೊಲ್ಕಾರ್ ಮೂಲತಾ ಕೊಪ್ಪಳ ತಾಲ್ಲೂಕು ಗಿಣಿಗೇರಿ ಗ್ರಾಮದ ಯುವಕ, ಪ್ರಗತಿಪರ ರೈತರು, ಯುವ ಉದ್ಯಮಿದಾರರು, ಸಮಾಜಸೇವಕರು, ಕನ್ನಡ ಮತ್ತು ರೈತಪರ ಹೋರಾಟಗಾರರಾಗಿದ್ದು ಇವರು ಸಂಪೂರ್ಣ ಸಾವಯುವ ಕೃಷಿಯಲ್ಲಿ ತೊಡಗಿಸಿಕೊಂಡು ಭೂಮಿಗೆದುಡಿದು ಭೂಮಿತಾಯಿಗೆ ಒಳ್ಳೆಯ ಸೇವೆ ಮಾಡಿದಾಗ ಇಂತಹ ಜೀವಮಾನ ರಾಷ್ಟ್ರೀಯ ಪ್ರಶಸ್ತಿ ಲಭಿಸಿರುವದು ಅವರ ಸಹೋದ್ಯೋಗಿಗಳಿಗೂ ಕುಟುಂಬ ವರ್ಗದವರಿಗೂ ಖುಷಿ ತಂದಿದ್ದು,

ಅಖಿಲ ಭಾರತ ಕನ್ನಡ ಕವಿಗಳ ಪ್ರಥಮ ಸಮ್ಮೇಳನದಲ್ಲಿ ವಿಶ್ವೇಶ್ವರಯ್ಯ ಅಂತರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಕರ್ನಾಟಕ ವಿಭೂಷಣ ರಾಷ್ಟ್ರ ಪ್ರಶಸ್ತಿ ಘೋಷಣೆ ಮಾಡಿದ್ದು, ಇವತ್ತಿನ ದಿನಮಾನಗಳಲ್ಲಿ ಇವರ ಉತ್ತಮ ಸಾವಯುವ ಕೃಷಿ ಚಟುವಟಿಕೆ, ಮತ್ತು ಸಮಾಜ ಸೇವೆ ಮತ್ತು ಸಂಘಟನೆಯಗಳ ಹೋರಾಟ ಮುಂಚೂಣಿಯಾಗಿ ಸೇವೆ ಸಲ್ಲಿಸುತ್ತಿರುವ ಯುವ ಪ್ರತಿಭೆಯ ಕಾರ್ಯಗಳನ್ನು ಗುರುತಿಸಿ ಅಖಿಲ ಭಾರತ ಕನ್ನಡ ಕವಿಗಳ ಪ್ರಥಮ ಸಮ್ಮೇಳನದಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಯನ್ನು ಘೋಷಣೆ ಮಾಡಿದ್ದೂ, ಇದೆ ಅಕ್ಟೋಬರ್ 16 ಗುರುವಾರ ಸಂಜೆ 4:30 ರಿಂದ ರವೀಂದ್ರ ಕಲಾಕ್ಷೇತ್ರ ಬೆಂಗಳೂರು ನಲ್ಲಿ ಕರ್ನಾಟಕ ವಿಭೂಷಣ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡುವದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ವೇಳೆ ಮಾಧ್ಯಮದವರೊಂದಿಗೆ ಹನುಮಂತಪ್ಪ ಕೊಲ್ಕಾರ್ ಮಾತಾಡುತ್ತ ನನ್ನಂತ ಸಾಮಾನ್ಯನ ಸೇವೆ ಗುರುತಿಸಿ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಿದ್ದೂ ತುಂಬಾ ಖುಷಿ ತಂದಿದ್ದು ಇನ್ನು ಅತೀ ಹೆಚ್ಚು ಸಾಮಾಜಿಕ ಮತ್ತು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಆತ್ಮಸ್ಥೈರ್ಯ ಬಂದಂತಾಗಿದೆ, ಇದಕ್ಕೆಲ್ಲ ಸಹಕರಿಸಿದ ನನ್ನ ಊರಿನ ಗುರುಹಿರಿಯರು, ಸ್ನೇಹ ಬಳಗದವರು ಕೇಫ್ಹಾ ರೈತ ಬಂದುಗಳಿಗೂ ಯುವಕ ಮಿತ್ರರಿಗೂ ಮತ್ತು ಕೊಪ್ಪಳ ಜಿಲ್ಲೆಯ ಸಮಸ್ತ ರೈತ ಬಂದುಗಳಿಗೂ ತುಂಬು ಹೃದಯದ ಧನ್ಯವಾದಗಳ ಏಳುತ್ತೇನೆ, ಗ್ರಾಮದ ಪ್ರಗತಿಪರ ಯುವ ರೈತನಿಗೆ ರಾಷ್ಟ್ರ ಪ್ರಶಸ್ತಿ ಲಭಿಸಿದ್ದಕ್ಕೆ ಕೊಪ್ಪಳ ಜಿಲ್ಲೆ ಗಿಣಿಗೇರಿ ಮತ್ತು ಹಿರೇಸಿಂದೋಗಿ ಗ್ರಾಮಸ್ಥರು ಸಂತವ್ಯಕ್ತಪಡಿಸಿ ಶುಭ ಆರೈಸಿ ಸಂಭ್ರಮಿಸಿದರು.

## ದೀಪಾವಳಿ ಹಬ್ಬದ ಪ್ರಯುಕ್ತ ವಿಶೇಷ ರೈಲು ಸಂಚಾರ:

# ಈ ರೈಲು ಕಲಬುರಗಿ, ಶಹಾಬಾದ್ ಹಾಗೂ ವಾಡಿ ರೈಲ್ವೆ ನಿಲ್ದಾಣಗಳಲ್ಲಿ ನಿಲುಗಡೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.10-2025ರ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸಲು ರೈಲ್ವೆ ಇಲಾಖೆಯು ಎಸ್.ಎಮ್.ವಿ.ಟಿ. (ಖಒಗಿಖಿ) ಬೆಂಗಳೂರು ಮತ್ತು ಬೀದರ್ ನಡುವೆ ವಿಶೇಷ ರೈಲು 18 ಟ್ರಿಪ್‌ಗಳಲ್ಲಿ ಸಂಚರಿಸಲಿದೆ. ಈ ರೈಲು ಸೋಲಾಪುರ ವಿಭಾಗದ ಮೂರು ರೈಲ್ವೆ ನಿಲ್ದಾಣಗಳಾದ ಕಲಬುರಗಿ, ಶಹಾಬಾದ್ ಮತ್ತು ವಾಡಿ ನಿಲ್ದಾಣಗಳಲ್ಲಿ ನಿಲ್ಲಲಿದೆ ಎಂದು ಕೇಂದ್ರ ರೈಲ್ವೆಯ ಸೋಲಾಪುರ ವಿಭಾಗದ ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ಎಮ್.ವಿ.ಟಿ.(ಖಒಗಿಖಿ) ಬೆಂಗಳೂರು-ಬೀದರ್ ವಿಶೇಷ ರೈಲು (ರೈಲು ಸಂಖ್ಯೆ 06539) ಈಗ ಪ್ರತಿ ಶುಕ್ರವಾರ ಮತ್ತು ಭಾನುವಾರದಂದು 2025ರ ಅಕ್ಟೋಬರ್ 31 ರವರೆಗೆ 9 ಟ್ರಿಪ್‌ಗಳಲ್ಲಿ ಸಂಚರಿಸಲಿದೆ. ಈ ಹಿಂದೆ ಈ ರೈಲು ಸೆಪ್ಟೆಂಬರ್ 28 ರವರೆಗೆ ಸಂಚರಿಸಲಿದೆ ಎಂದು ತಿಳಿಸಲಾಗಿತ್ತು.

ಅದೇ ರೀತಿ ಬೀದರ್-ಎಸ್.ಎಮ್.ವಿ.ಟಿ.(ಖಒಗಿಖಿ) ಬೆಂಗಳೂರು (ರೈಲು ಸಂಖ್ಯೆ 06540) ವಿಶೇಷ ರೈಲು ಈಗ ಪ್ರತಿ ಶನಿವಾರ ಮತ್ತು ಸೋಮವಾರದಂದು 2025ರ ನವೆಂಬರ್ 1 ರವರೆಗೆ (9 ಟ್ರಿಪ್‌ಗಳಲ್ಲಿ) ಸಂಚರಿಸಲಿದೆ. ಈ ಹಿಂದೆ ಈ ರೈಲು ಸೆಪ್ಟೆಂಬರ್ 29 ರವರೆಗೆ ಸಂಚರಿಸಲಿದೆ ಎಂದು ತಿಳಿಸಲಾಗಿತ್ತು.

ವಿಶೇಷ ರೈಲಿಗೆ ಟಿಕೇಟ್ ಕಾಯ್ದಿರಿಸುವಿಕೆಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ www.irctc.co.in ವೆಬ್‌ಸೈಟ್‌ನ್ನು, ಯು.ಟಿ.ಎಸ್.(UTS) ಅಪ್ಲಿಕೇಶನ್ ಮೂಲಕ, ಈ ವಿಶೇಷ ರೈಲುಗಳ ನಿಲುಗಡೆಗಳಲ್ಲಿ ವಿವರವಾದ ಸಮಯಕ್ಕಾಗಿ, ಮತ್ತಿತರ ಹೆಚ್ಚಿನ ಮಾಹಿತಿಗಾಗಿ www.enquiry.indianrail.gov.in ವೆಬ್‌ಟೈಟ್‌ಗೆ ಭೇಟಿ ನೀಡಲು ಅಥವಾ ಎನ್.ಟಿ.ಎಸ್.ಇ.(NTES) ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ.

## ಶಹಾಬಾದ: ಫಲಾನುಭವಿಗಳು ಅವಶ್ಯಕ

# ದಾಖಲಾತಿ ಸಲ್ಲಿಕೆಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.10-2006-07ನೇ ಸಾಲಿನಲ್ಲಿ ಭಾಗ್ಯಲಕ್ಷ್ಮೀ ಯೋಜನೆಯಡಿ ಸೌಲಭ್ಯವನ್ನು ಪಡೆದು, 18 ವರ್ಷ ಪೂರ್ಣಗೊಂಡಿರುವ ಫಲಾನುಭವಿಗಳಿಗೆ ಪರಿಪಕ್ವ ಮೊತ್ತ ಸಂದಾಯ ಮಾಡಲು 2025ರ ಅಕ್ಟೋಬರ್ 31 ರಂದು ಕೊನೆಯ ದಿನಾಂಕವಾಗಿದ್ದು, ಆದ್ದರಿಂದ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕೆಂದು ಶಹಾಬಾದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದ್ದರಿಂದ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳು ಅಗತ್ಯ ದಾಖಲೆಗಳಾದ ಪರಿಪಕ್ವ ಮೊತ್ತದ ಅರ್ಜಿ ನಮೂನೆ, ಭಾಗ್ಯಲಕ್ಷ್ಮೀ ಮೂಲ ಬಾಂಡ, ಜನನ ಪ್ರಮಾಣಪತ್ರ, ಪಡಿತರ ಚೀಟಿ, ಬ್ಯಾಂಕ್ ಪಾಸ್‌ಬುಕ್, ಫಲಾನುಭವಿಯ ಆಧಾರ ಕಾರ್ಡ್ ಮತ್ತು ಇತರೆ ದಾಖಲಾತಿಗಳೊಂದಿಗೆ ಶಿಶು ಅಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೆ/ ಶಹಾಬಾದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ.

# ಪ್ರತಿ ಮಗು ಕ್ರೀಡೆ ಜೊತೆಗೆ ಬೆರೆಯಬೇಕಿದೆ – ಮಂಜುನಾಥ ಗೊಂಡಬಾಳ ಕರೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಆಟ ಅನ್ನುವದು ಹಕ್ಕಾಗಬೇಕಿದೆ, ಆರೋಗ್ಯ, ಆಯುಷ್ಯ ಮತ್ತು ಬೆಳವಣಿಗೆಗೆ ಪ್ರತಿ ಮಗುವೂ ಸಹ ಕ್ರೀಡೆ ಜೊತೆಗೆ ಬೆರೆಯಬೇಕಿದೆ ಎಂದು ಕರ್ನಾಟಕ ರಾಜ್ಯ ಷಟಲ್ ಕಾಕ್ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಮಂಜುನಾಥ ಜಿ.ಗೊಂಡಬಾಳ ಕರೆ ನೀಡಿದರು.

ನಗರದ ಎಸ್.ಎಫ್.ಎಸ್. ಪ್ರೌಢ ಶಾಲೆಯ ಕ್ರೀಡಾ ಉತ್ಸವವನ್ನು ಶಾಲಾ ಕ್ರೀಡಾ ಧ್ವಜಾರೋಹಣ ನೆರವೇರಿಸಿ ಶಾಲಾ ವಿದ್ಯಾರ್ಥಿಗಳಿಂದ ಪಥಸಂಚಲನದ ವಂದನೆ ಸ್ವೀಕರಿಸಿ ಕ್ರೀಡಾ ಜ್ಯೋತಿಯನ್ನು ಸ್ವಾಗತಿಸುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಹಲವು ದಶಕಗಳಿಂದ ಎಸ್.ಎಫ್.ಎಸ್. ಶಾಲೆಗಳ ಸಮೂಹ ಅತ್ಯುತ್ತಮವಾದ ಶಿಕ್ಷಣಕ್ಕೆ ಹೆಸರಾಗಿದೆ, ಕ್ರೀಡೆಗೂ ಸಹ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಶಾಲೆ ಪ್ರಯತ್ನ ಮಾಡುತ್ತಿದೆ, ಆದರೆ ಪೋಷಕರು ಮಾತ್ರ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿ ಅಗತ್ಯವಿಲ್ಲದ ಅಂಕಗಳ ಹಿಂದೆ ಓಡುತ್ತ ಅವರ ಆರೋಗ್ಯವನ್ನು ಗಮನಿಸುತ್ತಿಲ್ಲ, ಆದರೆ ಎಲ್ಲಾ ಕಡೆಗೆ ಪ್ರೋತ್ಸಾಹ ಹಾಗೂ ಅವಕಾಶ ಇರುವ ಕ್ರೀಡೆಯಲ್ಲೂ ಸಾಧನೆ ಮಾಡಬೇಕಿದೆ.

ಸಿಇಟಿ, ನೀಟ್ ಮುಂತಾದ ವಿದ್ಯಾಭ್ಯಾಸ ಹಾಗೂ ಉದ್ಯೋಗದಲ್ಲಿ ಕ್ರೀಡಾ ಮೀಸಲಾತಿ ಇರುವದರಿಂದ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು, ತಮ್ಮ ಇಷ್ಟದ ಒಂದು ವಯಕ್ತಿಕ ಮತ್ತು ಒಂದು ಗುಂಪು ಸ್ಪರ್ಧೆಯಲ್ಲಿ ಸರಿಯಾಗಿ ಕಲಿತು ಸಾಧಿಸಬೇಕು ಎಂದರು. ಮಕ್ಕಳ ಆರೋಗ್ಯ, ದೈಹಿಕ ಬಲ, ಮಾಂಸ ಖಂಡ, ಎಲುಬಿನ ಬೆಳವಣಿಗೆ ಶಕ್ತಿಗೆ ನಿರಂತರವಾದ ಕ್ರೀಡೆಯ ಜೊತೆಗಿನ ಒಡನಾಟ ಅಗತ್ಯ ಎಂದ ಅವರು, ಶಾಲೆ ಮುಂದಾದಲ್ಲಿ ವಿಶೇಷವಾದ ತರಬೇತಿ ಕೊಡಿಸಿ ರಾಜ್ಯ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡುವಂತೆ ಪ್ರೋತ್ಸಾಹ ನೀಡಲಾಗುವದು ಎಂದರು.

ಶಾಲಾ ಕವಾಯತ್ತು, ಸಾಮೂಹಿಕ ಏರೋಬಿಕ್ಸ್, ಸಾಮೂಹಿಕ ಪ್ರಾರ್ಥನೆ ಮೂಲಕ ಗಮನ ಸೆಳೆದ ಕ್ರೀಡಾ ಉತ್ಸವದಲ್ಲಿ ಸಾವಿರಾರು ಮಕ್ಕಳು ಅತ್ಯಂತ ಸಂತೊಷದಿಂದ ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಮುಖ್ಯೋಪಾದ್ಯಾಯರಾದ ರೇ. ಫಾ. ಜೊಜೊ ವಹಿಸಿದ್ದರು. ವೇದಿಕೆಯಲ್ಲಿ ಎಸ್.ಎಫ್.ಎಸ್. ಐಸಿಎಸ್‌ನ ಮುಖ್ಯೋಪಾದ್ಯಾಯರಾದ ರೇ. ಫಾ. ಜಪಮಾಲೆ ರೇ.ಫಾ. ಮ್ಯಾಥ್ಯುವ್ ಮಾಮಲಾ ಇದ್ದರು.

ಶಾಲಾ ಮಕ್ಕಳು ಅತ್ಯಂತ ಉತ್ಸಾಹದಿಂದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸೋನಿಕಾ ಹಾಗೂ ಸಂಗಡಿಗರು ಪ್ರಾರ್ಥನೆಯನ್ನು ನೆರವೇರಿಸಿದರು. 9ನೇ ತರಗತಿ ವಿದ್ಯಾರ್ಥಿಗಳಾದ ಕು. ಸಿರಿ ಹಾಗೂ ಗೌರಿ ಪಾಟೀಲ್ ನಿರೂಪಣೆ ಮಾಡಿದರು. 8ನೇ ತರಗತಿ ವಿದ್ಯಾರ್ಥಿ ಶ್ರೇಯಾ ವಂದನಾರ್ಪಣೆ ಮಾಡಿದರು. ನಂತರ ವಿವಿಧ ಕ್ರೀಡಾ ಸ್ಪರ್ಧೆಗಳು ಜರುಗಿದವು.

# ಅಂಬಿಗರ ಚೌಡಯ್ಯನವರ ಮೂರ್ತಿ ಭಗ್ನ: ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು.ಅ.11-ಕಲಬುರ್ಗಿ ಜಿಲ್ಲೆಯ ಶಹಾಬಾದ ತಾಲೂಕಿನ ಮುತ್ತಗಾ ಗ್ರಾಮದಲ್ಲಿ ನಿಜ ಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ಭಗ್ನಗೊಳಿಸಿರುವ ಕಿಡಿಗೇಡಿಗಳನ್ನು ಬಂಧಿಸಬೇಕು ಹಾಗೂ ಮೂರ್ತಿಯನ್ನು ಪುನರ್ ನಿರ್ಮಾಣ ಮಾಡಲು ಮಾನ್ಯ ಗೃಹ ಸಚಿವರು ಜಿಲ್ಲಾಡಳಿತಕ್ಕೆ ಸೂಚಿಸಬೇಕೆಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ನಾಗವಾರ ಬಣ) ರಾಜ್ಯ ಸಂಘಟನಾ ಸಂಚಾಲಕರಾದ ಪ್ರಭುಲಿಂಗ ಮೇಗಳಮನಿ ಪತ್ರಿಕಾ ಪ್ರಕಟಣೆಯ ಮೂಲಕ ಒತ್ತಾಯಿಸಿದರು.

12 ನೇ ಶತಮಾನದ ಶರಣ-ರಾದ ಅಂಬಿಗರ ಚೌಡಯ್ಯನವರು ಸಾಮಾಜಿಕ ಹರಿಕಾರರು. ಅವರು ಸಮಾಜದ ಓರೆಕೋರೆಗಳನ್ನು ತಿದ್ದುವ ಮೂಲಕ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಅವಿರತವಾಗಿ ಶ್ರಮಿಸಿದವರ ಅಂತಹ ಮಹಾನ್ ಶರಣರ ಮೂರ್ತಿಯನ್ನು ಕಿಡಿಗೇಡಿ ಗಳು ಭಗ್ನಗೊಳಿಸಿ ವಿಕೃತಿ ಮೆರೆದಿದ್ದಾರೆ.

ಇದೊಂದು ಘೋರ ಕೃತ್ಯ. ಇದು ಕೋಲಿ ಸಮಾಜವಷ್ಟೇ ಅಲ್ಲ ಇಡೀ ಮಾನವ ಸಮಾಜಕ್ಕೆ ಮಾಡಿದ ಅವಮಾನವಾಗಿದೆ.

ಕಾರಣ ಇಂತಹ ವಿಕೃತ ಮನಸ್ಸಿನ ಕಿಡಿಗೇಡಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಿ, ಗಡಿಪಾರು ಮಾಡಬೇಕೆಂದು ಯಲ್ಲಪ್ಪ ಹಾಲಭಾವಿ, ಅಕ್ರಮಪಾಷಾ, ಷಣ್ಮುಖರೆಡ್ಡಿ, ಹನುಮೇಶ ಕುಪ್ಪಿಗುಡ್ಡ, ಸಂಜೀವಮೂರ್ತಿ, ಹುಸೇನಪ್ಪನಾಯಕ ಪ್ರಕಟಣೆಯ ಮೂಲಕ ಒತ್ತಾಯಿಸಿದರು.

# ಜಿಲ್ಲಾ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.10- 2025-26ನೇ ಸಾಲಿನ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಈ ಜಿಲ್ಲಾ ಮಟ್ಟದ ಪ್ರಶಸ್ತಿಗಾಗಿ ನಾವೀನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ, ಕಲೆ, ಸಾಂಸ್ಕೃತಿಕ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳನ್ನು ಪ್ರೋತ್ಸಾಹಿಸಲು ಹಾಗೂ ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ವಯೋಮಿತಿ 05 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಪ್ರತಿ ಕ್ಷೇತ್ರದಲ್ಲಿ ಇಬ್ಬರು ಮಕ್ಕಳಂತೆ ಒಟ್ಟು 8 ಮಕ್ಕಳನ್ನು ಆಯ್ಕೆ ಮಾಡಿ ತಲಾ 10,000 ರೂ. ನಗದು ಒಳಗೊಂಡಿರುವ ಪ್ರಶಸ್ತಿಯನ್ನು ನೀಡಲಾಗುತ್ತದೆ.

ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿದ ಅರ್ಜಿಯೊಂದಿಗೆ ನಾವೀನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ, ಕಲೆ, ಸಾಂಸ್ಕೃತಿಕ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಬಗ್ಗೆ ಪತ್ರಿಕಾ ವರದಿ ಮತ್ತು ಇತರೆ ದಾಖಲಾತಿಗಳು, ಮಗುವಿನ ಭಾವಚಿತ್ರ, ಜನ್ಮ ದಿನಾಂಕ ಬಗ್ಗೆ ಶಾಲೆಯಿಂದ ಪಡೆದ ಪ್ರಮಾಣಪತ್ರ, ಇತರೆ ಪ್ರಶಸ್ತಿ ಪಡೆದಿದ್ದರೆ ದಾಖಲೆಗಳು, ರಾಷ್ಟ್ರೀಕೃತ ಬ್ಯಾಂಕ ಖಾತೆ-ಯ ಪಾಸ್ ಬುಕ್ ನಕಲು ಪ್ರತಿಗಳ ದಾಖಲಾತಿಗಳನ್ನು ದ್ವಿಪ್ರತಿಯಲ್ಲಿ ಲಗತ್ತಿಸಿ 2025ರ ಅಕ್ಟೋಬರ್ 24ರ ಸಂಜೆ 5.30 ಗಂಟೆಯೊಳಗಾಗಿ ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸಬೇಕು.

ಈ ಪ್ರಶಸ್ತಿಗಾಗಿ ಈ ಹಿಂದೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಆದರೆ ಇದುವರೆಗೂ ಕೇವಲ 07 ಅರ್ಜಿಗಳು ಮಾತ್ರ ಸ್ವೀಕೃತಗೊಂಡಿ-ದ್ದು, ಆದ್ದರಿಂದ ಮತ್ತೊಮ್ಮೆ ಅರ್ಜಿ ಆಹ್ವಾನಿಸಲಾಗಿದೆ. ಈ ಇಲಾಖೆಯಿಂದ ಹಿಂದೆ ಪ್ರಶಸ್ತಿ ಪಡೆದಿದ್ದಲ್ಲಿ ಪುನಃ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

# 2025-28 ನೇ ಸಾಲಿನ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ:ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2025-2028ನೇ ಸಾಲಿನ ಕೊಪ್ಪಳ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಚುನಾವಣಾಧಿಕಾರಿಯಾಗಿ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರಾದ ದುರಗಪ್ಪ ತಿಪ್ಪನಾಳ ಅವರನ್ನು ನೇಮಕ ಮಾಡಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಎನ್ ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

ಚುನಾವಣೆ ನಿಯಮನಗಳನ್ವಯ ಮತ್ತು ಸಂಘದ ಬೈಲಾ ಪ್ರಕಾರ ಚುನಾವಣೆ ನಡೆಸಿಕೊಡಲು ಸೂಚಿಸಲಾಗಿದೆ. ಚುನಾವಣೆ ಪ್ರಕ್ರಿಯೆ ಸಂದರ್ಭದಲ್ಲಿ ಬೈಲಾ ನಿಯಮಗಳ ಸಂಬಂಧ ಹೆಚ್ಚಿನ ಮಾಹಿತಿ ಅಗತ್ಯ ಬಿದ್ದರೆ ರಾಜ್ಯ ಚುನಾವಣಾಧಿಕಾರಿಯವರನ್ನು ಸಂಪರ್ಕಿಸಿ ಎಂದು ಆದೇಶ ಪತ್ರದಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಎನ್ ರವಿಕುಮಾರ್ ತಿಳಿಸಿದ್ದಾರೆ.

## ಜೇವರ್ಗಿ: ಫಲಾನುಭವಿಗಳು ಅವಶ್ಯಕ

# ದಾಖಲಾತಿ ಸಲ್ಲಿಕೆಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.10-2006-07ನೇ ಸಾಲಿನಲ್ಲಿ ಭಾಗ್ಯಲಕ್ಷ್ಮೀ ಯೋಜನೆಯಡಿ ಸೌಲಭ್ಯವನ್ನು ಪಡೆದು, 18 ವರ್ಷ ಪೂರ್ಣಗೊಂಡಿರುವ ಫಲಾನುಭವಿಗಳಿಗೆ ಪರಿಪಕ್ವ ಮೊತ್ತ ಸಂದಾಯ ಮಾಡಲು 2025ರ ಅಕ್ಟೋಬರ್ 31 ರಂದು ಕೊನೆಯ ದಿನಾಂಕವಾಗಿದ್ದು, ಆದ್ದರಿಂದ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕೆಂದು ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದ್ದರಿಂದ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳು ಅಗತ್ಯ ದಾಖಲೆಗಳಾದ ಪರಿಪಕ್ವ ಮೊತ್ತದ ಅರ್ಜಿ ನಮೂನೆ, ಭಾಗ್ಯಲಕ್ಷ್ಮೀ ಮೂಲ ಬಾಂಡ, ಜನನ ಪ್ರಮಾಣಪತ್ರ, ಪಡಿತರ ಚೀಟಿ, ಬ್ಯಾಂಕ್ ಪಾಸ್‌ಬುಕ್, ಫಲಾನುಭವಿಯ ಆಧಾರ ಕಾರ್ಡ್ ಮತ್ತು ಇತರೆ ದಾಖಲಾತಿಗಳೊಂದಿಗೆ ಶಿಶು ಅಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೆ/ ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ.

# ಸಹಕಾರ ಸಂಘದ ಪ್ರತಿಯೊಬ್ಬ ನಿರ್ದೇಶಕರು ಪಾರದರ್ಶಕ ಆಡಳಿತ ನೀಡಿ : ಯಂಕಣ್ಣ ಯರಾಶಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರು ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಚುನಾವಣೆಯಲ್ಲಿ ಸತತ ಒಂದು ವಾರ ಹೈಡ್ರಾಮಾ ನಡೆದಿತ್ತು. ಈ ಫಲಿತಾಂಶವೂ ಬರೋಬ್ಬರಿ 10 ತಿಂಗಳ ಬಳಿಕ ಘೋಷಣೆ ಆಗಿದೆ.

ವಿಜೇತರಾದ ನಿರ್ದೇಶಕರು ಹಾಗೂ ಕಾಂಗ್ರೆಸ್ ಪಕ್ಷದ ಪ್ರಮುಖರು ಸೇರಿಕೊಂಡು ನಗರದ ಆದಿಶಕ್ತಿ ಶ್ರೀ ಮಹಾಮಾಯ ದೇವಸ್ಥಾನದಿಂದ ಕೃಷಿ ಪತ್ತಿನ ಸಹಕಾರ ಸಂಘದವರಿಗೆ ಮೆರವಣಿಗೆ ಮುಖಾಂತರ ವಿಜಯೋತ್ಸವ ಆಚರಿಸಿದರು.

ಸಹಕಾರರತ್ನ ಚಂದ್ರಶೇಖರಯ್ಯ ಹಿರೇಮಠ ಮಾತನಾಡುತ್ತಾ ಪಕ್ಷಭೇದ ಮರೆತು ಎಲ್ಲಾ ನಿರ್ದೇಶಕರು ಕಾರ್ಯನಿರ್ವಹಿಸಿದಾಗ ಸಂಸ್ಥೆ ಯಶಸ್ವಿಯಾಗಿ ಮುಂದುವರಿಯುತ್ತದೆ. ನಿಮಗೆ ಮತ ನೀಡಿ ಗೆಲ್ಲಿಸಿದ ಮತದಾರರ ವಿಶ್ವಾಸಕ್ಕೆ ಚುತಿ ಬಾರದಂತೆ ಕಾರ್ಯನಿರ್ವಹಿಸಿ ಎಂದು ಸಲಹೆ ನೀಡಿದರು.

ನಂತರ ಕಾಂಗ್ರೆಸ್ ಹಿರಿಯ ಮುಖಂಡ ಯಂಕಣ್ಣ ಯರಾಶಿ ಮಾತನಾಡುತ್ತಾ ಸಹಕಾರ ಕ್ಷೇತ್ರವು ಯಾರೊಬ್ಬರ ಸ್ವತ್ತು ಅಲ್ಲ. ಒಬ್ಬರಿಂದ ಅನೇಕರಿಗಾಗಿ ಹಾಗೂ ಅನೇಕರಿಂದ ಒಬ್ಬರಿಗಾಗಿ ಎಂಬ ತತ್ವದೊಂದಿಗೆ ಸಹಕಾರ ಪದ ಕಟ್ಟಿಕೊಂಡಿದ್ದು, ಸಹಕಾರ ಎಂಬ ಪದಕ್ಕೆ ಅನುಗುಣವಾಗಿ ಪ್ರತಿಯೊಬ್ಬ ಅರ್ಹ ರೈತರಿಗೂ ಸಾಲ ನೀಡಿ ಎಲ್ಲರಿಗೂ ಮುಕ್ತ ಅವಕಾಶ ನೀಡುವ ಸಹಕಾರದೊಂದಿಗೆ ಆಡಳಿತ ನಡೆಸಿ ಹಾಗೂ ಪಾರದರ್ಶಕ ಆಡಳಿತದೊಂದಿಗೆ ರಾಜಕೀಯ ತಂತ್ರಗಾರಿಕೆಗೆ ಸಹಕಾರ ಕ್ಷೇತ್ರವನ್ನು ಬಲಿಕೊಡದಿರಿ ಎಂದು ನೂತನ ನಿರ್ದೇಶಕರಿಗೆ ಕಿವಿಮಾತು ಹೇಳಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಒಟ್ಟು 12 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಅದರಲ್ಲಿ 11 ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಅಭೂತಪೂರ್ವ ಗೆಲವು ಕಂಡಿದ್ದಾರೆ. ಕೇವಲ ಒಂದು ಸ್ಥಾನವು ಬಿಜೆಪಿ ಬೆಂಬಲಿತ ಅಭ್ಯರ್ಥಿ ಜಯಗಳಿಸಿದ್ದಾರೆ.

'ಸಾಲಗಾರರ ಸಾಮಾನ್ಯ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದ ಸಿದ್ದಯ್ಯ ಶಂಕ್ರಯ್ಯ ಕಳ್ಳಿಮಠ, ಕಳಕಪ್ಪ ಸಂಗಪ್ಪ ಕುಂಬಾರ, ದಸ್ತಗೀರಸಾಬ ಗೈಬುಸಾಬ ರಾಜೂರ, ರಾಮಪ್ಪ ಭೀಮಪ್ಪ ಭಜಂತ್ರಿ, ಶ್ರೀನಿವಾಸರಾವ್ ಹನುಮಂತರಾವ್ ದೇಸಾಯಿ ಎಸ್ ಸಿ ಮೀಸಲು ಕ್ಷೇತ್ರದಲ್ಲಿ ಗುದ್ದೆಪ್ಪ ಸಣ್ಣ ಈರಪ್ಪ ಚಲವಾದಿ, ಸಾಲಗಾರರ ಪರಿಶಿಷ್ಟ ಪಂಗಡದಲ್ಲಿ ಭರಮಪ್ಪ ಬಸಪ್ಪ ತಳವಾರ, ಸಾಲಗಾರರ ಹಿಂ.ವ. 'ಅ' ಬಸವರಾಜ ವೀರಪ್ಪ ನೋಟಗಾರ, ಸಾಲಗಾರರ ಹಿಂ.ವ.'ಬ' ಕ್ಷೇತ್ರದಲ್ಲಿ ಮಲ್ಲಿಕಾರ್ಜುನ ನಾಗರಾಜ ಹಾದಿಯವರು, ಸಾಲಗಾರರ ಮಹಿಳಾ ಕ್ಷೇತ್ರದಲ್ಲಿ ರತ್ನಮ್ಮ ಸಂಗಪ್ಪ ಗದಗ, ಶಂಶಾದಬೇಗಂ ರಹಿಮಾನಸಾಬ ಕಟ್ಟಿಮನಿ ಗೆಲುವು ಸಾಧಿಸಿದ್ದಾರೆ' ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಯಲಬುರ್ಗಾ ರಿಟರ್ನಿಂಗ್ ಆಫೀಸರ್ ಹಾಗೂ ಚುನಾವಣೆ ಅಧಿಕಾರಿ ಚಂದ್ರಶೇಖರ್ ಕಾವಲಿ ತಿಳಿಸಿದರು.

ಚುನಾವಣೆಯಲ್ಲಿ ಪ್ರಮುಖ ಪಾತ್ರವಹಿಸಿದ ಕಾರ್ತಿಕ್ ಜಾದವ್ ಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪ್ರಮುಖರಾದ ಕೇರಿಬಸಪ್ಪ ನಿಡುಗುಂದಿ, ಹನುಮಂತಗೌಡ ಚಂಡೂರ, ಶೇಖರಗೌಡ ಉಳ್ಳಾಗಡ್ಡಿ, ಸಂಗಮೇಶ್ ಗುತ್ತಿ, ವೀರನಗೌಡ ಬಳೂಟಗಿ, ರೈಮಾನ್ ಸಾಬ್ ಮಕ್ಕಪ್ಪನವರ್, ಬಸವರಾಜ್ ಜಂಗ್ಲಿ, ಮಂಜು ಯಡಿಯಾಪುರ, ಮಹಮ್ಮದ್ ರಫಿ ಮಂಡಲಗಿರಿ, ಪ್ರಶಾಂತ್ ಆರ್ ಬೆರಳಿನ, ರಾಘವೇಂದ್ರ ಕಾತರಿಕಿ, ಹಾಗೂ ಉಪಸ್ಥಿತರಿದ್ದರು.

ಜಾಹೀರಾತಿಗಾಗಿ ಸಂಪರ್ಕಿಸಿರಿ: 9449732000

# ವಾಲ್ಮೀಕಿ ಮಹರ್ಷಿಗಳಿಗೆ ನಿಂದನೆಯ ಆರೋಪ ಶಾಸಕ ಗುಡಗುಂಟಿ ಕ್ಷಮೆಯಾಚನೆಗೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ,11-ಜಿಲ್ಲೆಯಜಮಖಂಡಿ ಕ್ಷೇತ್ರದ ಶಾಸಕ ಜಗದೀಶ ಗುಡಗುಂಟಿ ವಾಲ್ಮೀಕಿ ಜಯಂತಿಯಂದು ವಾಲ್ಮೀಕಿ ಮಹರ್ಷಿಗಳ ಕುರಿತಾಗಿ ನಿಂದನೆಯ ಮಾತುಗಳನ್ನಾಡಿರುವುದನ್ನು ವಾಲ್ಮೀಕಿ ಸಮಾಜ ಖಂಡಿಸುತ್ತದೆ ಎಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ಹಣಮಂತ ಡೋಣಿ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಗುಡಗುಂಟಿ ವಾಲ್ಮೀಕಿ ಮೊದಲು ಸಮಾಜದಲ್ಲಿ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದರು ಎಂಬುದಾಗಿ ನಿಂದಿಸಿದ್ದಾರೆ. ಇದು ವಾಲ್ಮೀಕಿ ಸಮಾಜಕ್ಕೆ ತುಂಬಾ ನೋವುಂಟು ಮಾಡಿದೆ. ಆದ್ದರಿಂದ ಶಾಸಕರು ವಾಲ್ಮೀಕಿ ಸಮಾಜದ ಕ್ಷಮೆಕೇಳಬೇಕು ಎಂದು ಆಗ್ರಹಿಸಿದರು. ಮಹಾಸಭಾದ ಬಾದಾಮಿ ತಾಲೂಕಾ ಅಧ್ಯಕ್ಷ ಪ್ರಕಾಶ ನಾಯ್ಕರ ಮಾತನಾಡಿ, ರಾಜ್ಯ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ನಕಲಿ ದಾಖಲೆಗಳ ಮೂಲಕ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುತ್ತಿರುವುದು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದಕ್ಕೆ ವಿಧಾನ ಪರಿಷತ್ ಸದಸ್ಯರು, ಲೋಕಸಭಾ ಸದಸ್ಯರು ಅಧಿಕಾರಿಗಳಿಗೆ ಒತ್ತಡ ಹೇರುವ ಮೂಲಕ ಅಪರೋಪಕ್ಷವಾಗಿ ನೆರವಾಗುತ್ತಿದ್ದಾರೆ ಎಂದು ದೂರಿ, ಮುಂಬರುವ ಸ್ಥಳೀಯ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಚುನಾವಣೆಗಳಲ್ಲಿ ಇವರಿಗೆ ವಾಲ್ಮೀಕಿ ಸಮಾಜ ತಕ್ಕ ಪಾಠ ಕಲಿಸಲಿದೆ. ವಾಲ್ಮೀಕಿ ಸಮಾಜದ ನಾಯಕರನ್ನು ರಾಜಕೀಯವಾಗಿ ತುಳಿಯವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು.

**ಸಿಎಂಗೆ ಘೇರಾವ್**

ಸುಪ್ರೀಂ ಕೋರ್ಟ ಆದೇಶದ ಪ್ರಕಾರ ನಕಲಿ ಜಾತಿ ಪ್ರಮಾಣ ಪತ್ರ ನೀಡುವುದನ್ನು ತಡೆಯುವಲ್ಲಿ ಸರ್ಕಾರ ತುರ್ತು ಕ್ರಮಕೈಗೊಳ್ಳದಿರುವುದು ಹಾಗೂ ರಾಜಕೀಯವಾಗಿ ಬಾಗಲಕೋಟೆ ಜಿಲ್ಲೆಯ ವಾಲ್ಮೀಕಿ ಸಮಾಜಕ್ಕೆ ಯಾವುದೇ ಸ್ಥಾನಮಾನ ನೀಡದೇ ಇರುವುದನ್ನು ವಿರೋಧಿಸಿ ಸೋಮವಾರ ಜಿಲ್ಲೆಯ ಬಂಡಿಗಣಿಗೆ ಆಗಮಿಸುವ ಮುಖ್ಯಮಂತ್ರಿಗಳಿಗೆ ಘೇರಾವ್ ಹಾಕಲಾಗುವುದು ಎಂದು ಪ್ರಕಾಶ ನಾಯ್ಕರ ತಿಳಿಸಿದರು.

ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಮಾತನಾಡಿರುವ ಸಂಗತಿಯನ್ನು ಕೆಲ ಅನ್ಯಸಮುದಾಯದ ಸಂಘಟನೆಗಳು ತಿರುಚಿ ಸಮಾಜವನ್ನು ಹಾಳು ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳಿಗೆ ಧಮ್ಕಿ ಹಾಕುವುದು ಹಾಗೂ ಗುಂಡಾಗಿರಿ ಮಾಡುವುದು ನಮ್ಮ ಸಂಸ್ಕೃತಿ ಅಲ್ಲ. ವಿ.ಎಸ್.ಉಗ್ರಪ್ಪ ಯಾವುದೇ ರೀತಿಯಾಗಿ ಮುಖ್ಯಮಂತ್ರಿಗಳಿಗೆ ಮಾತನಾಡಿಲ್ಲ. ಇದರಲ್ಲಿ ಕೇವಲಗೊಂದಲವನ್ನು ಸೃಷ್ಠಿಮಾಡುತ್ತಿದ್ದಾರೆಂದರು. ಸುದ್ದಿಗೋಷ್ಠಿಯಲ್ಲಿ ಯಲ್ಲಪ್ಪ ಕ್ಯಾದಿಗೇರಿ, ಜಯರಾಜ್ ಹಾದಿಕರ, ಹೇಮಂತ ಚೂರಿ, ಕೃಷ್ಣಾ ಪಾಟೀಲ ಇದ್ದರು.

# ಯೋಜನಾಬದ್ಧ ಅಧ್ಯಯನದಿಂದ ಉತ್ತಮ ಫಲಿತಾಂಶ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.11-ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಪದವಿ ಹಂತದಿಂದಲೇ ಅವುಗಳ ಬಗ್ಗೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂದು ಕಾಪ್ಸ ಅಕಾಡೆಮಿ ಧಾರವಾಡ ವಿದ್ಯಾಪೀಠದ ವ್ಯವಸ್ಥಾಪಕ ನಿರ್ದೇಶಕ ಬಸವರಾಜ ಮಾಢಳ್ಳಿ ಹೇಳಿದರು. ನಗರದ ವಿದ್ಯಾಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ವೃತ್ತಿ ಮಾರ್ಗದರ್ಶನ ಮತ್ತು ಸಮಾಲೋಚನೆ ಘಟಕ ಹಾಗೂ ಕಾಪ್ಸ್ ಅಕಾಡೆಮಿ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮುಂಚಿತವಾಗಿಯೇ ಮಾಹಿತಿಯನ್ನು ಸಂಗ್ರಹಿಸಬೇಕು. ಆ ದಿಶೆಯಲ್ಲಿ ಪ್ರಯತ್ನಶೀಲರಾಗಬೇಕು. ಇಂದಿನ ಪೈಪೋಟಿಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಜ್ಞಾನ ಸಂಪತ್ತನ್ನು ಬೆಳೆಸಿಕೊಳ್ಳಬೇಕು. ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಜೀವನದಲ್ಲಿ ಸರಿಯಾದ ಗುರಿಯನ್ನು ಹೊಂದಿ, ಅದರ ಈಡೇರಿಕೆಗಾಗಿ ಪ್ರಯತ್ನಪಟ್ಟು ಪಾಲಕರ ಕನಸನ್ನು ನನಸು ಮಾಡಬೇಕು ಎಂದ ಅವರು, ಈ ಪರೀಕ್ಷೆಗಳ ಸ್ವರೂಪ, ತಯಾರಿಯ ಬಗೆ, ಅಭ್ಯಾಸಕ್ರಮ, ಓದಬೇಕಾದ ಪುಸ್ತಕಗಳು ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಒದಗಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ, ಸ್ಪರ್ಧಾತ್ಮಕ ಪರೀಕ್ಷೆಗಳ ಬಗೆಗಿನ ತಮ್ಮ ಮನಸ್ಥಿತಿಯನ್ನು ಬದಲಿಸಿಕೊಂಡು, ಸಾಧಕರ ಯಶೋಗಾಥೆಯಿಂದ ಪ್ರೇರಣೆ ಪಡೆಯಬೇಕು. ಕೀಳರಿಮೆ ಬೆಳೆಸಿಕೊಳ್ಳದೇ ಆತ್ಮವಿಶ್ವಾಸದಿಂದ ಅವುಗಳನ್ನು ಎದುರಿಸಬೇಕು. ಯೋಜನಾಬದ್ಧ ಅಧ್ಯಯನದಿಂದ ಉತ್ತಮ ಫಲಿತಾಂಶವನ್ನು ಸಾಧಿಸಬಹುದು ಎಂದರು.

ರಕ್ಷಿತಾ ಮಸೂತಿ ಪ್ರಾರ್ಥಿಸಿದರು. ಸಂಯೋಜಕ ಬಿ.ಡಿ.ಮಾದರ ಸ್ವಾಗತಿಸಿದರು. ಅಶ್ವಿನಿ ಕೋನೇರಿ ನಿರೂಪಿಸಿದರು. ಎನ್.ಬಿ.ಹಸಬಿ ವಂದಿಸಿದರು. ಪ್ರಧಾನ ಕಾರ್ಯದರ್ಶಿ ದಿಲ್‌ಶಾದ ನದಾಫ್ ಇದ್ದರು.

# ಕಾನಿಪ ಜಿಲ್ಲಾ ಆಡಳಿತ ಮಂಡಳಿಗೆ ನ.9 ಚುನಾವಣೆ-ಸೋಮವಾರ ಅಧಿಸೂಚನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,11- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಆಡಳಿತ ಮಂಡಳಿಗೆ(2025-28 ಅವಧಿಗೆ) ನವಂಬರ್ 9 ರಂದು ಚುನಾವಣೆ ನಡೆಯಲಿದೆ. ಈ ಸಂಬಂಧ ಸೋಮವಾರ ಅ.13 ರಂದು ಅಧಿಸೂಚನೆ ಹೊರಡಲಿದ್ದು, ವೇಳಾಪಟ್ಟಿ ಪ್ರಕಟಗೊಳ್ಳಲಿದೆ. ಮತದಾರರ ಕರಡು ಪ್ರತಿ ಪ್ರಕಟಿಸಲಾಗುವುದು. ಅಕ್ಟೋಬರ್ 19 ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು, ಅ.27 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ. ಅ.28 ನಾಮಪತ್ರ ಪರಿಶೀಲನೆ, ಅ.30 ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆಯ ದಿನವಾಗಿರುತ್ತದೆ.

ನ.9 ಭಾನುವಾರ ಬಾಗಲಕೋಟೆಯ ಪತ್ರಿಕಾ ಭವನದಲ್ಲಿ ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಮತದಾನ ನಡೆಯಲಿದೆ. ನಂತರ ಅಂದೇ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಕಾಶ ಬಾಳಕ್ಕನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಸ್ಟೇರಿಂಗ್ ಕಟ್: ಬಸ್ ಪಲ್ಟಿ ಪ್ರಾಣ ಅಪಾಯದಿಂದ ಸವಾರರು ಪಾರು



ಮಲ್ಲಮ್ಮ ನುಡಿ ವಾರ್ತೆ

ಯಡ್ರಾಮಿ:ಅ.11: ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪಲ್ಟಿಯಾಗಿ ಪಕ್ಕದ ಜಮೀನಿಗೆ ಉರುಳಿದ ಘಟನೆ ಕರಕಿಹಳ್ಳಿ ಮತ್ತು ಯಲಗೋಡ ಗ್ರಾಮಗಳ ಮಧ್ಯೆ ಶುಕ್ರವಾರ ಸಂಜೆ ನಡೆದಿದೆ. ಕೆಎ 32 ಎಫ್ 1767 ನಂಬರಿನ ಬಸ್ ಯಡ್ರಾಮಿನಿಂದ ಶಹಾಪುರ ಪಟ್ಟಣಕ್ಕೆ ತೆರಳುತ್ತಿತ್ತು. ಬಸ್‌ನಲ್ಲಿ ಸುಮಾರು 50 ಜನ ಪ್ರಯಾಣಿಕರಿದ್ದರು. ಬಸ್ ಸ್ಟೇರಿಂಗ್ ಆಕ್ಸಲ್ ಕಟ್ ಆಗಿ ನಿಯಂತ್ರಣ ತಪ್ಪಿದ್ದರಿಂದ ಬಸ್ ಪಲ್ಟಿಯಾಗಿದೆ ಎನ್ನಲಾಗುತ್ತಿದೆ ಬಸ್‌ನಲ್ಲಿದ್ದ ನಾಲ್ಕು ಜನ ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದು, ಕಲಬುರಗಿಯ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ. ಉಳಿದ ಕೆಲ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಅವರಿಗೆ ಯಡ್ರಾಮಿ ಸರ್ಕಾರಿ ಸಮುದಾಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಪ್ರಯಾಣಿಕರ ಚೀರಾಟ ಕೇಳಿ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿ ಪ್ರಯಾಣಿಕರನ್ನು ರಕ್ಷಣೆ ಮಾಡಿರುವುದು ತಿಳಿದುಬಂದಿದೆ. ಈ ಕುರಿತು ಯಡ್ರಾಮಿ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿದೆ.



ಸರ್ಕಾರಿ ಅಧಿಕಾರಿಗಳೆಂದು ಹೇಳಿ ಡಕಾಯಿತಿ ಮಾಡಿದ್ದ 7 ಮಂದಿಯನ್ನು ಬಂಧಿಸಿ ಯಲಹಂಕ ಪೊಲೀಸ್ ಠಾಣೆ ಪೊಲೀಸರು ವಶಪಡಿಸಿಕೊಂಡಿರುವ 1,27,61,200 ನಗದು ಹಾಗೂ ವಿವಿಧ ದಾಖಲಾತಿಗಳನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್‌ರವರು ಪರಿಶೀಲನೆ ನಡೆಸಿದರು. ಪೊಲೀಸ್ ಅಧಿಕಾರಿಗಳು ಇದ್ದಾರೆ.

# ಗರ್ಭಿಣಿಯರು ಹಾಗೂ ಬಾಣಂತಿಯರು ಪೌಷ್ಟಿಕ ಆಹಾರ ಸೇವಿಸಬೇಕು: ಖಾದಿರಬಿ ತಾಂಬೆ






ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಗರ್ಭಿಣಿಯರು ಮತ್ತು ಬಾಣಂತಿಯರು ಪೌಷ್ಟಿಕ ಆಹಾರ ಸೇವಿಸುವುದರಿಂದ ಅಪೌಷ್ಟಿಕತೆ ಹೋಗಲಾಡಿಸುವ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಪೋಷಣ್ ಅಭಿಯಾನ ನಡೆಸಲಾಗುತ್ತಿದೆ ಎಂದು ಅಂಗನವಾಡಿ ಮೇಲ್ವಿಚಾರಕಿ ಖಾದಿರಬಿ ತಾಂಬೆ ಹೇಳಿದರು. ಪಟ್ಟಣದ ಬನಶಂಕರಿ ದೇವಸ್ಥಾನದ ಆವರಣದಲ್ಲಿ ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹುಮನಾಬಾದ ಹಾಗೂ ಆರೋಗ್ಯ ಇಲಾಖೆಯ ಸಯುಂಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪೋಷಣ ಅಭಿಯಾನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಗರ್ಭಿಣಿಯರು ಅಪೌಷ್ಟಿಕದಿಂದ ಬಳಲುತ್ತಿದ್ದರೆ ಹೆರಿಗೆ ಸಮಯದಲ್ಲಿ ತೀವ್ರ ತೊಂದರೆ ಆಗಲಿದೆ. ಅಲ್ಲದೆ ಕಡಿಮೆ ತೂಕದ ಮಗು ಜನಿಸುವ ಸಾಧ್ಯತೆ ಇದೆ. ಆದ್ದರಿಂದ ಸೊಪ್ಪು, ತರಕಾರಿ, ಮೊಳಕೆಕಾಳು, ಬಾಳೆಹಣ್ಣು, ಮೊಟ್ಟೆ ಸೇರಿ ಇತರ ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಜತೆಗೆ ನಿಯಮಿತವಾಗಿ ಯೋಗ ಮಾಡಬೇಕು ಎಂದರು. ಗರ್ಭಿಣಿ ಮತ್ತು ಬಾಣಂತಿಯರು ಸ್ಥಳೀಯವಾಗಿ ಸಿಗುವ ನುಗ್ಗೆ ಸೊಪ್ಪು, ತರಕಾರಿಗಳು, ಹಣ್ಣುಗಳು ಇತರೆ ಪೌಷ್ಟಿಕ ಆಹಾರ ಸೇವನೆ ಮಾಡಬೇಕು ಎಂದು ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ತಿಳಿಸಿದರು. ಪೌಷ್ಟಿಕ ಆಹಾರ ಸೇವಿಸುವುದರಿಂದ ಮಕ್ಕಳು ದಷ್ಟಪುಷ್ಟವಾಗಿ ಬೆಳೆಯಲು ಸಹಾಯವಾಗುತ್ತದೆ ಎಂದು ಹೇಳಿದರು. ಆರೋಗ್ಯ ಇಲಾಖೆ ಅಧಿಕಾರಿ ಮೋಜೆಸ್ ಮಾತನಾಡಿ, ಗರ್ಭಿಣಿಯರಿಗೆ 3 ತಿಂಗಳಲ್ಲಿ ಪತ್ತೆ ಹಚ್ಚಿ ರಕ್ತ ತಪಾಸಣೆ ಮಾಡಿ ರಕ್ತಹೀನತೆ ಇದ್ದರೆ ಅವರಿಗೆ ಕಬ್ಬಿಣಾಂಶ ಮಾತ್ರೆಗಳು ನೀಡುತ್ತೇವೆ. ತಾಯಿ ಮತ್ತು ಮಗು ಮರಣಕ್ಕೆ ರಕ್ತಹೀನತೆಯೇ ಕಾರಣ ಎಂದು ಹೇಳಿದರು. ಗರ್ಭಿಣಿಯರು ಸರಿಯಾದ ಸಮಯಕ್ಕೆ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು ಮತ್ತು ಆರೋಗ್ಯ ಇಲಾಖೆಯಿಂದ ಸಿಗುವ ಸೌಲಭ್ಯಗಳು ಪಡೆದುಕೊಳ್ಳಲು ತಿಳಿಸಿದರು. ಸೂರ್ಯಕಾಂತ ಮಠಪತಿ ಮಾತನಾಡಿ, ಪ್ರತಿ ಮಗುವಿಗೆ ಮನೆಯೇ ಮೊದಲ ಪಾಠಶಾಲೆ. ಚಿಕ್ಕವರಿದ್ದಾಗ ಮಕ್ಕಳಿಗೆ ಕಲಿಸಿದ ಆಚಾರ, ವಿಚಾರಗಳು ಅವರ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಆರಂಭದಿಂದಲೇ ಮಕ್ಕಳಿಗೆ ಉತ್ತಮ ಸಂಸ್ಕಾರ, ಗುರು ಹಿರಿಯರನ್ನು ಗೌರವಿಸುವುದನ್ನು ಕಲಿಸಬೇಕು. ತಾಯಂದಿರು ದೇಶದ ಸಂಸ್ಕೃತಿ, ಆಚಾರ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡು, ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬೇಕೆಂದು ಸಲಹೆ ನೀಡಿದರು. ಪತ್ರಕರ್ತ ರಾಜಕುಮಾರ ಆರ್. ಹಡಪದ ಮಾತನಾಡಿ, ಶಿಶು ಅಭಿವೃದ್ಧಿ ಇಲಾಖೆಯ ಸಮಾಜಕ್ಕೆ ಅಪಾರ ಕೊಡುಗೆ ನೀಡುತ್ತಿದ್ದಾರೆ. ಶಿಶುಗಳ ಕಲ್ಯಾಣಕ್ಕಾಗಿ, ಮಹಿಳೆಯರ ಕಲ್ಯಾಣಕ್ಕಾಗಿ ಅಂಗನವಾಡಿ ಕಾರ್ಯಕರ್ತೆರ ಸೇವೆ ಅಮೋಘವಾಗಿದೆ. ಸರ್ಕಾರ ಅವರಿಗೆ ವೇತನ ಹೆಚ್ಚಳ ಮಾಡಿ, ಅವರ ಪರಿಶ್ರಮಕ್ಕೆ ತಕ್ಕಂತೆ ಹೆಚ್ಚಿನ ಗೌರವಧನ ನೀಡಬೇಕು ಎಂದರು. ಪೋಷಣ ಕಾರ್ಯಕ್ರಮ ಒಂದು ಅತ್ಯುತ್ತಮ ಕಾರ್ಯಕ್ರಮವಾಗಿದೆ ಇದರ ಸದುಪಯೋಗ ಪಡೆದುಕೊಳ್ಳಲು ಸಾರ್ವಜನಿಕರು ಮುಂದೆ ಬರಬೇಕು ಎಂದರು. ಪರಿಸರ ಸಮತೋಲನ ಕಾಪಾಡಲು ಪ್ರತಿಯೊಂದು ಅಂಗನವಾಡಿ ಕೇಂದ್ರದ ಆವರಣದಲ್ಲಿ ಸಸಿಗಳು ನೆಟ್ಟು ಪರಿಸರ ಸಂರಕ್ಷಣೆಗೆ ಸಹಾಯ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯೆ ಶೇಶಿಕಲಾ ಒಂಟಿಮರಿ, ಪುರಸಭೆ ಮಾಜಿ ಸದಸ್ಯ ಪರಮೇಶ್ವರ್ ಬಬಡಿ, ಬಾಲ ವಿಕಾಸ ಸಮಿತಿ ಸದಸ್ಯ ಮಹೇಬೂಬ್, ಪತ್ರಕರ್ತ ಸೈಯದ್ ಅಜೀಮ್, ಆರೋಗ್ಯ ಇಲಾಖೆ ಸಿಬ್ಬಂದಿ ಲಕ್ಷ್ಮಿ, ಅಂಗನವಾಡಿ ಕಾರ್ಯಕರ್ತೆಯರಾದ ರಿಜ್ವಾನಾ ಬೇಗಂ, ಗೀತಾ, ವರ್ಷಾ, ಕರುಣಾ, ನಾಗಮ್ಮ, ಸವಿತಾ, ಸಂಗಮ್ಮಾ ಮಟ್ಟಿ, ಗೋಪಮ್ಮಾ, ಅನೀತಾ, ಪ್ರೇಮಿಳಾ, ಶಿವಲೀಲಾ ಹಡಪದ, ಹಬಿಬಾ ಬೇಗಂ, ಗಂಗಮ್ಮಾ ಸ್ವಾಮಿ, ರಾಧಿಕಾ, ನಂದಾಬಾಯಿ ಮಂಗಲಾ, ಅನುರಾಧ ಸೇರಿದಂತೆ ಅಂಗನವಾಡಿ ಕಾರ್ಯಕತೆ-ರ್ಯಯರು, ಸಹಾಯಕಿಯರು ಹಾಗೂ ಗರ್ಭಿಣಿ ಬಾಣಂತಿಯರು ಉಪಸ್ಥಿತರಿದ್ದರು.

# ಮದ್ಯ, ಮಾದಕ ವ್ಯಸನಗಳ ವಿರುದ್ಧ ಜಾಗೃತಿ ಮೂಡಿಸಲು ಮಠಗಳು ಮುಂದಾಗಲು ಶರಣಪ್ಪ ಸಲಾದಪುರ ಕರೆ



ಮಲ್ಲಮ್ಮ ನುಡಿ ವಾರ್ತೆ


ಯಾದಗಿರಿ, ಅಕ್ಟೋಬರ್.11- ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ತಮ್ಮ ಸ್ವಕ್ಷೇತ್ರಕ್ಕೆ ಭೇಟಿ ನೀಡಿದ ಶರಣಪ್ಪ ಸಲಾದಪುರ ವಿವಿಧ ಮಠಗಳಿಗೆ ಭೇಟಿ ನೀಡಿ, ಮದ್ಯಪಾನ ಹಾಗೂ ಮಾದಕವಸ್ತುಗಳ ವಿರುದ್ಧ ಮಠಕ್ಕೆ ಭೇಟಿ ನೀಡುವ ಭಕ್ತರಲ್ಲಿ ಜಾಗೃತಿ ಮೂಡಿಸಲು, ಮಠಗಳು ಮುಂದಾಗಬೇಕು ಎಂದು ಮನವಿ ಮಾಡಿದ್ದಾರೆ.

ಚರಬಸವೇಶ್ವರ ಗದ್ದುಗೆ ಸಂಸ್ಥಾನ ಮಠಕ್ಕೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಭೇಟಿ ನೀಡಿ, ಶ್ರೀ ಶ್ರೀ ಶ್ರೀ ಪರಮಪೂಜ್ಯ ಬಸಯ್ಯತಾತ ಗದ್ದುಗೆ ಅವರ ಆಶೀರ್ವಾದವನ್ನು ಪಡೆದು, ಸನ್ಮಾನವನ್ನು ಸ್ವೀಕರಿಸಿದ ಬಳಿಕ ಮಠಮಾನ್ಯಗಳಿಗೆ ಭೇಟಿ ನೀಡುವ ಭಕ್ತರಿಗೆ ಶ್ರೀಗಳು ಹೆಚ್ಚಿನ ಮುತುವರ್ಜಿ ವಹಿಸಿ ಆಣೆಪ್ರಮಾಣವನ್ನು ಮಾಡಿಸುವ ಮೂಲಕ ಭಕ್ತರನ್ನು ಮದ್ಯಪಾನ ಸೇರಿ ನಾನಾ ವ್ಯಸನಗಳಿಂದ ಮುಕ್ತರನ್ನಾಗಿಸಬೇಕು. ಇದಲ್ಲದೆ ಜನರು ಸಹ ಸ್ವಯಂ ಜಾಗೃತರಾಗುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಬದ್ಧರಾಗೋಣ ಎಂದು ಮನವಿ ಮಾಡಿದರು. ಈ ವೇಳೆ, ಈ ಸಂದರ್ಭದಲ್ಲಿ ಶರಣು ಬಿ ಗದ್ದುಗೆ ಅವರು ಉಪಸ್ಥಿತರಿದ್ದರು.

ತಿಂಥಣಿ ಮಠಕ್ಕೆ ಭೇಟಿ ನೀಡಿ ಶ್ರೀ ಶ್ರೀ ಶ್ರೀ ಪರಮಪೂಜ್ಯ ಸಿದ್ದರಾಮಾನಂದಪುರಿ ಸ್ವಾಮಿಜೀ ಅವರ ಆಶೀರ್ವಾದವನ್ನು ಪಡೆದು ಸನ್ಮಾನವ ಸ್ವೀಕರಿಸಿ ಮಠಮಾನ್ಯಗಳಿಗೆ ಭೇಟಿ ನೀಡುವ ಭಕ್ತರಿಗೆ ಶ್ರೀಗಳು ಆಣೆಪ್ರಮಾಣವನ್ನು ಮಾಡಿಸುವ ಮೂಲಕ ಭಕ್ತರನ್ನು ಮದ್ಯಪಾನ ಸೇರಿ ನಾನಾ ವ್ಯಸನಗಳಿಂದ ಮುಕ್ತರನ್ನಾಗಿಸಬೇಕು. ಇದಲ್ಲದೆ ಜನರು ಸಹ ಸ್ವಯಂ ಜಾಗೃತರಾಗುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಬದ್ಧರಾಗೋಣ ಎಂದು ಮನವಿ ಮಾಡಿದರು.

ಗ್ರಾಮಸ್ಥರಿಂದ ಸನ್ಮಾನ: ಪ್ರಪ್ರಥಮ ಬಾರಿಗೆ ತವರೂ ಕ್ಷೇತ್ರ ಶಹಾಪುರಕ್ಕೆ ಭೇಟಿ ನೀಡಿದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಅವರನ್ನು ಪರಸನಹಳ್ಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಅಭಿಮಾನಿಗಳು ಸನ್ಮಾನಿಸಿದರು. ಬಳಿಕ ಪರಸನಹಳ್ಳಿ ಗ್ರಾಮದಲ್ಲಿ ಮದ್ಯಪಾನವನ್ನು ಸಂಪೂರ್ಣ ನಿಷೇಧ ಮಾಡುವುದಾಗಿ ಪ್ರಮಾಣ ಮಾಡಿದರು. ಅಲ್ಲದೇ ಸ್ಥಳೀಯ ಮುಖಂಡರುಗಳಾದ ನೀಲಕಂಠ ಬಡೀಗೆರ, ಬಾಬುರಾವ ಭೂತಾಳಿ, ಶಂಕರ ಸಿಂಗೆ, ಮಹಾದೇವ ದಿಗ್ಗಿ, ರಾಯಪ್ಪ ಸಾಲಿಮನಿ ಇನ್ನೂ ಹಿರಿಯ ಮತ್ತು ಯುವ ಮುಖಂಡರು ಹಾಗೂ ಅಭಿಮಾನಿಗಳು ಜೊತೆಗೂಡಿ ಸನ್ಮಾನಿಸಿದರು.

# ಡಾ.ಶಣ್ಮುಖ ಶರ್ಮರಿಂದ 6 ದಿನ ಉಪನ್ಯಾಸ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು. ಅ11:- ಡಾ. ಬ್ರಹ್ಮಶ್ರೀ ಸಮವೇದಂ ಶಣ್ಮುಖ ಶರ್ಮರವರಿಂದ ದೇವೀಮಾಹಾತ್ಮ್ಯಂ(ಚಂಡೀಸಪ್ತಶತಿ)"ಕುರಿತು ಆರು ದಿನಗಳ ಉಪನ್ಯಾಸ ಮಹೋತ್ಸವ ಡಾ. ಬ್ರಹ್ಮಶ್ರೀ ಸಮವೇದಂ ಶಣ್ಮುಖ ಶರ್ಮ ರವರಿಂದ ದೇವೀಮಾಹಾತ್ಮ್ಯಂ (ಚಂಡೀ ಸಪ್ತಶತಿ)"ಕುರಿತು ಆರು ದಿನಗಳ ಉಪನ್ಯಾಸಮಾಲೆಯನ್ನು ನೀಡಲಿದ್ದಾರೆ.

ಡಾ. ಬ್ರಹ್ಮಶ್ರೀ ಸಮವೇದಂ ಶಣ್ಮುಖ ಶರ್ಮರವರು , ವಾಗ್ದೇವಿ ವರಪುತ್ರ",ಸಮನ್ವಯ ಸಾಮ್ರಾಟ್", ಮತ್ತು ಶ್ರೀ ಶಂಕರ ದಿಗ್ವಿ-ಜಯ ಪ್ರವಚನ ಚತುರ " ಅಕ್ಟೋಬರ್ 11ರಿಂದ 16ರವರೆಗೆ ಬೆಂಗಳೂರಿನ ಮಾರತ ಹಳ್ಳಿಯ ನ್ಯೂ ಹೋರೈಸನ್ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ದೇವೀಮಾಹಾತ್ಮ್ಯಂ (ಚಂಡೀ ಸಪ್ತಶತಿ)" ಕುರಿತು ಆರು ದಿನಗಳ ಉಪನ್ಯಾಸಮಾಲೆಯನ್ನು ನೀಡಲಿದ್ದಾರೆ. ಉಪನ್ಯಾಸ ತೆಲುಗು ಭಾಷೆಯಲ್ಲಿ ಇರಲಿದೆ.

ಈ ಉಪನ್ಯಾಸಗಳಲ್ಲಿ ಚಂಡೀ ಪರಾದೇವತೆಯ ದೈವಿಕ ಕೃಪೆ, ಧರ್ಮವನ್ನು ಪೋಷಿಸುವ ಆಧ್ಯಾತ್ಮಿಕ ಶಕ್ತಿ ಎಂಬ ನಿಟ್ಟಿನಲ್ಲಿ ವಿವರಿಸಲ್ಪಡಲಿದೆ. ದೇವೀ ಆರಾಧನೆಯ ಮಹತ್ವ ಮತ್ತು ಶಾಸ್ತ್ರಗಳಲ್ಲಿ ಅಡಕವಾಗಿರುವ ನಿತ್ಯಸತ್ಯದ ಜ್ಞಾನವನ್ನು ಒಳಗೊಂಡ ಆಳವಾದ ತತ್ತ್ವಜ್ಞಾನವನ್ನು ಶ್ರೀಯುತರು ಪ್ರವಚಿಸಲಿದ್ದಾರೆ.

ಕೊನೆಯಲ್ಲಿ ಅಂದರೆ ಅಕ್ಟೋಬರ್ 17ರಂದು "ಶಿವಪದಂ" ಸಂಗೀತ ಕಚೇರಿಯನ್ನು ಕಲೆ?ಮಾಮಣಿ, ನಾದನಿಧಿ ಶ್ರೀ ಬಿ.ವಿ. ಬಾಲಾಸಾಯಿ ಗಾರು ಅವರ ಸಂಗೀತ ನಿರ್ದೇಶನದಲ್ಲಿ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಲಿದೆ. ಈ ಸಂಗೀತ ಸಮಾರಂಭದಲ್ಲಿ ಪ್ರಸಿದ್ಧ ಶಾಸ್ತ್ರೀಯ ಗಾಯಕರು ವಿನಯ ಕಾರ್ತಿಕ್ ರಾಜನ್, ಡಾ. ಎನ್.ಜೆ. ನಂದಿನಿ, ವಿದ್ಯಾ ಕಲ್ಯಾಣರಾಮನ್, ಆರ್.ಪಿ. ಶ್ರವಣ್, ಸಾಯಿ ವಿಗ್ನೇಶ್ ಮತ್ತು ಸರತ್ ಸಂತೋಷ್ ಭಾಗವಹಿಸಲಿದ್ದಾರೆ. ಪ್ರತಿಯೊಂದು ಕೀರ್ತನೆಯ ಆಂತರಾರ್ಥವನ್ನು ಬ್ರಹ್ಮಶ್ರೀ ಶಣ್ಮುಖ ಶರ್ಮ ಗಾರು ವಿವರಣೆ ಮಾಡಲಿದ್ದಾರೆ.

ಬೆಂಗಳೂರಿನ ಋಷಿ ಪೀಠಂ ಸತ್ಸಂಗದ ಸದಸ್ಯರು ಎಲ್ಲ ಭಕ್ತರನ್ನು ಈ ಉಚಿತ ಕಾರ್ಯಕ್ರಮದಲ್ಲಿ ಭಾಗವಹಿಸಲು ಆತ್ಮೀಯವಾಗಿ ಆಹ್ವಾನಿಸುತ್ತಾರೆ.

# ವಿದ್ಯಾರ್ಥಿ ಸಮುದಾಯಕ್ಕೆ ಅರಿವು ಮೂಡಿಸುವುದೇ ಮಂಡಳಿಯ ಗುರಿ: ಶರಣಪ್ಪ ಸಲಾದಪುರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ, ಅಕ್ಟೋಬರ್.11. :-ಸದೃಢ ಭಾರತ ನಿರ್ಮಾಣದಲ್ಲಿ ವಿದ್ಯಾರ್ಥಿಗಳ, ಯುವ ಸಮುದಾಯದ ಪಾತ್ರ ಪ್ರಮುಖವಾಗಿದ್ದು, ಅವರಿಗೆ ಮದ್ಯಪಾನ, ಡ್ರಗ್ಸ್, ಗಾಂಜಾ ಸೇರಿದಂತೆ ನಾನಾ ವ್ಯಸನಗಳಿಂದ ದೂರವಿರಲು ನಿರಂತರವಾಗಿ ಅರಿವು ಮೂಡಿಸುವುದೇ ಮಂಡಳಿ ಗುರಿಯಾಗಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ ಹೇಳಿದರು. ತಾಲೂಕಿನ ಗೋಗಿ ಗ್ರಾಮದ ದರ್ಗಾಕ್ಕೆ ಭೇಟಿ ನೀಡಿ ಧಾರ್ಮಿಕ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಮುಂದಿನ ದಿನಗಳಲ್ಲಿ ಪ್ರತಿ ಹಳ್ಳಿಯೂ ವ್ಯಸನ ಮುಕ್ತವಾಗಬೇಕಾದರೇ ಮೊದಲು ವಿದ್ಯಾರ್ಥಿ-ಯುವ ಸಮುದಾಯವನ್ನು ಎಚ್ಚರಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ನಾವು ಕಾರ್ಯನಿರ್ವಸಲಿದ್ದೇವೆ ಎಂದು ತಿಳಿಸಿದರು. ಹಜರತ್ ಸೈಯದ್ ಇಸ್ಮಾಯಿಲ್ ಹುಸೇನಿ, ಹಜರತ್ ಸೈಯದ್, ಕಲಿಮುಲ್ಲಾ ಹುಸೇನಿ ಸಜ್ಜದಾ, ನಶೀನ್ ದರ್ಗಾ ಹಜರತ್, ಸೈಯದ್ ಚಂದಾ ಹುಸೈನಿ ಗೋಗಿ, ಬಸವರಾಜಪ್ಪ ಗೌಡ ಗೋಗಿ, ಮೋಹನರೆಡ್ಡಿ ಗೋಗಿ ಉಪಸ್ಥಿತರಿದ್ದರು. ಮಂಡಳಿ ಅಧ್ಯಕ್ಷರಾಗಿ ಮೊದಲ ಬಾರಿಗೆ ಶಹಾಪುರಕ್ಕೆ ಆಗಮಿಸಿದ್ದ ಶ್ರೀ ಶರಣಪ್ಪ ಸಲಾದಪೂರಗೆ ಯಾದಗಿರಿ ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟದ ಅಧ್ಯಕ್ಷ ಶ್ರೀ ವಿಶ್ವನಾಥರಡ್ಡಿ ದರ್ಶನಾಪೂರ ಅಭಿನಂದನೆಗಳು ತಿಳಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಉಪಾಧ್ಯಕ್ಷ ಎಂ.ನಾರಾಯಣ, ಸರಕಾರಿ ನೌಕರರು ಸಂಘದ ಗೌರವ ಅಧ್ಯಕ್ಷ ಶಾಂತರಡ್ಡಿ ತುಂಬಗಿ, ಶರಣಗೌಡ ಬಲಟಿಗಿ ಹಾಗೂ ರಾಯಚೂರು ಜಿಲ್ಲೆಯ ರೈತ ಹೋರಾಟಗಾರರು ಇದ್ದರು.

# 5ನೇ ರಾಷ್ಟ್ರೀಯ ಔಷಧ ಜಾಗೃತಿ ಸಪ್ತಾಹ

ಮಲ್ಲಮ್ಮ ನುಡಿ ವಾರ್ತೆ

ತುಮಕೂರು, ಅ.11-ನಗರದ ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ವ್ಯಾಪ್ತಿಯ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಔಷಧಶಾಸ್ತ್ರ ಮತ್ತು ಔಷಧ ಪ್ರತಿರೋಧ ಪರಿಣಾಮ ಮೇಲ್ವಿಚಾರಣಾ ಕೇಂದ್ರ ವಿಭಾಗದ ಸಂಯುಕ್ತಾಶ್ರಯದಲ್ಲಿ ರೋಗಿಗಳ ಸುರಕ್ಷತೆ ಮತ್ತು ಔಷಧಿಗಳಿಂದಾಗುವ ಪರಿಣಾಮದ ಪ್ರತಿಕ್ರಿಯೆಗಳು ಬಗ್ಗೆ ಜಾಗೃತಿ ಮೂಡಿಸುವ 5ನೇ ರಾಷ್ಟ್ರೀಯ ಔಷಧ ಜಾಗೃತಿ ಸಪ್ತಾಹವನ್ನು ಯಶಸ್ವಿಯಾಗಿ ಆಚರಿಸಲಾಯಿತು. ಅಗಲಕೋಟೆಯಲ್ಲಿಯಲ್ಲಿರು ವೈದ್ಯಕೀಯ ಕಾಲೇಜಿನ ಕ್ಯಾಂಪಸ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ಉದ್ಘಾಟಿಸಿದ ಪ್ರಾಂಶುಪಾಲರಾದ ಡಾ. ಎಂ.ಬಿ. ಸಾನಿಕೊಪ್ಪ ಮಾತನಾಡಿ, ರೋಗಿಗಳ ಸುರಕ್ಷತೆ, ತರ್ಕಬದ್ಧವಾಗಿ ಔಷಧಿಗಳನ್ನು ಬಳಕೆ ಮಾಡಬೇಕು ಮತ್ತು ಸಮುದಾಯದಲ್ಲಿ ಔಷಧ ಬಳಕೆಯ ತಪಾಸಣೆಯನ್ನು ಬಲಪಡಿಸುವಲ್ಲಿ ತನ್ನ ಬದ್ಧತೆಯನ್ನು ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ತಂಡ ಮಾಡಬೇಕು ಎಂದು ಕರೆ ನೀಡಿದರು.

# ಬಿಜೆಪಿ ಮುಖಂಡರಿಂದ ಬೆಳೆ ಹಾನಿ ವೀಕ್ಷಣೆ
## ರೈತರ ಸಂಕಷ್ಟ ವಿವರಿಸಿದ ಶಾಸಕ ಪ್ರಭು ಚವ್ಹಾಣ



ಔರಾಧ:ಅ.11:ಭಾರತೀಯ ಜನತಾ ಪಕ್ಷದ ಬೀದರ ಜಿಲ್ಲೆಯ ಮುಖಂಡರು ಅ.11ರಂದು ಬೀದರ ಜಿಲ್ಲೆಯಾದ್ಯಂತ ಸಂಚರಿಸಿ, ಅತೀವೃಷ್ಟಿಯಿಂದ ಉಂಟಾಗಿರುವ ಬೆಳೆ ಹಾನಿಯನ್ನು ವೀಕ್ಷಿಸಿದರು.ಔರಾದ(ಬಿ)ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೌಠಾ(ಬಿ), ರಕ್ಷಾ ಳ,ನಿಟ್ಟೂರ(ಕೆ) ಗ್ರಾಮಗಳಲ್ಲಿ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಬೆಳೆ ಹಾನಿಯ ಬಗ್ಗೆ ವಿವರಣೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ನೇತೃತ್ವದಲ್ಲಿ ಬೆಳೆ ಹಾನಿ ಸಮೀಕ್ಷೆ ನಡೆಯಿತು. ಕೌಠಾ(ಬಿ) ಗ್ರಾಮದಲ್ಲಿ ಟ್ರ್ಯಾಕ್ಟರ್ ಮೂಲಕ ಹಾನಿಯಾದ ಕೃಷಿಭೂಮಿಗಳಿಗೆ ತೆರಳಿ ಹಾನಿಯ ಬಗ್ಗೆ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಬೆಳೆಹಾನಿಯ ಬಗ್ಗೆ ವಿವರಣೆ ನೀಡಿದ ಶಾಸಕರಾದ ಪ್ರಭು ಚವ್ಹಾಣ ಅವರು, ಔರಾದ(ಬಿ) ಕ್ಷೇತ್ರದಲ್ಲೇ ಅತೀ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿದೆ. ಪ್ರತಿಯೊಂದು ಗ್ರಾಮದಲ್ಲಿ ಸಾವಿರಾರು ಎಕರೆಯಷ್ಟು ಬೆಳೆ ಹಾನಿಯಾಗಿದೆ. ಇಲ್ಲಿನ ಬಹುತೇಕ ರೈತರು ಉಪ ಜೀವನಕ್ಕೆ ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ ಸರಿಯಾಗಿ ಬೆಳೆದು ನಿಂತಿದ್ದ ಉದ್ದು, ಹೆಸರು, ಸೋಯಾಬೀನ್, ತೊಗರಿ, ಹತ್ತಿ, ಕಬ್ಬು ಸೇರಿದಂತೆ ಎಲ್ಲ ಬೆಳೆಗಳು ಮುಳುಗಡೆಯಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮಾಹಿತಿ ನೀಡಿದರು.

ನಮ್ಮೂರಿನ ಎಲ್ಲ ಕಡೆಗಳಲ್ಲಿ ಬೆಳೆ ನಷ್ಟವಾಗಿದೆ. ನದಿ ತೀರದಲ್ಲಿ ಅತಿ ಹೆಚ್ಚು ಹಾಳಾಗಿದ್ದು, ಎಲ್ಲ ಹೊಲಗಳು ಸಂಪೂರ್ಣ ಮುಳುಗಡೆಯಾಗಿವೆ. ಮಳೆಗಾಲದ ಆರಂಭದಲ್ಲಿ ಬೆಳೆಗಳು ಎಲ್ಲ ಬೆಳೆಗಳು ಚನ್ನಾಗಿದ್ದವು. ಹಾಗಾಗಿ ಈ ಬಾರಿ ಹೆಚ್ಚಿನ ಲಾಭ ಸಿಗಬಹುದೆಂಬ ನಿರೀಕ್ಷೆ ಹೊಂದಿದ್ದೆವು. ಆದರೆ ಅನಿರೀಕ್ಷಿತವಾಗಿ ಸುರಿದ ಧಾರಾಕಾರ ಮಳೆಗೆ ಎಲ್ಲ ಬೆಳೆಗಳು ಕೊಚ್ಚಿಕೊಂಡು ಹೋಗಿವೆ. ಬೆಳೆ ಕಳೆದುಕೊಂಡ ರೈತರಿಗೆ ಸರ್ಕಾರ ಬೇಗ ಪರಿಹಾರ ಕೊಡಲು ತಾವು ಸಹಕರಿಸಬೇಕು ಎಂದು ಗ್ರಾಮದ ರೈತರೊಬ್ಬರು ಮುಖಂಡರಲ್ಲಿ ಮನವಿ ಮಾಡಿದರು.

ಬಳಿಕ ಬಿಜೆಪಿ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ಮಾತನಾಡಿ, ಅತೀವೃಷ್ಟಿಯಾದ ನಂತರ ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ ವಿಜಯೇಂದ್ರ ಅವರು ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದರಿಂದ ಮುಖ್ಯಮಂತ್ರಿಗಳು ಕಾಟಾಚಾರಕ್ಕಾಗಿ ವೈಮಾನಿಕ ಸಮೀಕ್ಷೆ ನಡೆಸಿ ಹೋಗಿದ್ದಾರೆ. 10 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ತಿಳಿಸುತ್ತಿದ್ದಾರೆ. ಆದರೆ 40 ರಿಂದ 50 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ. ಸರ್ಕಾರ ಪ್ರತಿ ಎಕರೆಗೆ 6-7 ಸಾವಿರ ಮಾತ್ರ ಕೊಡುತ್ತಿದೆ. ಇದು ಯಾವುದಕ್ಕೂ ಸಾಲುವುದಿಲ್ಲ. ಪ್ರತಿ ಎಕರೆಗೆ 25 ಸಾವಿರ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ರಾಜ್ಯಾಧ್ಯಕ್ಷರ ಅಪೇಕ್ಷೆಯಂತೆ ಬಿಜೆಪಿಯ ಎಲ್ಲ ಶಾಸಕರು, ಮಾಜಿ ಶಾಸಕರು, ಮುಖಂಡರು ಹಾಗೂ ಪಕ್ಷದ ಪ್ರಮುಖರು ಮತ್ತೊಮ್ಮೆ ಬೆಳೆ ಹಾನಿ ಸಮೀಕ್ಷೆ ನಡೆಸುತ್ತಿದ್ದು, ಬರುವ ದಿನಗಳಲ್ಲಿ ಸರ್ಕಾರವು ಮಹಾರಾಷ್ಟ್ರ ಮಾದರಿಯಲ್ಲಿ ರೈತರಿಗೆ ಹೆಚ್ಚಿನ ಪರಿಹಾರ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ಇಲ್ಲವಾದಲ್ಲಿ ಪಕ್ಷದ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ಮತ್ತೊಂದು ಬೃಹತ್ ಹೋರಾಟ ನಡೆಸಬೇಕಾಗುತ್ತದೆ ಎಂದರು.

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಮಾತನಾಡಿ, ಅತೀವೃಷ್ಟಿಯಿಂದ ಈ ಬಾರಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿದೆ. ಮುಖ್ಯಮಂತ್ರಿಗಳು ಕಾಟಾಚಾರಕ್ಕಾಗಿ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆಂದು ಅನ್ನಿಸುತ್ತಿದೆ. ಬೆಳೆ ಕಳೆದುಕೊಂಡ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ರೈತರಿಗೆ ಸಾಕಷ್ಟು ಅನ್ಯಾಯವಾಗಿದೆ. ಸರ್ಕಾರ ರೈತರಿಗತೆ ಸರಿಯಾಗಿ ಸಹಕರಿಸುತ್ತಿಲ್ಲವಾದ್ದರಿಂದ ರಾಜ್ಯಾಧ್ಯಕ್ಷರ ಮಾರ್ಗದರ್ಶನದಂತೆ ಬೆಳೆ ಹಾನಿ ವೀಕ್ಷಣೆ ನಡೆಸುತ್ತಿದ್ದೇವೆ. ರೈತರಿಗೆ ನ್ಯಾಯ ಸಿಗುವವರೆಗೆ ಸುಮ್ಮನಿರುವುದಿಲ್ಲ ಎಂದು ಹೇಳಿದರು.

ಬಸವಕಲ್ಯಾಣ ಶಾಸಕ ಶರಣು ಸಲಗರ, ಹುಮನಾಬಾದ ಶಾಸಕ ಸಿದ್ದು ಪಾಟೀಲ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಮಾಜಿ ವಿಧಾನ ಪರಿಷತ್ ಸದಸ್ಯರಾದ ರಘುನಾಥರಾವ ಮಲ್ಕಾಪೂರೆ, ಮುಖಂಡರಾದ ಈಶ್ವರಸಿಂಗ್ ಠಾಕೂರ್, ಬಾಬು ವಾಲಿ, ಗುರುನಾಥ ಜ್ಯಾಂತಿಕರ್, ರಾಜಶೇಖರ ನಾಗಮೂರ್ತಿ, ರಾಮಶೆಟ್ಟಿ ಪನ್ನಾಳೆ, ಕಿರಣ ಪಾಟೀಲ, ಮಾಧವ ಹೊಸೂರೆ, ಪೀರಪ್ಪ ಔರಾದೆ, ವಸಂತ ಬಿರದಾರ, ಧೊಂಡಿಬಾ ನರೋ-ಟೆ, ಶಿವರಾಜ ಅಲ್ಮಾಜೆ, ಶಶಿಧರ ಹೊಸಳ್ಳಿ, ಖಂಡೋಬಾ ಕಂಗಟೆ, ಗುಂಡಪ್ಪ ಬಿರಾದಾರ, ಶಿವಕುಮಾರ ಪಾಂಚಾಳ, ಶಿವಾಜಿರಾವ ಕಾಳೆ, ಶ್ರೀಮಂತ ಪಾಟೀಲ, ಬಾಬುರಾವ ತೋರ್ಣವಾಡಿ, ಯೋಗೇಶ ಪಾಟೀಲ, ಶ್ರೀನಿವಾಸ ಖೂಬಾ, ಬಂಟಿ ರಾಂಪೂರೆ, ಪ್ರಕಾಶ ಜೀರ್ಗೆ, ರಾಜಪ್ಪ ಸೋರಾಳೆ, ಸಚಿನ್ ರಾಠೋಡ, ಸಂಜು ಮುರ್ಕೆ, ಪ್ರದೀಪ ಚೊಂಡಿಮುಖೇಡ, ಅಂಕುಶ ವಾಡೇಕರ್, ದಯಾನಂದ ಘೂಳೆ, ಕೇರಬಾ ಪವಾರ, ರವೀಂದ್ರ ರೆಡ್ಡಿ, ಬಸವರಾಜ ಶಳ್ಕೆ, ಜಗದೀಶ ಪಾಟೀಲ, ಲೋಕೇಶ ಬಿರಾದಾರ, ಸಂದೀಪ ಪಾಟೀಲ, ಬಾಲಾಜಿ ಠಾಕೂರ ಸೇರಿದಂತೆ ಇತರರಿದ್ದರು.

ಬೀದರ ಜಿಲ್ಲೆಯ ಚಾಂಬೋಳ, ಸಾಯಿಗಾಂವ, ಹುಲಸೂರ, ಬಸವಕಲ್ಯಾಣ, ಕನಕಟ್ಟಾ, ಸೇರಿದಂತೆ ವಿವಿಧೆಡೆ ಬೆಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಲಾಯಿತು.

# ರೋಗಿಯ ಯೋಗಕ್ಷೇಮ ವೈದ್ಯನ ಮೇಲೆ ಅವಲಂಬಿತ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.11-ರೋಗಿಯ ಯೋಗೇಕ್ಷೇಮ ವೈದ್ಯನ ನಡವಳಿಕೆ, ಬದ್ದತೆ ಮತ್ತು ಸಂವಹನ ಮುಂತಾದ ಆದರ್ಶ ಗುಣಗಳ ಮೇಲೆ ಅವಲಂಬಿತವಾಗಿದೆ

ಎಂದು ನವದೆಹಲಿಯ

ಭಾರತೀಯ ವೈದ್ಯ ಪದ್ಧತಿ ರಾಷ್ಟ್ರೀಯ ಆಯೋಗದ ಬೋರ್ಡ ಆಪ್ ಆಯುರ್ವೇದದ ಅಧ್ಯಕ್ಷ ಡಾ.ಸಿದ್ದಲಿಂಗೇಶ ಕುದರಿ ಹೇಳಿದರು.

ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಬಿ.ವಿ.ವಿ.ಎಸ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ವತಿಯಿಂದ ಶುಕ್ರವಾರ ಬಿ.ವಿ.ವಿ.ಸಂಘದ ನೂತನ ಸಭಾಭವನದಲ್ಲಿ ನಡೆದ ಸಮಾವರ್ತನ-2025 ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಶಿಕ್ಷಣವನ್ನು ಕೇವಲ ಕಾಲೇಜಿನಲ್ಲಿ ಪಡೆದರಷ್ಟೆ ಸಾಲದು, ಜೀವನದಲ್ಲಿ ಕಲಿಯುದೆಲ್ಲವೂ ಶಿಕ್ಷಣವೇ ಆಗಿದೆ, ಹಾಗಾಗಿ ವೈದ್ಯಕಿಯ ವೃತ್ತಿಯಲ್ಲಿ ನಿರಂತರ ಕಲಿಕೆ ಅಗತ್ಯ, ವೈದ್ಯರ ಯಶಸ್ಸು ಇರುವುದು ಅವರ ವೃತ್ತಿಯನ್ನು ಗೌರವಿಸುವುದು, ಪ್ರೀತಿಸುವುದು, ನಗುಮುಖದಿಂದ ಸೇವೆ ಮಾಡುವುದು ಮತ್ತು ತೃಪ್ತಿಭಾವ ಹೊಂದುವುದರಲ್ಲಿ ಅಡಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ

ಯನ್ನು ವಹಿಸಿದ್ದ ಸಂಘದ ಕಾರ್ಯದರ್ಶಿ ಮಹೇಶ ಅಥಣಿ ಮಾತನಾಡಿ, ವೈದ್ಯ ವೃತ್ತಿ ಅತ್ಯಂತ ಶ್ರೇಷ್ಠವಾದ ವೃತ್ತಿಯಾಗಿದ್ದು, ರೋಗಿಗಳೇ ನಿಮ್ಮ ಶಿಕ್ಷಕರು, ನಿಮ್ಮ ಬುದ್ದಿವಂತಿಕೆಗಿಂತ ಹೃದಯವಂತಿಕೆ ಬಹಳ ಮುಖ್ಯ ಮತ್ತು ವೈದ್ಯಕೀಯ ಕೇತ್ರದಲ್ಲಿ ತಪ್ಪು ಮಾಡಲು ಅವಕಾಶವೇ ಇಲ್ಲ, ರೋಗಿಗಳ ಸೇವೆಯನ್ನು ಮಾನವಿಯ ದೃಷ್ಟಿಯಿಂದ ನೀಡಬೇಕು ಎಂದರು.

ಪ್ರಭಾರಿ ಪ್ರಾಚಾರ್ಯ ಡಾ.ಎವ್.ಎಸ್.ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು ಸಂಘದ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 87 ಸ್ನಾತಕ ಮತ್ತು ಸ್ನಾತಕೋತ್ತರ ಪದವೀಧರರಿಗೆ ಪದವಿ ಪ್ರದಾನ

ಮಾಡಲಾಯಿತು.

ಡಾ.ವೀಣಾ ನಂದೆನ್ನವರ, ಡಾ.ಚೈತ್ರಾ ನಡುವಿನಮನಿ, ಡಾ.ಪುನೀತ್ ಘಾಠಗೆ ಮತ್ತು ಡಾ.ಪ್ರಮೋದ ಎನ್.ನಿರೂಪಿಸಿದರು. ಆರ್.ದೇಶಪಾಂಡೆ ಸ್ವಾಗತಿಸಿದರು. ಡಾ.ಜಿ.ಎಸ್.ಕುಲಕರ್ಣಿ ಪದವಿಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು, ಡಾ.ಆರ್.ಆಯ್. ಜಂಬಗಿ ವಂದಿಸಿದರು,

# ಶವಾಗಾರದಲ್ಲೇ ಅತ್ಯಾಚಾರ

ಮಲ್ಲಮ್ಮ ನುಡಿ ವಾರ್ತೆ

ಭೋಪಾಲ್:ಅ.11: ವ್ಯಕ್ತಿಯೋರ್ವ ಆಸ್ಪತ್ರೆಯ ಶವಾಗಾರದಲ್ಲೇ ಮಹಿಳೆಯ ಶವದ ಮೇಲೆ ಅತ್ಯಾಚಾರ ಮಾಡಿರುವ ಪೈಶಾಚಿಕ ಘಟನೆ ಮಧ್ಯಪ್ರದೇಶದಲ್ಲಿ ವರದಿಯಾಗಿದೆ.

ಮಧ್ಯಪ್ರದೇಶದ ಬುರ್ಹಾನ್‌ಪುರ ಜಿಲ್ಲೆಯ 25 ವರ್ಷದ ವ್ಯಕ್ತಿಯೊಬ್ಬರು ಶವಾಗಾರದಲ್ಲಿ ಮಹಿಳೆಯ ಮೃತದೇಹದ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ.

ಈ ಘಟನೆ ಕಳೆದ ವರ್ಷ ಏಪ್ರಿಲ್‌ನಲ್ಲಿ ನಡೆದಿದ್ದರೂ ಈ ಘೋರ ಕೃತ್ಯದ ಸಿಸಿಟಿವಿ ದೃಶ್ಯಾವಳಿಗಳು ಇತ್ತೀಚೆಗೆ ಪತ್ತೆಯಾಗಿದ್ದು, ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.ಮೂಲಗಳ ಪ್ರಕಾರ, ಮಹಿಳೆಯ ಶವವನ್ನು ಆಸ್ಪತ್ರೆಯ ಶವಾಗಾರದೊಳಗೆ ಸ್ಟ್ರೆಚರ್ ಮೇಲೆ ಇರಿಸಲಾಗಿತ್ತು. ಈ ವೇಳೆ ಆಸ್ಪತ್ರೆಯೊಳಗೆ ನುಗ್ಗಿದ ದುಷ್ಕರ್ಮಿ ಮಹಿಳೆಯ ಶವವನ್ನು ಎಳೆದುಕೊಂಡು ಹೋಗಿ ಆ ಹೆಣದ ಜೊತೆ ಲೈಂಗಿಕ ಕ್ರಿಯೆ ನಡೆಸಿದ್ದಾರೆ. ಆರೋಪಿಯನ್ನು ಭೌರಘಾಟ್ ಪ್ರದೇಶದ ತಂಗಿಯಾಪತ್ ಗ್ರಾಮದ 25 ವರ್ಷದ ನೀಲೇಶ್ ಭಿಲಾಲ ಎಂದು ಗುರುತಿಸಲಾಗಿದ್ದು, ದುಷ್ಕರ್ಮಿಯ ಕೃತ್ಯ ವ್ಯಾಪಕ ವೈರಲ್ ಆಗುತ್ತಿದೆ.ಮೂಲಗಳ ಪ್ರಕಾರ ಮಹಿಳೆಯ ಶವವನ್ನು ಮರಣೋತ್ತರ ಪರೀಕ್ಷೆ ಇಡಲಾಗಿತ್ತು. ಇದೇ ಸಂದರ್ಭದಲ್ಲಿ ಆಸ್ಪತ್ರೆಗೆ ನುಗ್ಗಿದ ದುಷ್ಕರ್ಮಿ ಮಹಿಳೆಯ ಶವವನ್ನು ಸಿಸಿಟಿವಿ ಕ್ಯಾಮೆರಾಗೆ ಕಾಣದಂತೆ ಎಳೆದೊಯ್ದಿದ್ದಾನೆ. ಬಳಿಕ ಶವದ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ಮತ್ತೆ ಅದೇ ಸ್ಟ್ರೆಚರ್ ಮೇಲೆ ಮಲಗಿಸಿ ಪರಾರಿಯಾಗಿದ್ದಾನೆ.

ಈ ವರ್ಷ ಅಕ್ಟೋಬರ್‌ನಲ್ಲಿ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ ನಂತರ ವೈದ್ಯಕೀಯ ಅಧಿಕಾರಿಯೊಬ್ಬರು. ಡಾ. ಆದಿಯಾ ದಾವರ್ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇದರ ನಂತರ, ನಿಲೇಶ್ ಭಿಲಾಲ ಎಂಬ ಯುವಕನನ್ನು ಬಂಧಿಸಲಾಗಿದೆ.

# ಪಾಕ್ ಪೊಲೀಸ್ ತರಬೇತಿ ಕೇಂದ್ರದ ಮೇಲೆ
## ಆತ್ಮಾಹುತಿ ದಾಳಿ : 7 ಪೊಲೀಸರು, 6 ಉಗ್ರರು ಸಾವು



ಮಲ್ಲಮ್ಮ ನುಡಿ ವಾರ್ತೆ

ಇಸ್ಲಮಾಬಾದ್:ಅ.11: ಉಗ್ರರು ಪಾಕಿಸ್ತಾನದ ಖೈಬರ್ ಪಖ್ತುನ್ಖ್ವಾ ಪ್ರಾಂತ್ಯದ ಪೊಲೀಸ್ ತರಬೇತಿ ಕೇಂದ್ರದ ಗೇಟ್‌ಗೆ ಸ್ಫೋಟಕಗಳನ್ನು ತುಂಬಿದ್ದ ಟ್ರಕ್ ಡಿಕ್ಕಿ ಹೊಡೆಸಿ ಸ್ಫೋಟಿಸಿದ್ದಾರೆ.

ಶುಕ್ರವಾರ ತಡರಾತ್ರಿ ಈ ದಾಳಿ ನಡೆದಿದ್ದು, ಇದಾದ ಬಳಿಕ ಐದು ಗಂಟೆಗಳ ಕಾಲ ಉಗ್ರರು ಮತ್ತು ಪೊಲೀಸರ ನಡುವೆ ಗುಂಡಿನ ದಾಳಿ ನಡೆದಿದೆ. ಗುಂಡಿನ ಚಕಮಕಿಯಲ್ಲಿ 6 ಭಯೋತ್ಪಾದಕರು ಹಾಗೂ 7 ಪೊಲೀಸ್ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಈ ದಾಳಿಯಲ್ಲಿ 13 ಮಂದಿ ಪೊಲೀಸರು ಗಾಯಗೊಂಡಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ದಾಳಿಯ ಸಮಯದಲ್ಲಿ ಸುಮಾರು 200 ತರಬೇತಿ ನಿರತ ಪೊಲೀಸರು, ಬೋಧಕರು ಮತ್ತು ಸಿಬ್ಬಂದಿ ತರಬೇತಿ ಕೇಂದ್ರದಲ್ಲಿದ್ದರು. ಎಲ್ಲಾ ತರಬೇತಿ ನಿರತ ಅಭ್ಯರ್ಥಿಗಳು ಮತ್ತು ಸಿಬ್ಬಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಪಾಕ್ ಸೇನಾ ಸಿಬ್ಬಂದಿ ಬಗ್ಗೆ ಅಧಿಕಾರಿಗಳು

ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭದ್ರತಾ ಸಿಬ್ಬಂದಿ ಉಗ್ರರ ಬಳಿ ಇದ್ದ ಆತ್ಮಹತ್ಯಾ ಜಾಕೆಟ್‌ಗಳು, ಸ್ಫೋಟಕಗಳು, ಆಧುನಿಕ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ಅಡಗಿರುವ ಉಗ್ರರಿಗಾಗಿ ಭದ್ರತಾ ಸಿಬ್ಬಂದಿ ಹೆಚ್ಚಿನ ಶೋಧ ನಡೆಸುತ್ತಿದ್ದಾರೆ.

# ಸಯ್ಯೆದ್ ಮುಹಮ್ಮದ ಅಲಿ ಅಲ್ ಹುಸ್ಸೇನಿ ಚಾಣಕ್ಯ ಪ್ರಶಸ್ತಿ ಪ್ರದಾನ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಅ.11:ಖಾಜಾಬಂದನಾವಾಜ್ ಯೂನಿವರ್ಸಿಟಿಯ ಕುಲಾಧಿಪತಿ ಸಯ್ಯದ್ ಮುಹಮ್ಮದ ಅಲಿ ಅಲ್ ಹುಸ್ಸೇನಿ ಅವರನ್ನು ಪ್ರಜಾಪ್ರತಿನಿಧಿ ಸಮಿತಿಯ ಭಾರತ (ಕಖಅಖ) ಉನ್ನತ ಶಿಕ್ಷಣ ನಿರ್ವಹಣೆಯಲ್ಲಿ ಶ್ರೇಷ್ಠತೆಗೆ ಕಖಅಖ ಚಾಣಕ್ಯ ಪ್ರಶಸ್ತಿ 2025 ನೀಡಿ ಗೌರವಿಸಲಾಗಿದೆ.

ಈ ಪ್ರಶಸ್ತಿಯನ್ನು 26 ಸೆಪ್ಟೆಂಬರ್ 2025 ರಂದು ಗೋವಾ ನಲ್ಲಿ ನಡೆದ 19ನೇ ಕಖಅಖ ಗ್ಲೋಬಲ್ ಕಾಂಕ್ಲೇವ್ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು. ಅವರ ದೃಷ್ಟಿಪೂರ್ವಕ ನಾಯಕತ್ವ ಮತ್ತು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಪೂರ್ವ ಕೊಡುಗೆಗಳನ್ನು ನೀಡಿದಕ್ಕಾಗಿ ಈ ಪ್ರಶಸ್ತಿ ಲಭಿಸಿದೆ.

ಜನಾಬ ಹುಸ್ಸೇನಿ ಅವರ ಮಾರ್ಗದರ್ಶನದಲ್ಲಿ, ಕೆಬಿಎನ ವಿವಿ ಶೈಕ್ಷಣಿಕ ಶ್ರೇಷ್ಠತೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಹಕಾರಾತ್ಮಕ ಯೋಜನೆಗಳಲ್ಲಿ ಪ್ರಮುಖ ಸಾಧನೆಗಳನ್ನು ಗಳಿಸಿ, ನವೀನತೆ, ಸಂಶೋಧನೆ ಮತ್ತು ಅಧ್ಯಯನದ ಕೇಂದ್ರವಾಗಿ ಪರಿಣಮಿಸಿದೆ.ಅಲ್ಲದೇ ಗುಣಮಟ್ಟದ ಶಿಕ್ಷಣ, ಸಂಶೋಧನೆ ಮತ್ತು ಸಮುದಾಯ ಸೇವೆಯಲ್ಲಿ ಪ್ರಗತಿಶೀಲ ಕೇಂದ್ರವಾಗಿ ಬೆಳೆಯಿತು.

ಈ ಪ್ರಶಸ್ತಿ ಭಾಜನರದ ನಂತರ ಸಯ್ಯದ್ ಮುಹಮ್ಮದ ಅಲಿ ಅಲ್ ಹುಸ್ಸೇನಿ ಅವರನ್ನು ಔಣಣ-ಟಠಠಇ ಮಾಗಜಿನ್ "ಪಿಲ್ಲರ್ಸ್ ಆಫ್ ವಿಕ್ಸಿತ್ ಭಾರತ್" ವಿಶೇಷ ಆವೃತ್ತಿಯಲ್ಲಿ ಗುರುತಿಸಿದೆ. ಈ ಫೀಚರ್ ವಿವಿಧ ಕ್ಷೇತ್ರಗಳ ಗಣ್ಯ ವ್ಯಕ್ತಿತ್ವಗಳನ್ನು ಹೈಲೈಟ್ ಮಾಡುತ್ತದೆ. ಅವರು ಶ್ರೇಷ್ಠತೆ, ನಾಯಕತ್ವ ಮತ್ತು ಸಮಾಜದ ಮೇಲೆ ಪರಿವರ್ತನಾ ಪರಿಣಾಮವನ್ನು ತೋರಿಸಿದ್ದಾರೆ. ಹುಸೇನಿಯವರ ಆಯ್ಕೆಯು ಉನ್ನತ ಶಿಕ್ಷಣದಲ್ಲಿ ನವೀನ ನಾಯಕತ್ವ, ಶೈಕ್ಷಣಿಕ ಶ್ರೇಷ್ಠತೆಯನ್ನು ಉತ್ತೇಜಿಸುವ ಅಪಾರ ಪ್ರಯತ್ನಗಳು ಮತ್ತು ಭವಿಷ್ಯದಂತೆ ಸಿದ್ಧವಾಗಿರುವ ಸಂಸ್ಥೆಗಳನ್ನು ಬೆಳೆಸುವ ನಿಶ್ಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

# ನಮ್ಮೊಂದಿಗೆ ಗಡಿ
## ಹಂಚಿಕೊಂಡಿರುವ ನೆರೆ ರಾಷ್ಟ್ರ

ನವದೆಹಲಿ:ಅ.11:ಅಫ್ಘಾನಿಸ್ತಾನವನ್ನು "ಪಕ್ಕದಲ್ಲೇ ಇರುವ ನೆರೆ ದೇಶ" ಎಂದು ಅಫ್ಘಾನಿಸ್ತಾನ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಅವರೊಂದಿಗೆ ಜಂಟಿ ಹೇಳಿಕೆಯಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಉಲ್ಲೇಖಿಸಿದ್ದಾರೆ.

ವಖಾನ್ ಕಾರಿಡಾರ್ ಮೂಲಕ ಭಾರತ ಮತ್ತು ಅಫ್ಘಾನಿಸ್ತಾನ 106 ಕಿಮೀ ಕಿರಿದಾದ ಭೂ ಗಡಿಯನ್ನು ಹಂಚಿಕೊಂಡಿವೆ. ಇದು ಚೀನಿಯರು ಕಣ್ಣಿಟ್ಟಿರುವ ಕಾರ್ಯತಂತ್ರದ ಪ್ರಮುಖ ಭಾಗವಾಗಿದೆ. ಪಾಕಿಸ್ತಾನ ಕಾನೂನುಬಾಹಿರವಾಗಿ ನಿಯಂತ್ರಿಸುವ ಕಾಶ್ಮೀರದ ಭೂ ಪ್ರದೇಶದಿಂದ ಈ ವಖಾನ್ ಕಾರಿಡಾರ್ ಅಫ್ಘಾನಿಸ್ತಾನವನ್ನು ಭಾರತದೊಂದಿಗೆ ಸಂಪರ್ಕಿಸುತ್ತದೆ.

"ನೆರೆ ರಾಷ್ಟ್ರ" ಎಂಬ ಉಲ್ಲೇಖ ಪಿಒಕೆ ಕುರಿತಂತೆ ಪಾಕ್‌ಗೆ ತೀಕ್ಷ್ಣವಾದ ಉತ್ತರವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

"ಪಕ್ಕದ ರಾಷ್ಟ್ರವಾಗಿ ಮತ್ತು ಅಫ್ಘಾನ್ ಜನರ ಹಿತೈಷಿಯಾಗಿ, ಭಾರತ ನಿಮ್ಮ ಅಭಿವೃದ್ಧಿ ಮತ್ತು ಪ್ರಗತಿಯಲ್ಲಿ ಆಳವಾದ ಆಸಕ್ತಿಯನ್ನು ಹೊಂದಿದೆ" ಎಂದು ಸಚಿವರು ಕಾಬೂಲ್‌ನಲ್ಲಿರುವ ಮಿಷನ್‌ನ್ನು ರಾಯಭಾರ ಕಚೇರಿಯಾಗಿ ಮೇಲ್ದರ್ಜೆಗೇರಿಸುವುದು ಸೇರಿದಂತೆ ಅಫ್ಘಾನಿಸ್ತಾನದೊಂದಿಗೆ ಪೂರ್ಣ ರಾಜತಾಂತ್ರಿಕ ಸಂಬಂಧಗಳನ್ನು ಪುನಃಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

ಭಾರತ ಮತ್ತು ಅಫ್ಘಾನಿಸ್ತಾನ ಎರಡೂ 'ಗಡಿಯಾಚೆಗಿನ ಭಯೋತ್ಪಾದನೆಯ ಸಮಸ್ಯೆಯನ್ನು ಎದುರಿಸುತ್ತಿವೆ' ಎಂದು ಅವರು ಇದೇ ಸಭೆಯಲ್ಲಿ ಹೇಳಿದ್ದಾರೆ. ಅಫ್ಘಾನಿಸ್ತಾನದಲ್ಲಿ ಪಾಕ್ ನಡೆಸುತ್ತಿರುವ ಮಿಲಿಟರಿ ಕಾರ್ಯಾಚರಣೆಯ ಹಿನ್ನೆಲೆಯಲ್ಲಿ ಸಚಿವ ಜೈಶಂಕರ್ ಅವರ ಹೇಳಿಕೆ ಬಂದಿದೆ. ಅಫ್ಘಾನ್ ಬೆಂಬಲಿತ ಭಯೋತ್ಪಾದಕರು ತನ್ನ ಭೂಪ್ರದೇಶದ ಮೇಲೆ ದಾಳಿ ಮಾಡಿದ್ದಾರೆ ಎಂದು ಪಾಕ್ ಆರೋಪಿಸಿತ್ತು.

ದೆಹಲಿಯಲ್ಲಿ ಜೈಶಂಕರ್-ಮುತ್ತಕಿ ಸಭೆ ನಡೆಯುವುದಕ್ಕೂ ಕೆಲವೇ ಗಂಟೆಗಳ ಮೊದಲು ಪಾಕ್ ವಾಯುಪಡೆ ಕಾಬೂಲ್‌ನಲ್ಲಿ ದಾಳಿ ನಡೆಸಿರುವುದು ವರದಿಯಾಗಿತ್ತು.


ಭಾರತದ ಹಿತಾಸಕ್ತಿಗಳ ವಿರುದ್ಧ ಅಫ್ಘಾನಿಸ್ತಾನ ನೆಲ ಬಳಕೆಯಾಗಲ್ಲ, ಆಟ ಆಡಬೇಡಿ: ಪಾಕಿಸ್ತಾನಕ್ಕೆ ಅಫ್ಘಾನ್ ವಿದೇಶಾಂಗ ಸಚಿವ ನೇರ ಎಚ್ಚರಿಕೆ!

"ಕಾಬೂಲ್‌ನಲ್ಲಿ ಸ್ಫೋಟದ ಶಬ್ದ ಕೇಳಿಸಿತು. ಆದರೆ ಯಾರೂ ಚಿಂತಿಸಬಾರದು. ಎಲ್ಲವೂ ಚೆನ್ನಾಗಿದೆ, ಮತ್ತು ಇಲ್ಲಿಯವರೆಗೆ ಯಾವುದೇ ಹಾನಿಯ ವರದಿ ಬಂದಿಲ್ಲ" ಎಂದು ತಾಲಿಬಾನ್ ವಕ್ತಾರರು ತಿಳಿಸಿದ್ದಾರೆ.

ಏತನ್ಮಧ್ಯೆ, ಭಾರತದ ಮೇಲಿನ ಭಯೋತ್ಪಾದಕ ದಾಳಿ ಅಥವಾ ಭಾರತ ವಿರೋಧಿ ಚಟುವಟಿಕೆಗಳಿಗೆ ಅಫ್ಘಾನ್ ಪ್ರದೇಶವನ್ನು ಎಂದಿಗೂ ಬಳಸಲು ಬಿಡುವುದಿಲ್ಲ ಎಂಬ ತನ್ನ ಸರ್ಕಾರದ ಉದ್ದೇಶವನ್ನು ಮುತ್ತಕಿ ಒತ್ತಿ ಹೇಳಿದ್ದಾರೆ.

ಆಗಸ್ಟ್‌ನಲ್ಲಿ 2,000ಕ್ಕೂ ಹೆಚ್ಚು ಜನರನ್ನು ಬಲಿತೆಗೆದು-ಕೊಂಡ ಭೂಕಂಪ ಮತ್ತು ಭಾರತ ಕೋವಿಡ್ ಲಸಿಕೆಗಳನ್ನು ಕಳುಹಿಸಿದ ಸಾಂಕ್ರಾಮಿಕ ರೋಗ ಸೇರಿದಂತೆ ನಿರ್ಣಾಯಕ ಸಮಯಗಳಲ್ಲಿ ಅಫ್ಘಾನಿಸ್ತಾನಕ್ಕೆ ಭಾರತ ನೀಡಿದ ಬೆಂಬಲವನ್ನು

# ಶರಣರೆಡ್ಡಿ ನಾರಾಯಣರೆಡ್ಡಿ ಕನಕಟಕರ್ ಇನ್ನಿಲ್ಲ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್, ಇಲ್ಲಿನ ಶಿವಪುರ ಬಡಾವಣೆಯ ಉದ್ಯಮಿ ಹಾಗೂ ರೆಡ್ಡಿ ಸಮಾಜದ ಮುಖಂಡರು ಶರಣರೆಡ್ಡಿ ತಂದೆ ನಾರಾಯಣರೆಡ್ಡಿ ಕನಕಟಕರ್, ಇವರು ಶನಿವಾರ ನಿಧನರಾಗಿದ್ದಾರೆ, ಇವರ ಅಂತ್ಯ ಕ್ರಿಯೆ ಭಾನುವಾರ ಮಧ್ಯಾನ 1 ಗಂಟೆಗೆ ಕಲಬುರ್ಗಿ ರಸ್ತೆ ಮುಸ್ತಾಪೂರ, ಅವರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

# ಗುಂಡನಕಲ್‌ನಲ್ಲಿ ಮರ್ಯಾದೆ ಹತ್ಯೆ ಪ್ರಕರಣ:
## ಗಲ್ಲು ಶಿಕ್ಷೆ ಎತ್ತಿ ಹಿಡಿದ ಉಚ್ಚ ನ್ಯಾಯಾಲಯ

ಕಲಬುರ್ಗಿ.ಅ.10:ದಲಿತಯುವಕನಿಗೆ ಪ್ರೀತಿಸಿ ಮದುವೆಯಾಗಿದ್ದಾಳೆಂಬ ಕಾರಣಕ್ಕೆ ಒಡಹುಟ್ಟಿದ ತಮ್ಮ ಸಹೋದರಿಗೆ ಬೆಂಕಿ ಹಚ್ಚಿ ಸಜೀವವಾಗಿ ಸುಟ್ಟು ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ಯುವತಿಯ ಇಬ್ಬರು ಸಹೋದರರಿಗೆ ಗಲ್ಲು ಶಿಕ್ಷೆ ವಿಧಿಸಿದ ಆದೇಶವನ್ನು ಎತ್ತಿ ಹಿಡಿದಿದೆ.

ನೆರೆಯ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ್ ತಾಲ್ಲೂಕಿನ ಗುಂಡಕನಲ್ ಗ್ರಾಮದ ಇಬ್ರಾಹಿಂಸಾಬ್ (31) ಮತ್ತು ಆತನ ತಮ್ಮ ಲಾರಿ ಚಾಲಕ ಅಕ್ಬರ್ (28) ಅವರೇ ಗಲ್ಲು ಶಿಕ್ಷೆಗೆ ಒಳಗಾದ ಆರೋಪಿಗಳಾಗಿದ್ದಾರೆ.

ಇಬ್ಬರು ಆರೋಪಿಗಳು ತಮ್ಮ ಸಹೋದರಿ ಬಾನುಬೇಗಂಳು ದಲಿತಯುವಕ ಸೈಬಣ್ಣ ಎಂಬಾತನಿಗೆ ಪ್ರೀತಿಸಿ ಮದುವೆಯಾಗಿದ್ದಾಳೆ ಎಂಬ ಕಾರಣಕ್ಕೆ ಕೋಪಗೊಂಡು ಬಾನುಬೇಗಂ ಒಂಭತ್ತು ತಿಂಗಳು ತುಂಬುಗರ್ಭಿಣಿಯಾಗಿದ್ದ ಸಂದರ್ಭದಲ್ಲಿ ಅವಳಿಗೆ ಬೆಂಕಿ

ಹಚ್ಚಿ ಸಜೀವವಾಗಿ ಸುಟ್ಟುಹಾಕಿದ್ದರು. ಕಳೆದ 2017ರಲ್ಲಿ ನಡೆದ ಪ್ರಕರಣದ

ಕುರಿತು ಬಸವನಬಾಗೇವಾಡಿ ಠಾಣೆಯ ಪೋಲಿಸರು ತನಿಖೆಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ವಿಜಯಪುರ ಜಿಲ್ಲಾ ನ್ಯಾಯಾಲಯವು ಇಬ್ಬರು ಸಹೋದರರಿಗೆ ಮರಣದಂಡನೆ ಶಿಕ್ಷೆ ಹಾಗೂ ಜೀವಾವಧಿ ಶಿಕ್ಷೆ ವಿಧಿಸಿತ್ತು. ಇದೀಗ ಕಲಬುರ್ಗಿ ಹೈಕೋರ್ಟ್ ದ್ವಿಸದಸ್ಯ ಪೀಠ ಈ ತೀರ್ಪು ನ್ನು ಎತ್ತಿ ಹಿಡಿದು ಇಬ್ಬರು ಸಹೋದರರಿಗೆ

ಮರಣದಂಡನೆ ಮತ್ತು ಕೊಲೆಯಾದ ಬಾನು ಬೇಗಂ ಅವರ ತಾಯಿ ಹಾಗೂ ಕುಟುಂಬದ ಐವರು ಸದಸ್ಯರಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ ಎಂದು ಸರ್ಕಾರಿ ಅಭಿಯೋಜಕ

ಸಿದ್ದಲಿಂಗ ಪಾಟೀಲ್ ಅವರು ತಿಳಿಸಿದ್ದಾರೆ.

# ರಾಜ್ಯ ಮಟ್ಟದ ಕೃಷಿ ಪ್ರಶಸ್ತಿಗಳ ಪ್ರದಾನ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಅ.11:ಹೆಬ್ಬಾಳದ ಪಶುವೈದ್ಯಕೀಯ ಕಾಲೇಜು ಆವರಣದಲ್ಲಿ ಅಲುಮ್ನಿ ಅಸೋಸಿಯೇಷನ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವತಿಯಿಂದ 2024-25 ನೇ ಸಾಲಿನ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು.

ರಾಜ್ಯ ಮಟ್ಟದ ಕೃಷಿ ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ನಿವೃತ್ತ ಪೊಲೀಸ್ ಮಹಾ ನಿರ್ದೇಶಕರು ಮತ್ತು ಐಜಿಪಿ ಶಂಕರ್ ಬಿದರಿ ಅವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ದೇಶದ ಬೆನ್ನಲುಬಾಗಿರುವ ರೈತರು ಆರ್ಥಿಕವಾಗಿ ಅಭಿವೃದ್ಧಿಗೊಂಡಾಗ ಮಾತ್ರ ದೇಶ ಸರ್ವಾಂಗೀಣವಾಗಿ ಮುಂದುವರೆಯಲು ಸಾಧ್ಯ. ನಮ್ಮ ಭಾರತ ದೇಶವು ಕೃಷಿ ಪ್ರಧಾನ

ರಾಷ್ಟ್ರವಾಗಿದ್ದು, ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ರೈತರು ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆಯನ್ನು ಮಾಡುತ್ತಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಡಾ॥ ಆರ್. ದ್ವಾರಕಿನಾಥ್ ಕೃಷಿ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಯನ್ನು ಡಾ॥ ಸುಧಾ ವಿ. ಮಂಕಣಿ. ಹೊಂಬಾಳೆ ಸಂಹಿತ ಹರಿಣಿಕುಮಾರ್ ಕೃಷಿ ಮಾಧ್ಯಮ ಮಿತ್ರ ಪ್ರಶಸ್ತಿಯನ್ನು ಅಂಶಿ ಪ್ರಸನ್ನಕುಮಾರ್. ಶ್ರೀ ಎಸ್. ಎಂ. ನಾರಾಯಣ ರೆಡ್ಡಿ ಕೃಷಿ ಪದವೀಧರ ರೈತ ಪ್ರಶಸ್ತಿಯನ್ನು ಎಂ.ಟಿ. ರಮೇಶ್. ಡಾ॥ ಬಿ.ಕೆ.

ಕುಮಾರಸ್ವಾಮಿ ಪ್ರಸಿದ್ಧಿ ಕೃಷಿ ಪದವೀಧರ ಉದ್ಯಮಿ ಪ್ರಶಸಿಯನ್ನು ಮಹದೇವಪ್ರಸಾದ್ ಎನ್. ಶ್ರೀ ಸಕಲವಾರ ರಾಮಯ್ಯರೆಡ್ಡಿ

ಅತ್ಯುತ್ತಮ ರೈತ ಪ್ರಶಸ್ತಿಯನ್ನು ಬಿ. ಶ್ರೀಕಾಂತ್. ಶ್ರೀ ಗಿರಿಯಪ್ಪ ಗೌಡ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಬಿ. ರಾಮಲಿಂಗಯ್ಯ. ಹಾಗೂ ಕರ್ನಾಟಕ ಬ್ಯಾಂಕ್ ಅತ್ಯುತ್ತಮ ಬ್ಯಾಂಕಿಂಗ್ ಕೃಷಿಕ ಪ್ರಶಸ್ತಿಯನ್ನು ಮಲ್ಲಿನಾಥ ಕೊಳ್ಳೂರು ಒಟ್ಟು 7 ಜನರಿಗೆ ಕೃಷಿ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಯಿತು.

. ಸಮಾರಂಭದಲ್ಲಿ ನಿವೃತ್ತ ಪ್ರದಾನ ಕಾರ್ಯದರ್ಶಿಗಳಾದ ಎನ್.ಸಿ.ಮುನಿಯಪ್ಪ, ಕೃಷಿವಿದ್ಯಾಲಯದ ಅಲುಮ್ನಿ ಅಸೋಸಿಯೇಷನ್‌ನ ಅಧ್ಯಕ್ಷರಾದ ಡಾ.ಹೆಚ್.ಎಲ್. ಹರೀಶ್. ಕೃಷಿ ಪ್ರಶಸ್ತಿ ಸಮಿತಿಯ ಅಧ್ಯಕ್ಷರಾದ ಡಾ॥ ನಿರಂಜನ್

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.